ಉಳ್ಳಾಲ ವಾಣಿ
ವಾರ್ಷಿಕ ಚಂದಾದಾರಾಗಿರಿ
ಒಂದು ವರ್ಷ ಪೂರ್ತಿ ಪತ್ರಿಕೆ ಮನೆಗೆ ತಲುಪಿಸಲು
₹250 ಪಾವತಿಸಿರಿ

ಮಂಗಳೂರು ಜುಲೈ 28 – ಆಗಸ್ಟ್ 15: 2026 ಸಂಪುಟ 2, ಸಂಚಿಕೆ 22, ಪುಟಗಳು–8 RNI:KNKAN/26/A0422 www.ullalavani.com ullalavani@gmail.com ₹10

# ಉಳ್ಳಾಲ ವಾಣಿ
ಕನ್ನಡ ಪತ್ರಿಕೆ
ಕಡಲ ಮಗಲ್

ಸುದ್ದಿ, ಪತ್ರಿಕೆ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿರಿ
ಉಳ್ಳಾಲ ವಾಣಿ
ಅಪ್ಪಚ್ಚಿ ಕಾಂಪ್ಲೆಕ್ಸ್, ಯೆನೆಪೋಯ ಆಸ್ಪತ್ರೆ ಹತ್ತಿರ, ಕುತ್ತಾರುಪದವು
9972528110

ಪುಟ 2 ಸ್ವಾತಂತ್ರ್ಯ ಹೋರಾಟದ ತ್ಯಾಗ, ಬಲಿದಾನ ಮಾಡಿದ ವೀರರನ್ನು ಸ್ಮರಿಸಬೇಕು: ಪ್ರಸಾದ್ ಕುಮಾರ್ ರೈ
ಪುಟ 4 ಹಿರಾ ಕಾಲೇಜು ಸಭಾಂಗಣದಲ್ಲಿ ಪ್ರತಿಭಾ ಪುರಸ್ಕಾರ, ಪ್ರಮಾಣ ಪತ್ರ ವಿತರಣಾ ಸಮಾರಂಭ
ಪುಟ 5 ಉತ್ಸವಗಳು ವ್ಯಕ್ತಿಯ ಮನಸ್ಸಿನ ಸಾಂಸ್ಕೃತಿಕ ಪ್ರಜ್ಞೆಯನ್ನು ಹೆಚ್ಚಿಸುತ್ತದೆ: ರವಿ ರೈ ಪಜೀರು
ಪುಟ 7 ರಕ್ತ ಬೇಕಾದಾಗ ರೋಗಿ ಅಲೆದಾಡಬೇಕೇ? ಜಿಲ್ಲಾಡಳಿತದ ಜವಾಬ್ದಾರಿ ಎಲ್ಲಿದೆ? Mr. ಜಿಲ್ಲಾಧಿಕಾರಿ

# ತಿರಂಗಾ ಯಾತ್ರೆ ರಾಷ್ಟ್ರಭಕ್ತಿಯ ಭಾವನೆಯನ್ನು ಬಲಪಡಿಸುತ್ತಿದೆ: ಮೋನಪ್ಪ ಭಂಡಾರಿ



**ತೊಕ್ಕೊಟ್ಟು:** ದೇಶದ ಸಾರ್ವಭೌಮತೆ, ಏಕತೆ ಮತ್ತು ಸಮಗ್ರತೆಯನ್ನು ಸಾರುವ ತ್ರಿವರ್ಣ ಧ್ವಜವು ತ್ಯಾಗ, ಶಾಂತಿ ಹಾಗೂ ಪ್ರಗತಿಯ ಪ್ರತೀಕವಾಗಿದೆ. ರಾಷ್ಟ್ರಧ್ವಜದ ಗೌರವವನ್ನು ಮತ್ತಷ್ಟು ಎತ್ತರಕ್ಕೇರಿಸುವ ಉದ್ದೇಶದಿಂದ ಪ್ರಧಾನಿ ನರೇಂದ್ರ ಮೋದಿಯವರ ಪ್ರೇರಣೆಯಿಂದ ದೇಶಾದ್ಯಂತ ನಡೆಯುತ್ತಿರುವ 'ಹರ್ ಘರ್ ತಿರಂಗಾ' ಹಾಗೂ ವಿಧಾನಸಭಾ ಕ್ಷೇತ್ರವಾರು ತಿರಂಗಾ ಯಾತ್ರೆ ರಾಷ್ಟ್ರಭಕ್ತಿಯ ಭಾವನೆಯನ್ನು ಬಲಪಡಿಸುತ್ತಿದೆ ಎಂದು ಮಾಜಿ ವಿಧಾನಪರಿಷತ್ ಸದಸ್ಯ ಮೋನಪ್ಪ ಭಂಡಾರಿ ಹೇಳಿದರು.

ಎಂಭತ್ತನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಮಂಗಳೂರು ವಿಧಾನಸಭಾ ಕ್ಷೇತ್ರ ತಿರಂಗಾ ಯಾತ್ರಾ ಸಮಿತಿ ವತಿಯಿಂದ ಮಂಗಳವಾರ ತೊಕ್ಕೊಟ್ಟು ಓವರ್‌ಬ್ರಿಡ್ಜ್‌ನಿಂದ ತೊಕ್ಕೊಟ್ಟು ಕೇಂದ್ರ ಬಸ್ ನಿಲ್ದಾಣದವರೆಗೆ ನಡೆದ ಬೃಹತ್ ತಿರಂಗಾ ಯಾತ್ರೆಯನ್ನುದ್ದೇಶಿಸಿ ಅವರು ಮಾತನಾಡಿದರು.



ದೇಶದ ಸ್ವಾತಂತ್ರ್ಯಕ್ಕಾಗಿ ಅಸಂಖ್ಯಾತ ಹೋರಾಟಗಾರರು ತಮ್ಮ ಬದುಕನ್ನೇ ತ್ಯಾಗ ಮಾಡಿದ್ದಾರೆ. ಪೋರ್ಚುಗೀಸರ ವಿರುದ್ಧ ಕೆಚ್ಚೆದೆಯಿಂದ ಹೋರಾಡಿದ ಉಳ್ಳಾಲದ ವೀರರಾಣಿ ಅಬ್ಬಕ್ಕಳ ಸಾಹಸ ಮತ್ತು ದೇಶಪ್ರೇಮ ಇಂದಿಗೂ ಎಲ್ಲರಿಗೂ ಸ್ಫೂರ್ತಿಯಾಗಿದೆ. ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ದೇಶವು ಅಭಿವೃದ್ಧಿಯ ಪಥದಲ್ಲಿ ಮುನ್ನಡೆಯುತ್ತಿದ್ದು, ಅವರ ದಿಟ್ಟ ನಿರ್ಧಾರಗಳಿಗೆ ಜನತೆ ಬೆಂಬಲ ನೀಡಬೇಕು ಎಂದು ಕರೆ ನೀಡಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಮಾತನಾಡಿ, ಆ.13ರಂದು ಪ್ರತಿಯೊಬ್ಬರೂ ತಮ್ಮ ಮನೆಗಳಲ್ಲಿ ತಿರಂಗಾ ಧ್ವಜ ಹಾರಿಸುವ ಮೂಲಕ ಸ್ವಾತಂತ್ರ್ಯೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಬೇಕು ಎಂಬ ಸಂದೇಶದೊಂದಿಗೆ ಮಂಗಳೂರು ವಿಧಾನಸಭಾ ಕ್ಷೇತ್ರದಲ್ಲಿ ತಿರಂಗಾ ಯಾತ್ರೆ ಆಯೋಜಿಸಲಾಗಿದೆ. 'ವಿಕಸಿತ ಭಾರತ'ದ ಸಂಕಲ್ಪವನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಇಂತಹ ಕಾರ್ಯಕ್ರಮಗಳು ಮಹತ್ವದ ಹೆಜ್ಜೆಯಾಗಿವೆ ಎಂದರು.

- ಪೋರ್ಚುಗೀಸರ ವಿರುದ್ಧ ಕೆಚ್ಚೆದೆಯಿಂದ ಹೋರಾಡಿದ ಉಳ್ಳಾಲದ ವೀರರಾಣಿ ಅಬ್ಬಕ್ಕಳ ಸಾಹಸ ಮತ್ತು ದೇಶಪ್ರೇಮ ಇಂದಿಗೂ ಎಲ್ಲರಿಗೂ ಸ್ಫೂರ್ತಿಯಾಗಿದೆ.
- ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ದೇಶವು ಅಭಿವೃದ್ಧಿಯ ಪಥದಲ್ಲಿ ಮುನ್ನಡೆಯುತ್ತಿದ್ದು, ಅವರ ದಿಟ್ಟ ನಿರ್ಧಾರಗಳಿಗೆ ಜನತೆ ಬೆಂಬಲ ನೀಡಬೇಕು

ಬಿಜೆಪಿ ಮಂಗಳೂರು ಮಂಡಲ ಅಧ್ಯಕ್ಷ ಜಗದೀಶ ಆಳ್ವ ಕುವೆತ್ತಬೈಲು ಮಾತನಾಡಿದರು. ಕಾರ್ಗಿಲ್ ಯೋಧ ಪ್ರವೀಣ್ ಶೆಟ್ಟಿ ಪಿಲಾರು ಅವರು ತಿರಂಗಾ ಯಾತ್ರೆಗೆ ಚಾಲನೆ ನೀಡಿದರು.

ಬಿಜೆಪಿ ಜಿಲ್ಲಾ ಉಪಾಧ್ಯಕ್ಷರಾದ ಕೆ. ರವೀಂದ್ರ ಶೆಟ್ಟಿ ಉಳಿದೊಟ್ಟು, ಪೂಜಾ ಪೈ, ಜಿಲ್ಲಾ ಕಾರ್ಯದರ್ಶಿ ಧನಲಕ್ಷ್ಮಿ ಗಟ್ಟಿ, ಜಿಲ್ಲಾ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ಮಹೇಶ್ ಜೋಗಿ, ಯುವಮೋರ್ಚಾ ಜಿಲ್ಲಾ ಉಪಾಧ್ಯಕ್ಷ ನಿಶಾನ್ ಪೂಜಾರಿ, ಕ್ಷೇತ್ರಾಧ್ಯಕ್ಷ ಮುರಳಿ ಕೊಣಾಜೆ, ಸೋಮೇಶ್ವರ ಪುರಸಭೆ ಉಪಾಧ್ಯಕ್ಷ ರವಿಶಂಕರ ಸೋಮೇಶ್ವರ, ಮಹಿಳಾ ಮೋರ್ಚಾ ಮಂಡಲ ಅಧ್ಯಕ್ಷೆ ಮಾಧವಿ ಉಳ್ಳಾಲ್, ಕೋಟೆಕಾರು ಪಟ್ಟಣ ಪಂಚಾಯತ್ ಅಧ್ಯಕ್ಷೆ ದಿವ್ಯಾ ಶೆಟ್ಟಿ, ಬಿಜೆಪಿ ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಹರೀಶ್ ಅಂಬ್ಲಮೊಗರು, ಮುಖಂಡರಾದ ಚಂದ್ರಶೇಖರ ಉಚ್ಚಿಲ್, ರವಿ ರೈ ಪಜೀರು, ಯಶವಂತ ಅಮೀನ್, ಜಯಶ್ರೀ ಕರ್ಕೇರ ಸೇರಿದಂತೆ ಹಲವು ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಬಿಜೆಪಿ ಮಂಡಲ ಪ್ರಧಾನ ಕಾರ್ಯದರ್ಶಿ ಮೋಹನ್ ರಾಜ್ ಕೆ.ಆರ್. ಸ್ವಾಗತಿಸಿ, ದಯಾನಂದ ತೊಕ್ಕೊಟ್ಟು ವಂದಿಸಿದರು.

# ಉಳ್ಳಾಲ ತಾಲೂಕು ಕಚೇರಿಗೆ ಲೋಕಾಯುಕ್ತ ಭೇಟಿ: ಕಡತಗಳ ಪರಿಶೀಲನೆ, ಅಧಿಕಾರಿಗಳು, ಸಿಬ್ಬಂದಿ ವಿಚಾರಣೆ

**ಉಳ್ಳಾಲ:** ಉಳ್ಳಾಲ ತಾಲೂಕು ಕಚೇರಿಯ ವಿರುದ್ಧ ಸಾರ್ವಜನಿಕರಿಂದ ಹಲವು ದೂರುಗಳು ಬಂದಿರುವ ಹಿನ್ನೆಲೆಯಲ್ಲಿ ಲೋಕಾಯುಕ್ತ ಅಧಿಕಾರಿಗಳು ಬುಧವಾರ ತಾಲೂಕು ಕಚೇರಿಗೆ ಭೇಟಿ ನೀಡಿ ಕಡತಗಳು ಹಾಗೂ ಆಡಳಿತಾತ್ಮಕ ವಿಚಾರಗಳ ಕುರಿತು ಪರಿಶೀಲನೆ ನಡೆಸಿದರು. ಲೋಕಾಯುಕ್ತ ಅಧಿಕಾರಿ ಭಾರತಿ ಅವರ ನೇತೃತ್ವದಲ್ಲಿ ನಡೆದ ಪರಿಶೀಲನೆಯಲ್ಲಿ ಕಚೇರಿಯಲ್ಲಿ ಹಲವು ಸಮಯಗಳಿಂದ ವಿಲೇವಾರಿಯಾಗದೆ ಬಾಕಿ ಉಳಿದಿರುವ ಕಡತಗಳು, ಸಾರ್ವಜನಿಕರು ಸರತಿ ಸಾಲಿನಲ್ಲಿ ನಿಲ್ಲಬೇಕಾದ ಪರಿಸ್ಥಿತಿ, ಕಚೇರಿಯಲ್ಲಿನ ಮೂಲಭೂತ ಸೌಕರ್ಯಗಳ ಕೊರತೆ ಹಾಗೂ ಸಿಬ್ಬಂದಿ ಕೊರತೆ ಸೇರಿದಂತೆ ವಿವಿಧ ವಿಚಾರಗಳ ಕುರಿತು ಮಾಹಿತಿ ಸಂಗ್ರಹಿಸಲಾಯಿತು.



ಬಗರ್‌ಹುಕುಂ ಅಡಿಯಲ್ಲಿ ಮಂಜೂರಾಗದ ಜಾಗಗಳ ವಿವರ, ಸರ್ಕಾರಿ ಜಾಗಗಳು ಖಾಸಗಿ ಪಾಲಾಗಿರುವ ಕುರಿತು ಬಂದಿರುವ ದೂರುಗಳು ಹಾಗೂ ಸಂಬಂಧಿತ ದಾಖಲೆಗಳ ಬಗ್ಗೆಯೂ ಅಧಿಕಾರಿಗಳು ಮಾಹಿತಿ ಪಡೆದುಕೊಂಡರು. ತಾಲೂಕು ಕಚೇರಿಯ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ವಿಚಾರಣೆಗೊಳಪಡಿಸಿ, ಸಂಬಂಧಿತ ಕಡತಗಳು ಮತ್ತು ದಾಖಲೆಗಳನ್ನು ಪರಿಶೀಲಿಸಲಾಯಿತು. ಬೆಳಗ್ಗೆ 11 ಗಂಟೆಯಿಂದ ತಡರಾತ್ರಿವರೆಗೂ ಅಧಿಕಾರಿಗಳು ಹಾಗೂ ಸಿಬ್ಬಂದಿ ಕಚೇರಿಯಲ್ಲಿ ಹಾಜರಿದ್ದು, ಲೋಕಾಯುಕ್ತ ಅಧಿಕಾರಿಗಳ ವಿಚಾರಣೆಗೆ ಸಹಕರಿಸಿದರು. ಉಳ್ಳಾಲ ತಾಲೂಕು ಕಚೇರಿಯ ಕಾರ್ಯವೈಖರಿ ಕುರಿತು ಹಲವು ದೂರುಗಳು ಬಂದಿರುವ ಹಿನ್ನೆಲೆಯಲ್ಲಿ ವಾಸ್ತವಾಂಶಗಳನ್ನು ಪರಿಶೀಲಿಸಿ ಮಾಹಿತಿ ಪಡೆದುಕೊಳ್ಳುವ ಉದ್ದೇಶದಿಂದ ಈ ಭೇಟಿ ನಡೆದಿದೆ ಎಂದು ತಿಳಿದುಬಂದಿದೆ.

> ಬಗರ್‌ಹುಕುಂ ಅಡಿಯಲ್ಲಿ ಮಂಜೂರಾಗದ ಜಾಗಗಳ ವಿವರ, ಸರ್ಕಾರಿ ಜಾಗಗಳು ಖಾಸಗಿ ಪಾಲಾಗಿರುವ ಕುರಿತು ಬಂದಿರುವ ದೂರುಗಳು ಹಾಗೂ ಸಂಬಂಧಿತ ದಾಖಲೆಗಳ ಬಗ್ಗೆಯೂ ಅಧಿಕಾರಿಗಳು ಮಾಹಿತಿ ಪಡೆದುಕೊಂಡರು.

# 3 ವರ್ಷಗಳ ಪಯಣ: ಕಷ್ಟಗಳ ನಡುವೆ ಜನರ ಧ್ವನಿಯಾಗಿ ಬೆಳೆದ




ಪತ್ರಿಕೆಗಳು ಸಂಕಷ್ಟದ ದಿನಗಳನ್ನು ಎದುರಿಸುತ್ತಿದ್ದ ಸಂದರ್ಭದಲ್ಲಿ ಆರಂಭವಾದ 'ಉಳ್ಳಾಲವಾಣಿ' ಇದೀಗ ಯಶಸ್ವಿಯಾಗಿ ಮೂರನೇ ವರ್ಷಕ್ಕೆ ಕಾಲಿಡುತ್ತಿದೆ. ಪತ್ರಿಕೆಯ ಮೊದಲ ಸಂಚಿಕೆಯನ್ನು ಹೊರತರುವ ಪ್ರಯತ್ನವೇ ಒಂದು ಸವಾಲಿನ ಪಯಣವಾಗಿತ್ತು. ಬೆಂಗಳೂರಿನಲ್ಲಿ ಮುದ್ರಣಗೊಂಡ ಮೊದಲ ಸಂಚಿಕೆ ಮಂಗಳೂರಿಗೆ ತಲುಪುವ ವೇಳೆಗೆ ತಡರಾತ್ರಿಯಾಗಿತ್ತು. ಮರುದಿನ ರಾತ್ರಿ ಇಡೀ ಕುಳಿತು ಪತ್ರಿಕೆಯ ಪುಟಗಳನ್ನು ಜೋಡಿಸಿ, ಅಂತಿಮ ರೂಪ ನೀಡಲಾಗಿತ್ತು.

2024ರ ಆಗಸ್ಟ್ 15ರಂದು ತೊಕ್ಕೊಟ್ಟಿನಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಅಂದಿನ ಮಾನ್ಯ ಸಚಿವರಾದ ಶ್ರೀ ಯು.ಟಿ. ಖಾದರ್ ಅವರು ಧ್ವಜಾರೋಹಣ ನೆರವೇರಿಸಿದ ಬಳಿಕ 'ಉಳ್ಳಾಲವಾಣಿ' ಪತ್ರಿಕೆಯನ್ನು ಲೋಕಾರ್ಪಣೆಗೊಳಿಸಿದರು. ತಹಸೀಲ್ದಾರ್, ಪೊಲೀಸ್ ಎಸಿಪಿ, ಉಳ್ಳಾಲ ಠಾಣಾಧಿಕಾರಿ ಸೇರಿದಂತೆ ಗಣ್ಯರ ಉಪಸ್ಥಿತಿಯಲ್ಲಿ ಪತ್ರಿಕೆಯ ಅಧಿಕೃತ ಪಯಣಕ್ಕೆ ಚಾಲನೆ ದೊರೆಯಿತು.

ಆರಂಭಿಕ ಒಂದೂವರೆ ವರ್ಷಗಳ ಕಾಲ 15 ದಿನಗಳಿಗೊಮ್ಮೆ ಮುದ್ರಣಗೊಂಡ 'ಉಳ್ಳಾಲವಾಣಿ', ಆರ್‌ಎನ್‌ಐ ಅನುಮೋದನೆ ಪಡೆದ ಬಳಿಕ 19 ದಿನಗಳಿಗೊಮ್ಮೆ ನಿಯಮಿತವಾಗಿ ಪ್ರಕಟವಾಗುತ್ತಿದೆ. ಆರಂಭದಿಂದಲೂ ಹಲವು ಸವಾಲುಗಳನ್ನು ಎದುರಿಸುತ್ತಾ, ಜನಪರ ವಿಚಾರಗಳಿಗೆ ಆದ್ಯತೆ ನೀಡಿ, ನ್ಯಾಯದ ಪರ ಧ್ವನಿ ಎತ್ತುವ ಮೂಲಕ ಸಮಾಜದ ವಿವಿಧ ಸಮಸ್ಯೆಗಳಿಗೆ ಸ್ಪಂದಿಸುವ ಪ್ರಯತ್ನವನ್ನು ಪತ್ರಿಕೆ ನಿರಂತರವಾಗಿ ಮಾಡುತ್ತಿದೆ. ಮೂರು ವರ್ಷಗಳ ಈ ಪಯಣದಲ್ಲಿ 'ಉಳ್ಳಾಲವಾಣಿ' ಹಲವು ಜನಪರ ಹಾಗೂ ಫಲಪ್ರದ ಕಾರ್ಯಗಳಿಗೆ ಸಾಕ್ಷಿಯಾಗಿದೆ. ಸಾರ್ವಜನಿಕ ಸಮಸ್ಯೆಗಳನ್ನು ಬೆಳಕಿಗೆ ತಂದು ಸಂಬಂಧಪಟ್ಟವರ ಗಮನ ಸೆಳೆಯುವ ಮೂಲಕ ಅನೇಕ ವಿಚಾರಗಳಲ್ಲಿ ಸ್ಪಂದನೆ ದೊರಕುವಂತಾಗಿದೆ. ಈ ಕಾರ್ಯಗಳಿಗೆ ಜನರಿಂದ ದೊರೆತ ಪ್ರೀತಿ, ವಿಶ್ವಾಸ ಮತ್ತು ಆಶೀರ್ವಾದವೇ ನಮ್ಮ ಸಂಸ್ಥೆಯ ದೊಡ್ಡ ಶಕ್ತಿಯಾಗಿದೆ. ಈ ಪಯಣದಲ್ಲಿ ನಮ್ಮೊಂದಿಗೆ ನಿಂತು ಸಹಕರಿಸಿದ ಎಲ್ಲಾ ಜಾಹೀರಾತುದಾರರು, ಓದುಗರು, ಚಂದಾದಾರರು ಹಾಗೂ ಹಿತೈಷಿಗಳಿಗೆ ಅನಂತ ಧನ್ಯವಾದಗಳು. ಪತ್ರಿಕೆಯ ಬೆಳವಣಿಗೆಯಲ್ಲಿ ಜಾಹೀರಾತುದಾರರ ಸಹಕಾರ ಅತ್ಯಂತ ಮಹತ್ವದ್ದಾಗಿದೆ. 'ಉಳ್ಳಾಲವಾಣಿ'ಯಲ್ಲಿ ಪ್ರಕಟವಾದ ಜಾಹೀರಾತುಗಳಿಗೆ ನಿರಂತರವಾಗಿ ಉತ್ತಮ ಸ್ಪಂದನೆ ದೊರಕುತ್ತಿರುವುದು ನಮ್ಮ ಮೇಲೆ ಇಟ್ಟಿರುವ ವಿಶ್ವಾಸಕ್ಕೆ ಸಾಕ್ಷಿಯಾಗಿದೆ.

ಮುದ್ರಣ ಮಾಧ್ಯಮದ ಜೊತೆಗೆ ಡಿಜಿಟಲ್ ಕ್ಷೇತ್ರದಲ್ಲಿಯೂ 'ಉಳ್ಳಾಲವಾಣಿ' ತನ್ನದೇ ಆದ ಸ್ಥಾನವನ್ನು ನಿರ್ಮಿಸಿಕೊಂಡಿದೆ. ಯೂಟ್ಯೂಬ್ ಚಾನೆಲ್, ಇನ್‌ಸ್ಟಾಗ್ರಾಂ ಹಾಗೂ ಫೇಸ್‌ಬುಕ್ ಮೂಲಕ ಉಳ್ಳಾಲ ಹಾಗೂ ಸುತ್ತಮುತ್ತಲಿನ ಸುದ್ದಿಗಳನ್ನು ಹೆಚ್ಚಿನ ಸಂಖ್ಯೆಯ ಜನರಿಗೆ ತಲುಪಿಸುವ ಕಾರ್ಯ ನಿರಂತರವಾಗಿ ನಡೆಯುತ್ತಿದೆ.

ವಿಶೇಷವಾಗಿ ಉಳ್ಳಾಲವಾಣಿ ಇನ್‌ಸ್ಟಾಗ್ರಾಂ ಪುಟವು 15,000ಕ್ಕೂ ಅಧಿಕ ಫಾಲೋವರ್ಸ್‌ಗಳನ್ನು ಹೊಂದಿದ್ದು, ತಿಂಗಳಿಗೆ ಸುಮಾರು 9.5 ಮಿಲಿಯನ್ ವೀಕ್ಷಣೆಗಳನ್ನು ಪಡೆಯುತ್ತಿದೆ. ಫೇಸ್‌ಬುಕ್‌ನಲ್ಲಿಯೂ 35,000ಕ್ಕೂ ಅಧಿಕ ಫಾಲೋವರ್ಸ್‌ಗಳನ್ನು ಹೊಂದಿದ್ದು, ಡಿಜಿಟಲ್ ಮಾಧ್ಯಮದಲ್ಲಿ ತನ್ನದೇ ಆದ ಪ್ರೇಕ್ಷಕ ಬಳಗವನ್ನು ರೂಪಿಸಿಕೊಂಡಿದೆ. ಮುದ್ರಣ ಮತ್ತು ಡಿಜಿಟಲ್ ಮಾಧ್ಯಮ ಎರಡನ್ನೂ ಸಮನ್ವಯಗೊಳಿಸಿಕೊಂಡು ಜನರಿಗೆ ವೇಗವಾಗಿ ಹಾಗೂ ಪರಿಣಾಮಕಾರಿಯಾಗಿ ಮಾಹಿತಿ ತಲುಪಿಸುವ ಕಾರ್ಯವನ್ನು 'ಉಳ್ಳಾಲವಾಣಿ' ಮುಂದುವರಿಸುತ್ತಿದೆ. ತಾಲೂಕಿನ ಏಕೈಕ ಪತ್ರಿಕೆಯಾಗಿ ಮುಂದಿನ ದಿನಗಳಲ್ಲಿಯೂ ಮತ್ತಷ್ಟು ಬೆಳವಣಿಗೆ ಸಾಧಿಸುವ ಗುರಿಯನ್ನು ಸಂಸ್ಥೆ ಹೊಂದಿದೆ. ಮೂರು ವರ್ಷಗಳ ಈ ಪಯಣ ಕೇವಲ ಒಂದು ಪತ್ರಿಕೆಯ ಪಯಣವಲ್ಲ; ಇದು ಜನರ ಸಮಸ್ಯೆಗಳಿಗೆ ಧ್ವನಿಯಾದ, ಜನರ ವಿಶ್ವಾಸವನ್ನು ಗಳಿಸಿದ ಮತ್ತು ಜನರ ಆಶೀರ್ವಾದದಿಂದ ಬೆಳೆದ ಒಂದು ಮಾಧ್ಯಮ ಸಂಸ್ಥೆಯ ಪಯಣ.

↘ 2ನೇ ಪುಟಕ್ಕೆ

- ಉಳ್ಳಾಲವಾಣಿ ಇನ್‌ಸ್ಟಾಗ್ರಾಂ ಪುಟವು 15,000ಕ್ಕೂ ಅಧಿಕ ಫಾಲೋವರ್ಸ್‌ಗಳನ್ನು ಹೊಂದಿದ್ದು, ತಿಂಗಳಿಗೆ ಸುಮಾರು 9.5 ಮಿಲಿಯನ್ ವೀಕ್ಷಣೆಗಳನ್ನು ಪಡೆಯುತ್ತಿದೆ.
- ಫೇಸ್‌ಬುಕ್‌ನಲ್ಲಿಯೂ 35,000ಕ್ಕೂ ಅಧಿಕ ಫಾಲೋವರ್ಸ್‌ಗಳನ್ನು ಹೊಂದಿದ್ದು, ಡಿಜಿಟಲ್ ಮಾಧ್ಯಮದಲ್ಲಿ ತನ್ನದೇ ಆದ ಪ್ರೇಕ್ಷಕ ಬಳಗವನ್ನು ರೂಪಿಸಿಕೊಂಡಿದೆ.



### ನಮ್ಮ ಸೇವೆಗಳು

'ಉಳ್ಳಾಲವಾಣಿ'ಯ ವತಿಯಿಂದ ನಿಗದಿತ ದರದಲ್ಲಿ ವಿವಿಧ ಮಾಧ್ಯಮ ಹಾಗೂ ಕಾರ್ಯಕ್ರಮ ಸೇವೆಗಳು ಲಭ್ಯವಿವೆ: ಫೋಟೋಗ್ರಫಿ, ವಿಡಿಯೋಗ್ರಫಿ, ಜಾಹೀರಾತು ವಿನ್ಯಾಸ ಮತ್ತು ತಯಾರಿಕೆ, ಪತ್ರಿಕೆ ಹಾಗೂ ಡಿಜಿಟಲ್ ಮಾಧ್ಯಮದಲ್ಲಿ ಜಾಹೀರಾತು ಪ್ರಕಟಣೆ, ಕಾರ್ಯಕ್ರಮ ನಿರ್ವಹಣೆ (Event Management), ವೀಡಿಯೋ ಹಾಗೂ ಡಿಜಿಟಲ್ ಪ್ರಚಾರ, ಕರೋಕೆ ಕ್ಲಬ್ ಸೇರಿದಂತೆ ವಿವಿಧ ಮಾಧ್ಯಮ ಸೇವೆಗಳು, ಹೆಚ್ಚಿನ ಮಾಹಿತಿಗಾಗಿ ಉಳ್ಳಾಲವಾಣಿ ಕಚೇರಿಯನ್ನು ಸಂಪರ್ಕಿಸಬಹುದು.

# ಡಿಕೆಶಿ ಸಂಪುಟದಲ್ಲಿ ಯು.ಟಿ. ಖಾದರ್‌ಗೆ ಮತ್ತಷ್ಟು ಪವರ್

**ಮಂಗಳೂರು:** ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ಸಚಿವ ಸಂಪುಟದಲ್ಲಿ ಶಾಸಕ ಯು.ಟಿ. ಖಾದರ್ ಅವರಿಗೆ ಮಹತ್ವದ ಹೊಣೆಗಾರಿಕೆಗಳು ಒಲಿದು ಬಂದಿದ್ದು, ದಕ್ಷಿಣ ಕನ್ನಡದ ಮಟ್ಟಿಗೆ ಇದು ಹೊಸ ನಿರೀಕ್ಷೆಗಳಿಗೆ ಕಾರಣವಾಗಿದೆ.



ಮೊದಲ ಹಂತದಲ್ಲೇ ಸಂಪುಟ ದರ್ಜೆಯ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ್ದ ಯು.ಟಿ. ಖಾದರ್ ಅವರಿಗೆ ಇದೀಗ ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆಗಳ ಜವಾಬ್ದಾರಿಯನ್ನೂ ಹೆಚ್ಚುವರಿಯಾಗಿ ವಹಿಸಲಾಗಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜತೆಗೆ ಅಲ್ಪಸಂಖ್ಯಾತರ ಕಲ್ಯಾಣಕ್ಕೆ ಸಂಬಂಧಿಸಿದ ಪ್ರಮುಖ ಇಲಾಖೆಗಳ ಹೊಣೆಗಾರಿಕೆಯೂ ಅವರ ಹೆಗಲೇರಿದೆ.

ಸಚಿವ ಸಂಪುಟದಲ್ಲಿ ಪ್ರಮುಖ ಸ್ಥಾನ ಪಡೆದಿರುವ ಖಾದರ್ ಅವರಿಗೆ ಮುಂದಿನ ದಿನಗಳಲ್ಲಿ ಇನ್ನಷ್ಟು ಮಹತ್ವದ ಜವಾಬ್ದಾರಿಗಳು ದೊರೆಯುವ ಸಾಧ್ಯತೆ ಇದೆ ಎಂಬ ಚರ್ಚೆಯೂ ರಾಜಕೀಯ ವಲಯದಲ್ಲಿ ನಡೆಯುತ್ತಿದೆ. ಅಲ್ಪಸಂಖ್ಯಾತ ಸಮುದಾಯದ ಪ್ರತಿನಿಧಿಯಾಗಿ ಉಪಮುಖ್ಯಮಂತ್ರಿ ಸ್ಥಾನದ ಅವಕಾಶವೂ ಅವರ ಪಾಲಿಗೆ ಬರಬಹುದೇ ಎಂಬ ನಿರೀಕ್ಷೆಯೂ ವ್ಯಕ್ತವಾಗುತ್ತಿದೆ.

ಈ ಹಿಂದೆ ಆರೋಗ್ಯ ಸಚಿವರಾಗಿ ಕಾರ್ಯನಿರ್ವಹಿಸಿರುವ ಯು.ಟಿ. ಖಾದರ್, ಬಳಿಕ ವಿಧಾನಸಭೆಯ ಸ್ಪೀಕರ್ ಆಗಿಯೂ ತಮ್ಮದೇ ಆದ ಛಾಪು ಮೂಡಿಸಿದ್ದರು. ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಅವಧಿಯಲ್ಲಿ ಸ್ಪೀಕರ್ ಆಗಿ ಕರ್ತವ್ಯ ನಿರ್ವಹಿಸಿ, ಸದನದ ನಿರ್ವಹಣೆಯಲ್ಲಿ ತಮ್ಮ ವಿಶಿಷ್ಟ ಶೈಲಿಯನ್ನು ಪ್ರದರ್ಶಿಸಿದ್ದರು.

ಕರಾವಳಿ ಭಾಗದಲ್ಲಿ ಉತ್ತಮ ಜನಬೆಂಬಲ ಹೊಂದಿರುವ ಖಾದರ್, ಸಚಿವರಾಗಿ ಮಾತ್ರವಲ್ಲದೆ ಸ್ಪೀಕರ್ ಆಗಿಯೂ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಿದ್ದಾರೆ. ಸಿದ್ದರಾಮಯ್ಯ ಸಂಪುಟದಲ್ಲಿ ಸಚಿವರಾಗುವ ನಿರೀಕ್ಷೆ ಇದ್ದರೂ ಅವರಿಗೆ ಸ್ಪೀಕರ್ ಸ್ಥಾನ ಒಲಿದು ಬಂದಿತ್ತು. ಇದೀಗ ಡಿ.ಕೆ. ಶಿವಕುಮಾರ್ ನೇತೃತ್ವದ ಸಂಪುಟದಲ್ಲಿ ಆರಂಭದಲ್ಲೇ ಸಚಿವ ಸ್ಥಾನ ಪಡೆದು, ಹೆಚ್ಚುವರಿ ಪ್ರಮುಖ ಇಲಾಖೆಗಳ ಜವಾಬ್ದಾರಿಯನ್ನೂ ಪಡೆದಿರುವುದು ಅವರ ರಾಜಕೀಯ ಪ್ರಭಾವ ಮತ್ತಷ್ಟು ವಿಸ್ತರಿಸಿರುವುದರ ಸಂಕೇತವಾಗಿದೆ.

ಆರೋಗ್ಯದ ಜತೆಗೆ ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಸೇರಿದಂತೆ ಹಲವು ಪ್ರಮುಖ ಖಾತೆಗಳ ಜವಾಬ್ದಾರಿ ಯು.ಟಿ. ಖಾದರ್ ಅವರ ಪಾಲಿಗೆ ಇದೀಗ 'ಡಬಲ್ ಧಮಾಕಾ' ಆಗಿದೆ. ದಕ್ಷಿಣ ಕನ್ನಡದ ಅಭಿವೃದ್ಧಿ ಹಾಗೂ ಕರಾವಳಿಯ ವಿವಿಧ ಬೇಡಿಕೆಗಳಿಗೆ ಈ ಹೆಚ್ಚುವರಿ ಹೊಣೆಗಾರಿಕೆಗಳು ಎಷ್ಟರ ಮಟ್ಟಿಗೆ ಬಲ ನೀಡಲಿವೆ ಎಂಬುದು ಇದೀಗ ಕುತೂಹಲ ಮೂಡಿಸಿದೆ.

# 80ರ ಸ್ವಾತಂತ್ರ್ಯ: ಉಳ್ಳಾಲ ತಾಲೂಕಿನಲ್ಲಿ ಆಗಬೇಕಾದ ಮಹತ್ತರ ಕಾರ್ಯಗಳು

ದೇಶವು 80ನೇ ಸ್ವಾತಂತ್ರ್ಯೋತ್ಸವವನ್ನು ಆಚರಿಸುತ್ತಿರುವ ಈ ಸಂದರ್ಭದಲ್ಲಿ, ಅಭಿವೃದ್ಧಿಯ ಪಥದಲ್ಲಿ ವೇಗವಾಗಿ ಮುನ್ನಡೆಯುತ್ತಿರುವ ಉಳ್ಳಾಲ ತಾಲೂಕಿನಲ್ಲಿ ಇನ್ನಷ್ಟು ಮಹತ್ತರ ಬದಲಾವಣೆಗಳು ಆಗಬೇಕಿದೆ.

ಬಹಳಷ್ಟು ಅಭಿವೃದ್ಧಿ ಹೊಂದಿರುವ ಉಳ್ಳಾಲ ತಾಲೂಕು ಇಂದು ಶೈಕ್ಷಣಿಕ ಹಬ್ ಎಂದೇ ಪ್ರಸಿದ್ಧವಾಗಿದೆ. ಸಾಲು ಸಾಲಾಗಿ ವೈದ್ಯಕೀಯ ಕಾಲೇಜುಗಳು, ಇಂಜಿನಿಯರಿಂಗ್ ಕಾಲೇಜುಗಳು ಹಾಗೂ ವಿವಿಧ ಉನ್ನತ ಶಿಕ್ಷಣ ಸಂಸ್ಥೆಗಳು ಇಲ್ಲಿವೆ. ಉನ್ನತ ವ್ಯಾಸಂಗ, ಪದವಿ ಹಾಗೂ ಸ್ನಾತಕೋತ್ತರ ಪದವಿ ಪಡೆದಿರುವ ಸಾವಿರಾರು ವಿದ್ಯಾರ್ಥಿಗಳು ತಾಲೂಕಿನಲ್ಲಿ ಇದ್ದಾರೆ. ಆದರೆ, ಅವರಿಗೆ ಸ್ಥಳೀಯವಾಗಿಯೇ ಉದ್ಯೋಗಾವಕಾಶ ಕಲ್ಪಿಸುವುದು ಇಂದಿನ ಪ್ರಮುಖ ಅಗತ್ಯವಾಗಿದೆ. ಈ ಭಾಗದ ಶಿಕ್ಷಣ ಸಂಸ್ಥೆಗಳು ಹಾಗೂ ವಿವಿಧ ಸಂಸ್ಥೆಗಳಲ್ಲಿ ತಾಲೂಕಿನ ಮೂಲ ನಿವಾಸಿಗಳಿಗೆ ಹೆಚ್ಚಿನ ಆದ್ಯತೆಯೊಂದಿಗೆ ಉದ್ಯೋಗಾವಕಾಶ ದೊರೆಯುವಂತಾಗಬೇಕು.






ಉಳ್ಳಾಲ ತಾಲೂಕಿನ ಬಹುದೊಡ್ಡ ಸಮಸ್ಯೆಗಳಲ್ಲಿ ಒಂದಾಗಿರುವ ಕಡಲ್ಕೊರೆತಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕಿದೆ. ಈಗಾಗಲೇ ಬಹುಕೋಟಿ ರೂಪಾಯಿ ವೆಚ್ಚ ಮಾಡಿದ್ದರೂ ಸಮಸ್ಯೆ ಸಂಪೂರ್ಣವಾಗಿ ಬಗೆಹರಿದಿಲ್ಲ. ಪ್ರತಿವರ್ಷ ಮಳೆಗಾಲದಲ್ಲಿ ಕಡಲ್ಕೊರೆತದ ಭೀತಿ ಎದುರಾಗುತ್ತಿದ್ದು, ವೈಜ್ಞಾನಿಕ ಹಾಗೂ ಶಾಶ್ವತ ಪರಿಹಾರ ಕಾಮಗಾರಿಗೆ ಆದ್ಯತೆ ನೀಡಬೇಕಾಗಿದೆ.

ನಿವೇಶನ ರಹಿತ ತಾಲೂಕು ನಿವಾಸಿಗಳಿಗೆ ನಿವೇಶನದ ಭದ್ರತೆ ಕಲ್ಪಿಸುವುದು ಮತ್ತೊಂದು ಪ್ರಮುಖ ಬೇಡಿಕೆಯಾಗಿದೆ. ಅರ್ಹ ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳಿಗೆ ಸ್ವಂತ ನಿವೇಶನ ದೊರೆಯುವಂತೆ ಸರಕಾರ ವಿಶೇಷ ಯೋಜನೆ ರೂಪಿಸಬೇಕಿದೆ.

### ತಜ್ಞ ವೈದ್ಯರ ಸೇವೆ ಅಗತ್ಯ

ಆರೋಗ್ಯ ಕ್ಷೇತ್ರದಲ್ಲಿ ಉಳ್ಳಾಲ ತಾಲೂಕು ಆಸ್ಪತ್ರೆಯನ್ನು ಇನ್ನಷ್ಟು ಬಲಪಡಿಸುವ ಅಗತ್ಯವಿದೆ. ಸಕಲ ವೈದ್ಯಕೀಯ ಸೌಲಭ್ಯಗಳೊಂದಿಗೆ 24 ಗಂಟೆಗಳ ವೈದ್ಯರ ಸೇವೆ, ತುರ್ತು ಚಿಕಿತ್ಸಾ ವ್ಯವಸ್ಥೆ ಹಾಗೂ ಅಗತ್ಯ ತಜ್ಞ ವೈದ್ಯರ ಸೇವೆ ತಾಲೂಕು ಆಸ್ಪತ್ರೆಯಲ್ಲಿ ಲಭ್ಯವಾಗಬೇಕು. ಇದರಿಂದ ಬಡ ಹಾಗೂ ಮಧ್ಯಮ ವರ್ಗದ ಜನರು ದೂರದ ಆಸ್ಪತ್ರೆಗಳನ್ನು ಅವಲಂಬಿಸುವ ಪರಿಸ್ಥಿತಿ ಕಡಿಮೆಯಾಗಲಿದೆ.

ಶಿಕ್ಷಣ ಕ್ಷೇತ್ರದಲ್ಲಿಯೂ ಇನ್ನಷ್ಟು ಅಭಿವೃದ್ಧಿ ಅಗತ್ಯವಿದೆ. ಸರಕಾರಿ ಶಾಲೆಗಳನ್ನು ಮೂಲಸೌಕರ್ಯ, ಗುಣಮಟ್ಟದ ಶಿಕ್ಷಣ ಹಾಗೂ ಆಧುನಿಕ ಸೌಲಭ್ಯಗಳೊಂದಿಗೆ ಅಭಿವೃದ್ಧಿಪಡಿಸಿ, ಖಾಸಗಿ ಶಾಲೆಗಳಿಗೆ ಸಮಾನವಾಗಿ ಸ್ಪರ್ಧಿಸುವ ವಾತಾವರಣ ನಿರ್ಮಿಸಬೇಕು.

80ನೇ ಸ್ವಾತಂತ್ರ್ಯದ ಸಂದರ್ಭದಲ್ಲಿ, ಪಾದರಸದಂತೆ ಚುರುಕಾಗಿ ಕಾರ್ಯನಿರ್ವಹಿಸುವ ಆರೋಗ್ಯ ಸಚಿವರು ತಾಲೂಕಿನ ಪ್ರತಿಯೊಂದು ಮನೆಯ ಅಭಿವೃದ್ಧಿಗೂ ಹೆಚ್ಚಿನ ಒತ್ತು ನೀಡಬೇಕು ಎಂಬುದು ತಾಲೂಕಿನ ಜನತೆಯ ಒತ್ತಾಯವಾಗಿದೆ. ಅಭಿವೃದ್ಧಿಯ ಫಲವು ಪ್ರತಿಯೊಂದು ಕುಟುಂಬಕ್ಕೂ ತಲುಪುವಂತಾಗಬೇಕು.

ಅದೇ ರೀತಿ, ಉಳ್ಳಾಲ ತಾಲೂಕು ಆಡಳಿತಕ್ಕೆ ಸುಸಜ್ಜಿತ ಕಚೇರಿ ಹಾಗೂ ಅಗತ್ಯ ಸ್ಥಳಾವಕಾಶ ಒದಗಿಸಬೇಕು. ನ್ಯಾಯಾಲಯ ಸೇರಿದಂತೆ ವಿವಿಧ ಸರಕಾರಿ ಇಲಾಖೆಗಳ ಕಚೇರಿಗಳು ಒಂದೇ ತಾಲೂಕು ಕೇಂದ್ರದಲ್ಲಿ ಸಮರ್ಪಕ ಮೂಲಸೌಕರ್ಯದೊಂದಿಗೆ ಕಾರ್ಯ ನಿರ್ವಹಿಸುವಂತಾಗಬೇಕು. ಸಾರ್ವಜನಿಕರು ಒಂದು

↘ 2ನೇ ಪುಟಕ್ಕೆ

# ಸಂಪಾದಕೀಯ

## ಬಡ ವಾಹನ ಸವಾರರಿಗೆ ಹಾಕುವ ದಂಡ ಕೈಗಾರಿಕೋದ್ಯಮಿಗಳಿಗೆ ಯಾಕಿಲ್ಲ ?

ಪರಿಸರ ಮಾಲಿನ್ಯದ ಹೆಸರಿನಲ್ಲಿ ಬಡ ವಾಹನ ಚಾಲಕನಿಗೆ ದಂಡ; ಅದೇ ಹೆಸರಿನಲ್ಲಿ ವಿಷಕಾರಿ ಅನಿಲ ಬಿಡುವ ಕೈಗಾರಿಕಾ ಉದ್ಯಮಿಗಳಿಗೆ ಪ್ರಶಸ್ತಿ?ಇದು ಯಾವ ಪರಿಸರ ನ್ಯಾಯ? ವಾಯುಮಾಲಿನ್ಯ ನಿಯಂತ್ರಣ ಅಗತ್ಯ. ವಾಹನಗಳಿಂದ ಹೊರಬರುವ ಹೊಗೆ ಕಡಿಮೆಯಾಗಬೇಕು. ಜನರಿಗೆ ಶುದ್ಧ ಗಾಳಿ ಸಿಗಬೇಕು. ವಾಹನ ಮಾಲೀಕರು ಪೊಲ್ಯೂಷನ್ ಅಂಡರ್ ಕಂಟ್ರೋಲ್ (ಪಿಯುಸಿ) ಮಾಡಿಸಬೇಕು, ವಾಹನವನ್ನು ಸರಿಯಾಗಿ ನಿರ್ವಹಿಸಬೇಕು ಮತ್ತು ಕಾನೂನು ಪಾಲಿಸಬೇಕು. ಇದರಲ್ಲಿ ಯಾರಿಗೂ ವಿರೋಧವಿಲ್ಲ. ಆದರೆ ಪರಿಸರ ಸಂರಕ್ಷಣೆಯ ಹೆಸರಿನಲ್ಲಿ ಕಾನೂನು ಜಾರಿಯಾಗುವಾಗ ಅದರ ಕಠಿಣತೆ ಎಲ್ಲರ ಮೇಲೂ ಸಮಾನವಾಗಿರಬೇಕಲ್ಲವೇ ಎಂಬ ಪ್ರಶ್ನೆಯನ್ನು ಸರ್ಕಾರ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಸಾರಿಗೆ ಇಲಾಖೆ




ಜಾರಿಗೊಳಿಸುತ್ತಿರುವ ದಂಡದ ಮೊತ್ತವೂ ಸಾಮಾನ್ಯ ವಾಹನ ಮಾಲೀಕರಿಗೆ ಸಣ್ಣ ಮೊತ್ತವಲ್ಲ. ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳಿಗೆ ?1,500 ಹಾಗೂ ಕಾರು, ಬಸ್, ಲಾರಿ ಸೇರಿದಂತೆ ಲಘು ಮತ್ತು ಭಾರೀ ವಾಹನಗಳಿಗೆ ?3,000 ದಂಡ ವಿಧಿಸಲಾಗುತ್ತದೆ. ಹೊಗೆ ಸೂಸುವ ವಾಹನಗಳು, ನಿಗದಿತ ಎಮಿಷನ್ ಮಿತಿಯನ್ನು ಮೀರಿದ ವಾಹನಗಳು ಅಥವಾ ಮಾನ್ಯವಾದ ಪೊಲ್ಯೂಷನ್ ಅಂಡರ್ ಕಂಟ್ರೋಲ್ ಅಂದರೆ ಕಗಲಅ/ಕಗಲಅಅ ಪ್ರಮಾಣಪತ್ರವಿಲ್ಲದ ವಾಹನಗಳಿಗೆ ಈ ರೀತಿಯ ಕ್ರಮ ಅನ್ವಯಿಸುತ್ತದೆ. ಪಿಯುಸಿ ಒಂದು ದಿನ ಲೇಟ್ ಆದರೂ ರಸ್ತೆಯಲ್ಲಿ ವಾಹನ ನಿಲ್ಲಿಸಿ ಪೊಲೀಸರು ದಂಡ ಕಟ್ಟಿಸುತ್ತಾರೆ ಎಂಬುದು ವಾಹನ ಚಾಲಕರ ಅಳಲು. ಒಬ್ಬ ಬಡ ವಾಹನ ಚಾಲಕನಿಗೆ ?1,500 ಅಥವಾ ?3,000 ದಂಡವೆಂದರೆ ಅದು ಅವನ ದಿನನಿತ್ಯದ ಬದುಕಿನ ಮೇಲೆ ನೇರ ಹೊರೆ. ಅವನು ದಿನವಿಡೀ ವಾಹನ ಓಡಿಸಿ ಕುಟುಂಬವನ್ನು ಸಾಕುತ್ತಾನೆ. ಇಂಧನ, ದುರಸ್ತಿ, ವಿಮೆ, ತೆರಿಗೆ, ಪಿಯುಸಿ ಎಲ್ಲವನ್ನೂ ತನ್ನ ಆದಾಯದಿಂದಲೇ ನಿರ್ವಹಿಸುತ್ತಾನೆ. ಆದರೂ ನಿಯಮ ಉಲ್ಲಂಘನೆಯಾದರೆ ದಂಡ ಕಟ್ಟಲೇಬೇಕು. ಇದು ಕಾನೂನು. ಆದರೆ ಇದೇ ಪರಿಸರ ಮಾಲಿನ್ಯದ ಹೆಸರಿನಲ್ಲಿ ದೊಡ್ಡ ಪ್ರಮಾಣದಲ್ಲಿ ಹೊಗೆ ಅಥವಾ ಮಾಲಿನ್ಯ ಹೊರಸೂಸುವ ಕೈಗಾರಿಕೆಗಳ ವಿರುದ್ಧ ಅದೇ ರೀತಿಯ ಕಠಿಣತೆ ಕಾಣಿಸುತ್ತಿದೆಯೇ ಎಂಬುದು ಜನರ ಪ್ರಶ್ನೆ. ಒಬ್ಬ ಬಡ ವಾಹನ ಚಾಲಕನಿಗೆ ಪರಿಸರ ಮಾಲಿನ್ಯದ ಹೆಸರಿನಲ್ಲಿ ದಂಡ, ಅದೇ ಪರಿಸರದ ಹೆಸರಿನಲ್ಲಿ ವಿಷಕಾರಿ ಅನಿಲ ಬಿಡುವ ಕೈಗಾರಿಕಾ ಉದ್ಯಮಿಗಳಿಗೆ ಪ್ರಶಸ್ತಿ ನೀಡುವ ಪರಿಸ್ಥಿತಿ ಬಂದರೆ, ಅದನ್ನು ಪರಿಸರ ನ್ಯಾಯ ಎಂದು ಕರೆಯಲು ಸಾಧ್ಯವೇ? ವಾಹನ ಮಾಲೀಕರು ಕಾನೂನು ಪಾಲಿಸಬೇಕು. ಪಿಯುಸಿ ಮಾಡಿಸಬೇಕು. ವಾಹನವನ್ನು ಸರಿಯಾಗಿ ನಿರ್ವಹಿಸಬೇಕು. ಆದರೆ ವಾಯುಮಾಲಿನ್ಯಕ್ಕೆ ವಾಹನಗಳೇ ಏಕೈಕ ಕಾರಣ ಎಂಬ ರೀತಿಯಲ್ಲಿ ಸಾಮಾನ್ಯ ಜನರನ್ನು ಗುರಿಯಾಗಿಸುವುದು ಸರಿಯಲ್ಲ. ಕೈಗಾರಿಕೆಗಳ ಹೊಗೆ, ನಿರ್ಮಾಣ ಕಾಮಗಾರಿಗಳ ಧೂಳು, ರಸ್ತೆ ಧೂಳು, ತ್ಯಾಜ್ಯ ಸುಡುವಿಕೆ ಮತ್ತು ಇತರ ಮಾಲಿನ್ಯ ಮೂಲಗಳ ಮೇಲೂ ಅದೇ ಕಠಿಣತೆ ಇರಬೇಕು. ಬೆಂಗಳೂರಿನ ಬೆಳ್ಳಂದೂರು ಕೆರೆ ಪರಿಸರ ನಿರ್ಲಕ್ಷ್ಯದ ಬಗ್ಗೆ ವರ್ಷಗಳಿಂದ ಎಚ್ಚರಿಸುತ್ತಿರುವ ಉದಾಹರಣೆ. ಆದರೆ ಇದು ಬೆಂಗಳೂರಿನ ಸಮಸ್ಯೆ ಮಾತ್ರವಲ್ಲ. ಮಂಗಳೂರಿನಂತಹ ಕೈಗಾರಿಕಾ ನಗರದಲ್ಲೂ ಎಂಸಿಎಫ್ ಸೇರಿದಂತೆ ವಿವಿಧ ಕೈಗಾರಿಕಾ ಚಟುವಟಿಕೆಗಳು ಮತ್ತು ನಗರ ಮಾಲಿನ್ಯದ ಕುರಿತು ಸಾರ್ವಜನಿಕರು ಪ್ರಶ್ನಿಸುತ್ತಿದ್ದಾರೆ. ಕರ್ನಾಟಕದ ವಿವಿಧ ಕೈಗಾರಿಕಾ ಪ್ರದೇಶಗಳಲ್ಲಿ ಇದೇ ರೀತಿಯ ಪರಿಸರ ಪ್ರಶ್ನೆಗಳು ಎದುರಾಗುತ್ತಿವೆ. ಕೈಗಾರಿಕಾ ಅಭಿವೃದ್ಧಿ ನಡೆಯುವ ಪ್ರತಿಯೊಂದು ಪ್ರದೇಶದಲ್ಲೂ ಜನರ ಆರೋಗ್ಯ ಮತ್ತು ಪರಿಸರದ ಸುರಕ್ಷತೆ ಮೊದಲ ಆದ್ಯತೆಯಾಗಬೇಕು. ವಾಹನದ ಪಿಯುಸಿ ಪರಿಶೀಲನೆಗೆ ವ್ಯವಸ್ಥೆ ಇದೆ. ರಸ್ತೆಯಲ್ಲಿ ಪೊಲೀಸರು ತಪಾಸಣೆ ಮಾಡುತ್ತಾರೆ. ದಂಡ ವಿಧಿಸುತ್ತಾರೆ. ಆದರೆ ಕೈಗಾರಿಕೆಗಳಿಂದ ಹೊರಬರುವ ಹೊಗೆ, ಅನಿಲ ಮತ್ತು ಇತರ ಮಾಲಿನ್ಯಕಾರಕಗಳ ಮೇಲೆ ನಿರಂತರವಾಗಿ ನಡೆಯುವ ನಿಗಾ ಎಷ್ಟು ಪರಿಣಾಮಕಾರಿ? ಪರಿಸರ ನಿಯಮ ಉಲ್ಲಂಘಿಸಿದ ಕೈಗಾರಿಕೆಗಳ ವಿರುದ್ಧ ಎಷ್ಟು ಕ್ರಮ ಕೈಗೊಳ್ಳಲಾಗಿದೆ? ಎಷ್ಟು ದಂಡ ವಿಧಿಸಲಾಗಿದೆ? ಎಷ್ಟು ಘಟಕಗಳ ವಿರುದ್ಧ ಕಾನೂನು ಕ್ರಮ ನಡೆದಿದೆ? ಈ ಮಾಹಿತಿಯನ್ನು ಜನರ ಮುಂದೆ ಪಾರದರ್ಶಕವಾಗಿ ಇಡುವ ಜವಾಬ್ದಾರಿ ಸರ್ಕಾರಕ್ಕಿದೆ. ಜನರು ಕಾನೂನು ವಿರೋಧಿಗಳಲ್ಲ. ಜನರು ಪರಿಸರ ವಿರೋಧಿಗಳೂ ಅಲ್ಲ. ಅವರು ಕೇಳುತ್ತಿರುವುದು ಒಂದೇ ಪ್ರಶ್ನೆ?ಕಾನೂನು ಎಲ್ಲರಿಗೂ ಒಂದೇನಾ? ಸಾಮಾನ್ಯ ನಾಗರಿಕನ ವಾಹನವನ್ನು ನಿಲ್ಲಿಸಿ ಪಿಯುಸಿ ಕೇಳುವ ಸರ್ಕಾರ, ಅದೇ ನಗರದ ದೊಡ್ಡ ಮಾಲಿನ್ಯ ಮೂಲಗಳನ್ನೂ ಅಷ್ಟೇ ಕಠಿಣವಾಗಿ ಪರಿಶೀಲಿಸಬೇಕು. ವಾಹನದ ಹೊಗೆ ಅಳೆಯುವಂತೆ ಕೈಗಾರಿಕೆಯ ಹೊಗೆಯನ್ನೂ ಅಳೆಯಬೇಕು. ವಾಹನ ಮಾಲೀಕರಿಗೆ ದಂಡ ವಿಧಿಸುವಂತೆ ಪರಿಸರ ನಿಯಮ ಉಲ್ಲಂಘಿಸುವ ಕೈಗಾರಿಕೆಗಳಿಗೂ ಪಾರದರ್ಶಕ ಮತ್ತು ಪರಿಣಾಮಕಾರಿ ದಂಡ ವಿಧಿಸಬೇಕು. ಪರಿಸರ ಸಂರಕ್ಷಣೆಯ ಹೆಸರಿನಲ್ಲಿ ಕೇವಲ ಸುಲಭವಾಗಿ ಸಿಗುವ ಸಾಮಾನ್ಯ ನಾಗರಿಕನ ಮೇಲೆ ಕಾನೂನಿನ ಭಾರ ಹಾಕುವುದು ನ್ಯಾಯಸಮ್ಮತವಲ್ಲ. ಕಾನೂನು ಮಾಡುವ ಶಾಸಕರು, ಸಂಸದರು ಮತ್ತು ಅಧಿಕಾರಿಗಳು ಎಸಿ ರೂಮಿನಿಂದ ಹೊರಗೆ ಬಂದು ಜನರ ನಡುವೆ ನಿಂತು ಪರಿಸರದ ನೈಜ ಸ್ಥಿತಿಯನ್ನು ನೋಡಬೇಕು. ರಸ್ತೆಯಲ್ಲಿ ದುಡಿಯುವ ಬಡ ವಾಹನ ಚಾಲಕನನ್ನೂ ನೋಡಬೇಕು. ಕೈಗಾರಿಕಾ ಪ್ರದೇಶದ ಸುತ್ತಮುತ್ತ ವಾಸಿಸುವ ಜನರನ್ನೂ ಕೇಳಬೇಕು. ಕೆರೆಗಳ ಸ್ಥಿತಿಯನ್ನೂ ನೋಡಬೇಕು. ಜನರು ಉಸಿರಾಡುವ ಗಾಳಿಯ ಗುಣಮಟ್ಟವನ್ನೂ ಪರಿಶೀಲಿಸಬೇಕು. ಬೆಳ್ಳಂದೂರು ಒಂದು ಎಚ್ಚರಿಕೆ. ಮಂಗಳೂರಿನ ಎಂಸಿಎಫ್ ಸೇರಿದಂತೆ ರಾಜ್ಯದ ಹಲವು ಕೈಗಾರಿಕಾ ಪ್ರದೇಶಗಳು ಸರ್ಕಾರಕ್ಕೆ ಪ್ರಶ್ನೆ ಕೇಳುತ್ತಿವೆ. ಪರಿಸರ ರಕ್ಷಣೆ ಎಂದರೆ ಬಡವನ ವಾಹನದ ಹೊಗೆಯನ್ನು ಮಾತ್ರ ನೋಡುವುದಲ್ಲ. ಜನರ ಉಸಿರಿಗೆ ಅಪಾಯ ಉಂಟುಮಾಡುವ ಪ್ರತಿಯೊಂದು ಮಾಲಿನ್ಯ ಮೂಲವನ್ನೂ ಪ್ರಶ್ನಿಸುವುದು. ವಾಹನದ ಹೊಗೆಗೂ ಕಡಿವಾಣ ಇರಲಿ, ಕೈಗಾರಿಕಾ ಹೊಗೆಗೂ ಕಡಿವಾಣ ಇರಲಿ, ತ್ಯಾಜ್ಯ ಸುಡುವುದಕ್ಕೂ ಕಡಿವಾಣ ಇರಲಿ, ನಿರ್ಮಾಣ ಧೂಳಿಗೂ ಕಡಿವಾಣ ಇರಲಿ. ಕಾನೂನು ಜಾರಿಯಲ್ಲೂ ಸಮಾನತೆ ಇರಲಿ. ಜನರು ಮೂರ್ಖರಲ್ಲ. ಅವರು ಕಾನೂನು ಪಾಲಿಸುತ್ತಿದ್ದಾರೆ. ಈಗ ಸರ್ಕಾರವೂ ತನ್ನ ಕರ್ತವ್ಯವನ್ನು ಸಮಾನವಾಗಿ ಪಾಲಿಸಲಿ. ಶುದ್ಧ ಗಾಳಿ ಶ್ರೀಮಂತರಿಗೆ ಮಾತ್ರವಲ್ಲ, ಬಡವರಿಗೂ ಬೇಕು. ಕೈಗಾರಿಕಾ ಮಾಲೀಕರಿಗೂ ಬೇಕು, ವಾಹನ ಚಾಲಕರಿಗೂ ಬೇಕು, ರೈತನಿಗೂ ಬೇಕು, ಕಾರ್ಮಿಕನಿಗೂ ಬೇಕು. ಹಾಗಾದರೆ ಪರಿಸರ ಕಾನೂನಿನ ಹೊಣೆಗಾರಿಕೆಯೂ ಎಲ್ಲರಿಗೂ ಸಮಾನವಾಗಿರಬೇಕು. ಬಡವನಿಗೆ ದಂಡ, ದೊಡ್ಡವನಿಗೆ ಗೌರವ ಎಂಬ ಭಾವನೆ ಮೂಡಿದರೆ ಜನರು ಕಾನೂನನ್ನಲ್ಲ, ಕಾನೂನಿನ ಜಾರಿಯನ್ನೇ ಪ್ರಶ್ನಿಸುತ್ತಾರೆ. ಇದು ಸರ್ಕಾರದ ವಿರುದ್ಧದ ಪ್ರಶ್ನೆಯಲ್ಲ. ಇದು ಜನರ ಉಸಿರಿನ ಪರವಾದ ಪ್ರಶ್ನೆ. ಕಾನೂನು ಮಾಡುವವರೇ, ಕಾನೂನು ಜಾರಿಗೊಳಿಸುವವರೇ? ವಾಹನಗಳ ಹೊಗೆಯನ್ನು ಮಾತ್ರ ಅಳೆಯಬೇಡಿ; ಜನರು ಉಸಿರಾಡುತ್ತಿರುವ ಗಾಳಿಯನ್ನೂ ಅಳೆಯಿರಿ.

ಸಂಪಾದಕ

# ಕೇಂದ್ರ ಸರಕಾರ ಕಾರ್ಪೋರೇಟ್ ಸಂಸ್ಥೆಗಳ ಕಾವಲಾಗುವ ಮೂಲಕ ಯುವಜನತೆಗೆ ದ್ರೋಹ ಬಗೆಯುತ್ತಿದೆ: ಡಿವೈಎಫ್ಐ ನಾಯಕ ಮುಸ್ತಫಾ

**ಮುಡಿಪು:** "ಕಾರ್ಪೋರೇಟ್ ಶಕ್ತಿಗಳು ಭಾರತದ ಬಹುಪಾಲು ಆಸ್ತಿಯನ್ನು ಕಬಳಿಸುತ್ತಿರುವಾಗ ಅವುಗಳನ್ನು ತಡೆಯುವ ಬದಲು ಮೋದಿ ನೇತೃತ್ವದ ಕೇಂದ್ರ ಸರ್ಕಾರ ಕಾರ್ಪೋರೇಟ್ ಗಳ ಕಾವಲಾಳುಗಳಾಗಿ ವರ್ತಿಸುತ್ತಿವೆ." ಎಂದು ಕೇರಳ ರಾಜ್ಯ ಡಿವೈಎಫ್ಐ ನ ಮಾಜಿ ನಾಯಕರಾದ ವಿಪಿಪಿ ಮುಸ್ತಫಾ ಅಭಿಪ್ರಾಯಪಟ್ಟರು. ಶಿಕ್ಷಣ, ಉದ್ಯೋಗ, ಆರೋಗ್ಯದ ಹಕ್ಕಿಗಾಗಿ ಮುಡಿಪುವಿನಲ್ಲಿ ನಡೆದ ಡಿವೈಎಫ್ಐ 16ನೇ ಉಳ್ಳಾಲ ತಾಲ್ಲೂಕು ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು " ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ದೇಶದ ಐಕ್ಯತೆ ಸಹೋದರತೆ ಪರಂಪರೆಯನ್ನು ಕೆಡವುವ ಮೂಲಕ ದೇಶವನ್ನು ಒಡೆಯುವ ಶ್ರಮದಲ್ಲಿದೆ. ವಿವಿಧತೆಯಲ್ಲಿ ಏಕತೆ ಎಂಬ ಸಂಸ್ಕೃತಿಗೆ ಬಿಜೆಪಿ ಸರ್ಕಾರ ಕೊಡಲಿ ಏಟು ಕೊಡುತ್ತಿವೆ. ಇವುಗಳ ಬದಲು ದೇಶದ ಯುವ ಜನತೆಗೆ ಉದ್ಯೋಗವನ್ನು ಕಲ್ಪಿಸುವ ಕಾರ್ಯಗಳಿಗೆ ಕೇಂದ್ರ ಸರಕಾರ ಮುಂದಾಗಬೇಕು. ಉಳ್ಳಾಲ ಪ್ರದೇಶ ಹಾಗೂ ದ.ಕ ಜಿಲ್ಲೆಯುದ್ದಕ್ಕೂ ಹಲವಾರು ಹೋರಾಟಗಳ ಇತಿಹಾಸ ಇದೆ. ಮೊದಲ ಸ್ವಾತಂತ್ರ್ಯ ಹೋರಾಟಗಾರ್ತಿ ರಾಣಿ ಅಬ್ಬಕ್ಕರು ಪೋರ್ಚುಗೀಸರ ವಿರುದ್ದ ನಿರಂತರ ಹೋರಾಟ ನಡೆಸಿ ಆ ಹೋರಾಟದ ಕಿಚ್ಚನ್ನು ನಾಡಿನುದ್ದಕ್ಕೂ ವ್ಯಾಪಿಸಿದವರು. ಅಬ್ಬಕ್ಕ ರಾಣಿ ಅವರು ಮೆಟ್ಟಿರುವ




ಈ ನಾಡಿನಲ್ಲಿ ಇಂದಿಗೂ ಕಾರ್ಪೋರೇಟ್ ಕಂಪೆನಿಗಳಿಗೆ, ಖಾಸಗಿ ವೈದ್ಯಕೀಯ ಕ್ಷೇತ್ರಗಳಿಗೆ ರಾಜಕಾರಣಿಗಳು ಇದೇ ರೀತಿ ಒಲವು ತೋರಿಸಿ ಸರಕಾರಿ ಸಂಸ್ಥೆಗಳನ್ನು ಕಡೆಗಣಿಸಿದರೆ ಇಲ್ಲಿನ ಯುವಜನತೆ ಬೀದಿಗಿಳಿದು ಹೋರಾಟಗಳನ್ನು ರೂಪಿಸುವುದರಲ್ಲಿ ಸಂಶಯವಿಲ್ಲ. ಈ ನಿಟ್ಟಿನಲ್ಲಿ ದೇಶದ ನಿರುದ್ಯೋಗ ಸಮಸ್ಯೆಯ ವಿರುದ್ದ ಯುವಜನತೆಯ ಉದ್ಯೋಗಕ್ಕಾಗಿ ಮತ್ತು ದೇಶದ ಐಕ್ಯತೆಯನ್ನು ಕಾಪಾಡುವಲ್ಲಿ ಇಲ್ಲಿನ ಎಡರಂಗ ನಿರಂತರ ಮುಂಚೂಣಿಯಲ್ಲಿರಲಿದೆ" ಎಂದು ಮಾತನಾಡಿದರು. ಸಭೆಯನ್ನುದ್ದೇಶಿಸಿ ಮಾತನಾಡಿದ ಸ್ವಾಗತ ಸಮಿತಿಯ ಗೌರವ ಸಲಹೆಗಾರ ರಮೇಶ್ ಉಳ್ಳಾಲ "ಜಿಲ್ಲೆಯಲ್ಲಿ ಆರೋಗ್ಯ ಕ್ಷೇತ್ರವು ಸಂಪೂರ್ಣ ಹದಗೆಟ್ಟಿವೆ. ಶೈಕ್ಷಣಿಕವಾಗಿ ಮುಂದುವರಿದಿರುವ ನಮ್ಮ ಜಿಲ್ಲೆಯಲ್ಲಿ ವರ್ಷಂಪ್ರತೀ ಸಾವಿರಾರು ವಿಧ್ಯಾರ್ಥಿಗಳು ಶಿಕ್ಷಣವನ್ನು ಪೂರೈಸಿ ಹೊರಬರುತ್ತಿದ್ದರೂ ಉದ್ಯೋಗವಿಲ್ಲದೇ ಪರದಾಡುತ್ತಿದ್ದಾರೆ. ರಾಜ್ಯದ ಆರೋಗ್ಯ ಸಚಿವರು ತಮ್ಮ ಸ್ವ ಕ್ಷೇತ್ರವಾದ ಉಳ್ಳಾಲ ತಾಲ್ಲೂಕಿನಲ್ಲಿ ಸುಸಜ್ಜಿತವಾದ ಸರಕಾರೀ ಆಸ್ಪತ್ರೆಗಳನ್ನು ನಿರ್ಮಿಸಿ ಬಲಪಡಿಸುವುದರ ಬದಲು ಖಾಸಗಿ ಆಸ್ಪತ್ರೆಗಳ ಹಿತವನ್ನು ಕಾಪಾಡುತ್ತಿವೆ" ಎಂದು ಆರೋಪಿಸಿದರು. ಮುಡಿಪು ಜಂಕ್ಷನ್ ನಲ್ಲಿ ಬೃಹತ್ ಮೆರವಣಿಗೆಯೊಂದಿಗೆ ಆರಂಭಿಸಿದ ಡಿವೈಎಫ್ಐ ಉಳ್ಳಾಲ ತಾಲ್ಲೂಕು ಸಮ್ಮೇಳನದ ಧ್ವಜಾರೋಹಣವನ್ನು ಡಿವೈಎಫ್ಐ ಉಳ್ಳಾಲ ತಾಲ್ಲೂಕು ಸಮಿತಿ ಅಧ್ಯಕ್ಷರಾದ ನಿತಿನ್ ಕುತ್ತಾರ್ ಅವರು ನೆರವೇರಿಸಿದರು. ಸಮ್ಮೇಳನದುದ್ದಕ್ಕೂ ತಾಲ್ಲೂಕಿನ ಆರೋಗ್ಯ, ಶಿಕ್ಷಣ, ಉದ್ಯೋಗ ಹಾಗೂ ಸ್ಥಳೀಯ ಮೂಲಭೂತ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಲಾಗುತ್ತದೆ. ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಡಿವೈಎಫ್ಐ ಜಿಲ್ಲಾಧ್ಯಕ್ಷ ಬಿ.ಕೆ ಇಂತಿಯಾಝ್, ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್ ,ಸ್ವಾಗತ ಸಮಿತಿ ಗೌರವಾಧ್ಯಕ್ಷ ರಮೇಶ್ ಪುಂಡರಿಕಾಕ್ಷ, ಸ್ವಾಗತ ಸಮಿತಿ ಗೌರವ ಸಲಹೆಗಾರರಾದ ಅಬೂಬಕರ್ ಜಲ್ಲಿ, ಅಬ್ದುಲ್ ಖಾದರ್ ಸಣ್ಣಬೈಲು, ಡಾ. ಜೀವನ್ ರಾಜ್ ಕುತ್ತಾರ್, ಕಾರ್ಯಾಧ್ಯಕ್ಷ ಇಸ್ಮತ್ ಫಜೀರ್, ಅಧ್ಯಕ್ಷ ಅಶ್ರಫ್ ಹರೇಕಳ, ಡಿವೈಎಫ್ಐ ಜಿಲ್ಲಾ ನಾಯಕರಾದ ಮನೋಜ್ ವಾಮಂಜೂರು, ಮಾಧುರಿ ಬೋಳಾರ, ಸ್ವಾಗತ ಸಮಿತಿಯ ರಝಾಕ್ ಮುಡಿಪು, ನಿತಿನ್ ಕುತ್ತಾರ್, ರಝಾಕ್ ಮೊಂಟೆಪದವು, ನಾಯಕರಾದ ಅಶ್ಫಾಕ್ ಅಲೇಕಳ, ಅಮೀರ್ ಉಳ್ಳಾಲ, ಸುನಿಲ್ ತೇವುಲ ಮುಂತಾದವರು ಉಪಸ್ಥಿತರಿದ್ದರು.

# ಸ್ವಾತಂತ್ರ್ಯ ಹೋರಾಟದ ತ್ಯಾಗ, ಬಲಿದಾನ ಮಾಡಿದ ವೀರರನ್ನು ಸ್ಮರಿಸಬೇಕು: ಪ್ರಸಾದ್ ಕುಮಾರ್ ರೈ

**ಉಳ್ಳಾಲ:** ಮಹಾತ್ಮ ಗಾಂಧೀಜಿಯವರ ಪಾತ್ರವನ್ನು ಮಾತ್ರ ಅತಿಯಾಗಿ ಪ್ರಚಾರ ಮಾಡುತ್ತಾ ದೇಶದ ಸ್ವಾತಂತ್ರ್ಯಕ್ಕಾಗಿ ತ್ಯಾಗ, ಬಲಿದಾನ ಮಾಡಿದ ಛತ್ರಪತಿ ಶಿವಾಜಿ ಮಹಾರಾಜ್, ರಾಣಾ ಪ್ರತಾಪ್, ವೀರ ಸಾವರ್ಕರ್, ಸುಭಾಶ್ ಚಂದ್ರ ಬೋಸ್ ಸೇರಿದಂತೆ ಅನೇಕ ವೀರರನ್ನು ಮರೆತುಬಿಟ್ಟಿದ್ದೇವೆ ಎಂದು ವಿಶ್ವ ಹಿಂದೂ ಪರಿಷದ್ ಬಂಟ್ವಾಳ ಪ್ರಖಂಡದ ಅಧ್ಯಕ್ಷ ಪ್ರಸಾದ್ ಕುಮಾರ್ ರೈ ವಿಷಾದಿಸಿದರು.

ಆ.15 ಬ್ರಿಟಿಷರು ದೇಶಕ್ಕೆ ಸ್ವಾತಂತ್ರ್ಯ ನೀಡಿದ ದಿನವಲ್ಲ. ದೇಶದ ಪ್ರತಿಯೊಬ್ಬ ವ್ಯಕ್ತಿಯೂ ಕ್ರಾಂತಿಕಾರಿಯಾಗಿ ಬ್ರಿಟಿಷರ ಎದೆಯಲ್ಲಿ ಹೆದರಿಕೆಯ ಬೆಂಕಿ ಹಚ್ಚಿ ಅವರನ್ನು ದೇಶದಿಂದ ಓಡಿಸಿದ ದಿನವಾಗಿದೆ ಎಂದು ಅವರು ಹೇಳಿದರು.

ವಿಶ್ವ ಹಿಂದೂ ಪರಿಷದ್ ಹಾಗೂ ಬಜರಂಗದಳ ಉಳ್ಳಾಲ ಪ್ರಖಂಡದ ವತಿಯಿಂದ ಕೊಲ್ಯ ಶ್ರೀ ಮೂಕಾಂಬಿಕ ಕ್ಷೇತ್ರದ ಆವರಣದಲ್ಲಿ ನಡೆದ ಅಖಂಡ ಭಾರತ ಸಂಕಲ್ಪ ದಿನದ ಸಭೆಯಲ್ಲಿ ದಿಕ್ಸೂಚಿ ಭಾಷಣ ಮಾಡಿದ ಅವರು ಮಾತನಾಡಿದರು.

ಆ.15ರಂದು ಬೆರಳೆಣಿಕೆಯ ವ್ಯಕ್ತಿಗಳನ್ನು ಮಾತ್ರ ಸ್ಮರಿಸಿ, ಬ್ರಿಟಿಷರು ಸ್ವಾತಂತ್ರ್ಯ ನೀಡಿ ಹೋದರೆಂದು ಬಾಲ್ಯದಲ್ಲಿ ಕೇಳುತ್ತಿದ್ದ ಭಾಷಣಗಳು ಇಂದಿಗೂ ಕಿವಿಯಲ್ಲಿ ಅನುರಣಿಸುತ್ತಿವೆ. ಆದರೆ ಇದು ನಿಜವೇ ಎಂಬುದರ ಕುರಿತು 1925ರಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ ಆರಂಭವಾದ ಬಳಿಕ ಚಿಂತಿಸುವ ದಾರಿ ದೊರೆಯಿತು ಎಂದು ಅವರು ಹೇಳಿದರು.

ದೇಶವನ್ನು ವಿಭಜಿಸಿದವರನ್ನೇ ಸ್ವಾತಂತ್ರ್ಯ ಹೋರಾಟಗಾರರೆಂದು ಬಿಂಬಿಸುವ ರಾಜಕೀಯ ಶಿಕ್ಷಣ ವ್ಯವಸ್ಥೆ ಇಂದಿಗೂ ಬೆಳೆದು ನಿಂತಿದೆ ಎಂದು ಆರೋಪಿಸಿದ ಅವರು, ಕೇವಲ ಚರಕದಿಂದ ನೂಲು ತೆಗೆದಿದ್ದರಿಂದ ಹಾಗೂ ಸಮುದ್ರ ತೀರದಲ್ಲಿ ಉಪ್ಪು ತಯಾರಿಸಿದ್ದರಿಂದ ಮಾತ್ರ ಸ್ವಾತಂತ್ರ್ಯ ದೊರೆಯಲಿಲ್ಲ ಎಂದರು.



**‘ಅಖಂಡ ಭಾರತದ ಸ್ಥಿತಿ ನಿರ್ಮಾಣವಾಗಲಿದೆ’**

**ಜಮ್ಮು ಕಾಶ್ಮೀರದಲ್ಲಿ ಆರ್ಟಿಕಲ್ 370 ತೆಗೆದುಹಾಕಿರುವುದರಿಂದ ದೇಶದ ಸೈನಿಕರು ಇಂದು ಎದೆಕೊಟ್ಟು ನಡೆಯುವಂತಾಗಿದೆ. ಭಾರತವನ್ನು ಮತ್ತೆ ಅಖಂಡವಾಗಿ ನೋಡುವ ಸ್ಥಿತಿ ನಿರ್ಮಾಣವಾಗಲಿದೆ. ನಮ್ಮಲ್ಲಿ ಇಂದು ಕಾರು, ಬಂಗಲೆ ಇದ್ದರೂ ಮಕ್ಕಳೇ ಇಲ್ಲದ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ನಮ್ಮ ಸುಖಕ್ಕೆ ಧಕ್ಕೆ ಬಾರದಿರಲಿ ಎಂಬ ಕಾರಣಕ್ಕೆ ಮಕ್ಕಳೇ ಬೇಡ ಎನ್ನುವ ಮನೋಭಾವ ಹಿಂದೂ ಸಮಾಜದ ಶೋಚನೀಯ ಸ್ಥಿತಿಯಾಗಿದೆ ಎಂದು ಅವರು ಹೇಳಿದರು.**

■ ಪ್ರಸಾದ್ ಕುಮಾರ್ ರೈ, ಅಧ್ಯಕ್ಷರು, ವಿಹಿಂಪ ಬಂಟ್ವಾಳ ಪ್ರಖಂಡ

ಗಾಂಧೀಜಿಯವರ ಬಗ್ಗೆ ತಮ್ಮದೇನೂ ತಕರಾರಿಲ್ಲ. ಅವರ ಕಾಲದಲ್ಲಿ ಅವರು ಆರಾಧಿಸಲ್ಪಟ್ಟ ವ್ಯಕ್ತಿಯಾಗಿದ್ದರು. ಆದರೆ ಅವರನ್ನೇ ಅತಿಯಾಗಿ ಪ್ರಚಾರ ಮಾಡುತ್ತಾ ಸ್ವಾತಂತ್ರ್ಯ ಹೋರಾಟಕ್ಕೆ ತ್ಯಾಗ, ಬಲಿದಾನ ಮಾಡಿದವರನ್ನು ನಾವು ಮರೆತಿದ್ದೇವೆ. ಕೇವಲ 1947ರಲ್ಲಿ ನಡೆದದ್ದೇ ಸ್ವಾತಂತ್ರ್ಯ ಹೋರಾಟವಲ್ಲ. ಅದಕ್ಕೂ ಹಿಂದಿನ ಹೋರಾಟದ ಇತಿಹಾಸವನ್ನು ಅರಿತು, ಹೋರಾಟಗಾರರನ್ನು ಸ್ಮರಿಸುವ ವಾತಾವರಣ ನಿರ್ಮಿಸಬೇಕಾಗಿದೆ ಎಂದು ಪ್ರಸಾದ್ ಕುಮಾರ್ ರೈ ಹೇಳಿದರು.

**ಕೊಲ್ಯದಲ್ಲಿ ಪಂಜಿನ ಮೆರವಣಿಗೆ**

ಕಾರ್ಯಕ್ರಮದ ಅಂಗವಾಗಿ ಕೊಲ್ಯ ಶಾರದಾ ಮಂದಿರದಿಂದ ಶ್ರೀ ಮೂಕಾಂಬಿಕ ಕ್ಷೇತ್ರದವರೆಗೆ ಪಂಜಿನ ಮೆರವಣಿಗೆ ನಡೆಯಿತು. ವಿಶ್ವ ಹಿಂದೂ ಪರಿಷದ್ ಹಾಗೂ ಬಜರಂಗದಳದ ನೂರಾರು ಸ್ವಯಂಸೇವಕರು ಮೆರವಣಿಗೆಯಲ್ಲಿ ಭಾಗವಹಿಸಿದರು.

ಮಾಜಿ ಸೈನಿಕರ ಸಂಘ ಅಬ್ಬಕ್ಕ ವಲಯದ ಅಧ್ಯಕ್ಷ ಕ್ಯಾ. ಜಿ.ಎಸ್. ಪ್ರಸಾದ್ ಕುಂಪಲ ಅಧ್ಯಕ್ಷತೆ ವಹಿಸಿದ್ದರು. ಕೊಲ್ಯ ಶ್ರೀ ಮೂಕಾಂಬಿಕ ಕ್ಷೇತ್ರದ ಆಡಳಿತ ಸಮಿತಿ ಅಧ್ಯಕ್ಷ ಚಂದ್ರಹಾಸ್ ಪಂಡಿತ್ ಹೌಸ್, ವಿಹಿಂಪ ಉಳ್ಳಾಲ ನಗರ ಪ್ರಖಂಡದ ಅಧ್ಯಕ್ಷ ನಾರಾಯಣ ಕುಂಪಲ, ಉಳ್ಳಾಲ ಗ್ರಾಮಾಂತರ ಪ್ರಖಂಡದ ಅಧ್ಯಕ್ಷ ಶಿವಪ್ರಸಾದ್ ಕೊಣಾಜೆ, ಬಜರಂಗದಳ ಉಳ್ಳಾಲ ಗ್ರಾಮಾಂತರ ಪ್ರಖಂಡ ಸಂಚಾಲಕ ಚೇತನ್ ಅಸೈಗೋಳಿ ಮೊದಲಾದವರು ಉಪಸ್ಥಿತರಿದ್ದರು.

ವಿಹಿಂಪ ಉಳ್ಳಾಲ ಪ್ರಖಂಡದ ಸಹಕಾರ್ಯದರ್ಶಿ ಹರಿಪ್ರಸಾದ್ ಪ್ರಾಸ್ತಾವಿಕ ಮಾತುಗಳನ್ನಾಡಿ ಸ್ವಾಗತಿಸಿದರು. ಬಜರಂಗದಳ ಉಳ್ಳಾಲ ನಗರ ಪ್ರಖಂಡ ಸಂಚಾಲಕ ಪ್ರದೀಪ್ ಕೆರೆಬೈಲ್ ವಂದಿಸಿದರು. ಪ್ರವೀಣ್ ಬಸ್ತಿ ನಿರೂಪಿಸಿದರು.






# ದಾರೂಲ್ ಉಲೂಮ್ ಮಹಿಳಾ ಕಾಲೇಜಿನಲ್ಲಿ ವಿಜೃಂಭಣೆಯ ಸ್ವಾತಂತ್ರ್ಯೋತ್ಸವ



**ತಲಪಾಡಿ:** ಮಸ್ಜಿದ್ ಅಬ್ರಾರ್ ಆಡಳಿತ ಮಂಡಳಿಯ ಅಧೀನ ಸಂಸ್ಥೆಯಾದ ದಾರೂಲ್ ಉಲೂಮ್ ಮಹಿಳಾ ಅರೇಬಿಕ್ ಮತ್ತು ಸೆಕ್ಯುಲರ್ ಕಾಲೇಜಿನಲ್ಲಿ 80ನೇ ಸ್ವಾತಂತ್ರ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಅಬ್ರಾರ್ ಮಸೀದಿ ಉಪಾಧ್ಯಕ್ಷ ಅಹಮದ್ ತಲಪಾಡಿ ಹಾಗೂ ಮಹಿಳಾ ಕಾಲೇಜಿನ ಪ್ರಧಾನ ಕಾರ್ಯದರ್ಶಿ ಐಸನ್ ತಲಪಾಡಿ ಧ್ವಜಾರೋಹಣ ನೆರವೇರಿಸಿದರು. ಮಾಜಿ ತಲಪಾಡಿ ಪಂಚಾಯತ್ ಅಧ್ಯಕ್ಷ ಟಿ. ಇಸ್ಮಾಯಿಲ್ ಪ್ರಧಾನ ಭಾಷಣ ಮಾಡಿದರು.

ಸೋಶಿಯಲ್ ಅಚೀವ್‌ಮೆಂಟ್ ಫೋರಂ ಕಾರ್ಯದರ್ಶಿ ಇಸ್ಮಾಯಿಲ್ ಬಿ.ಎಸ್., ಉದ್ಯಮಿ ಶಂಶುದ್ದೀನ್, ಅಬ್ರಾರ್ ಸಮಿತಿ ಸದಸ್ಯರಾದ ಅರಬಿ ಕುಂಞಿ, ಟಿ.ಎಂ. ಬಶೀರ್, ಸಲೀಂ, ಇಬ್ರಾಹಿಂ, ಸುಪರ್ ಸಿದ್ದೀಕ್ ತಲಪಾಡಿ, ಅಬ್ದುಲ್ ಖಾದರ್ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು.

ಕಾಲೇಜಿನ ವಿದ್ಯಾರ್ಥಿನಿಯರು ಸ್ವಾತಂತ್ರ್ಯೋತ್ಸವದ ಹಿತನುಡಿಗಳನ್ನು ಕನ್ನಡ, ಇಂಗ್ಲಿಷ್, ಹಿಂದಿ ಹಾಗೂ ಅರೇಬಿಕ್ ಭಾಷೆಗಳಲ್ಲಿ ಮಂಡಿಸಿ ಗಮನ ಸೆಳೆದರು.

# ಕಷ್ಟಗಳ ನಡುವೆ ಜನರ ಧ್ವನಿಯಾಗಿ ಬೆಳೆದ ಉಳ್ಳಾಲವಾಣಿ

↗ 1ನೇ ಪುಟದಿಂದ ಮುಂದಿನ ದಿನಗಳಲ್ಲಿ ಇನ್ನಷ್ಟು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು, ಪತ್ರಿಕೆಯನ್ನು ಮತ್ತಷ್ಟು ವಿಸ್ತರಿಸಲು ಹಾಗೂ ಜನಪರ ಧ್ವನಿಯಾಗಿ ಗಟ್ಟಿಯಾಗಿ ನಿಲ್ಲಲು ಎಲ್ಲಾ ಓದುಗರು, ಚಂದಾದಾರರು, ಜಾಹೀರಾತುದಾರರು, ಹಿತೈಷಿಗಳು ಹಾಗೂ ಸಾರ್ವಜನಿಕರ ಸಹಕಾರ ಅತ್ಯಗತ್ಯ. ಮೂರು ವರ್ಷಗಳ ಪಯಣದಲ್ಲಿ ನಮ್ಮೊಂದಿಗೆ ಹೆಜ್ಜೆ ಹಾಕಿದ ಪ್ರತಿಯೊಬ್ಬರಿಗೂ ಹೃತ್ಪೂರ್ವಕ ಕೃತಜ್ಞತೆಗಳು. ನಿಮ್ಮ ಪ್ರೀತಿ, ವಿಶ್ವಾಸ ಮತ್ತು ಸಹಕಾರ ವೇ ಉಳ್ಳಾಲವಾಣಿಯ ಮುಂದಿನ ಹೆಜ್ಜೆಗಳಿಗೆ ಶಕ್ತಿ.

ಉಳ್ಳಾಲವಾಣಿ – ಜನರ ಧ್ವನಿ, ಜನರಿಗಾಗಿ

# ಉಳ್ಳಾಲ ತಾಲೂಕಿನಲ್ಲಿ ಆಗಬೇಕಾದ ಮಹತ್ತರ ಕಾರ್ಯಗಳು

↗ 1ನೇ ಪುಟದಿಂದ ಸಣ್ಣ ಕೆಲಸಕ್ಕಾಗಿ ಹಲವು ಕಡೆ ಅಲೆದಾಡಬೇಕಾದ ಪರಿಸ್ಥಿತಿ ನಿವಾರಣೆಯಾಗಬೇಕು.

ಶಿಕ್ಷಣ, ಆರೋಗ್ಯ, ಉದ್ಯೋಗ, ವಸತಿ, ಕಡಲ್ಕೊರೆತ ನಿಯಂತ್ರಣ ಹಾಗೂ ಸುಸಜ್ಜಿತ ಆಡಳಿತ ವ್ಯವಸ್ಥೆ. ಈ ಎಲ್ಲ ಕ್ಷೇತ್ರಗಳಲ್ಲಿ ಸಮಗ್ರ ಅಭಿವೃದ್ಧಿ ಸಾಧಿಸಿದಾಗ ಮಾತ್ರ ಉಳ್ಳಾಲ ತಾಲೂಕು ನಿಜವಾದ ಅರ್ಥದಲ್ಲಿ ಮಾದರಿ ತಾಲೂಕಾಗಿ ರೂಪುಗೊಳ್ಳಲಿದೆ.

80ನೇ ಸ್ವಾತಂತ್ರ್ಯೋತ್ಸವವು ಕೇವಲ ಸಂಭ್ರಮದ ಆಚರಣೆ–ಯಾಗದೆ, ಉಳ್ಳಾಲ ತಾಲೂಕಿನ ಸಮಗ್ರ ಅಭಿವೃದ್ಧಿಗೆ ಹೊಸ ಸಂಕಲ್ಪದ ಆರಂಭವಾಗಲಿ ಎಂಬುದು ತಾಲೂಕಿನ ಜನತೆಯ ಆಶಯ.

# ಮಾಡೂರು ಶಾಲೆಯಲ್ಲಿ ವಿಭಿನ್ನವಾಗಿ ಜರಗಿದ 80ನೇ ಸ್ವಾತಂತ್ರ್ಯ ದಿನ ಹಾಗೂ ‘ಆಟಿಡೊಂಜಿ ಕೂಟ’ ಕಾರ್ಯಕ್ರಮ

**ಉಳ್ಳಾಲ:** ಮಾಡೂರು ಸರಕಾರಿ ಶಾಲೆಯಲ್ಲಿ 80ನೇ ಸ್ವಾತಂತ್ರ್ಯೋತ್ಸವವನ್ನು ವಿಭಿನ್ನ ರೀತಿಯಲ್ಲಿ ಆಚರಿಸಲಾಯಿತು. ಧ್ವಜಾರೋಹಣದ ಬಳಿಕ ಶಾಲಾ ಆವರಣವನ್ನು ಸ್ವಚ್ಛಗೊಳಿಸಲಾಯಿತು. ಬಳಿಕ ಪೋಷಕರು, ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಮನೆಯಲ್ಲೇ ತಯಾರಿಸಿದ ಆಷಾಢ ಮಾಸದ ವಿಶಿಷ್ಟ ಖಾದ್ಯಗಳೊಂದಿಗೆ ‘ಆಟಿಡೊಂಜಿ ಕೂಟ’ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಹಭೋಜನ ನಡೆಸಿದರು.

ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಭಾಸ್ಕರ್ ಮಡ್ಯಾರ್ ಧ್ವಜಾರೋಹಣ ನೆರವೇರಿಸಿದರು. ಕೋಟೆಕಾರು ಪಟ್ಟಣ ಪಂಚಾಯತ್ ಕೌನ್ಸಿಲರ್ ಸುಜಿತ್ ಮಾಡೂರು ಮಾತನಾಡಿ, ಪ್ರತಿಯೊಂದು ಕೆಲಸವನ್ನೂ ದೇಶಪ್ರೇಮದೊಂದಿಗೆ ಆಚರಿಸಬೇಕು. ವಿಶೇಷ ದಿನಗಳನ್ನು ಗಿಡ ನೆಡುವಂತಹ ಚಟುವಟಿಕೆಗಳ ಮೂಲಕ ಆಚರಿಸುವುದು ದೇಶಪ್ರೇಮಕ್ಕೆ ಪೂರಕವಾಗಲಿದೆ. ಭವ್ಯ ಭಾರತ ನಿರ್ಮಾಣಕ್ಕಾಗಿ ಭಾರತೀಯರೆಲ್ಲರೂ ಒಗ್ಗೂಡಿ ದೇಶದ ಅಭಿವೃದ್ಧಿಗೆ ಕೈಜೋಡಿಸಬೇಕು ಎಂದರು.





ಶಾಲಾ ಹಿತರಕ್ಷಣಾ ಸಮಿತಿ ಅಧ್ಯಕ್ಷ ರಶೀದ್ ಮಾಡೂರು, ಗೌರವಾಧ್ಯಕ್ಷ ಅಝೀಝ್ ಮಾಡೂರು, ಪ್ರಧಾನ ಕಾರ್ಯದರ್ಶಿ ಪುರುಷೋತ್ತಮ್ ಗಟ್ಟಿ, ಶಾಲಾಭಿವೃದ್ಧಿ ಸಮಿತಿ ಉಪಾಧ್ಯಕ್ಷೆ ಝೊಹರಾ, ಸದಸ್ಯೆ ರಝಾನಾ ಹಾಗೂ ಸಿಆರ್‌ಪಿ ಸುಜಾತಾ ಉಪಸ್ಥಿತರಿದ್ದರು.

ಮುಖ್ಯೋಪಾಧ್ಯಾಯಿನಿ ಪುಷ್ಪಾ ಸ್ವಾಗತಿಸಿದರು. ಜೀವಿತಾ ನಿರೂಪಿಸಿದರು. ನಿಶಾ ವಂದಿಸಿದರು.

ಸ್ವಾತಂತ್ರ್ಯ ದಿನದ ನೈಜ ಕಲ್ಪನೆ ಶಾಲೆಯಲ್ಲಿ ಸಾಕಾರಗೊಂಡಿತು. ಶಾಲಾ ಆವರಣದ ಸ್ವಚ್ಛತಾ ಕಾರ್ಯದಲ್ಲಿ ಮಕ್ಕಳ ಪೋಷಕರು ಸೌಹಾರ್ದತೆಯಿಂದ ಪಾಲ್ಗೊಂಡರು. ಪೋಷಕರಿಗಾಗಿ ಆಯೋಜಿಸಿದ್ದ ವಿವಿಧ ಆಟಗಳಲ್ಲಿ ಎಲ್ಲರೂ ಸಕ್ರಿಯವಾಗಿ ಭಾಗವಹಿಸಿದರು. ತೆಂಗಿನ ಗರಿ ನೇಯುವ ಕಾರ್ಯದಲ್ಲಿಯೂ ವಿವಿಧ ಧರ್ಮಗಳ ಪೋಷಕರು ಒಟ್ಟಾಗಿ ಪಾಲ್ಗೊಂಡರು. ಮನೆಗಳಿಂದ ತಂದ ವಿವಿಧ ಖಾದ್ಯಗಳನ್ನು ಪರಸ್ಪರ ಹಂಚಿಕೊಂಡು ಸೌಹಾರ್ದತೆ ಮತ್ತು ಸಹಬಾಳ್ವೆಯ ಸಂದೇಶ ಸಾರಲಾಯಿತು.

# ಶ್ರೀ ವೀರಾಂಜನೇಯ ವ್ಯಾಯಾಮ ಶಾಲೆಯಲ್ಲಿ ಸ್ವಾತಂತ್ರ್ಯೋತ್ಸವ

**ಕುಂಪಲ:** ಹನುಮಾನ್ ನಗರ ಕುಂಪಲದ ಶ್ರೀ ವೀರಾಂಜನೇಯ ವ್ಯಾಯಾಮ ಶಾಲೆಯ ವತಿಯಿಂದ 80ನೇ ಸ್ವಾತಂತ್ರ್ಯೋತ್ಸವವನ್ನು ಆಚರಿಸಲಾಯಿತು. ಅಂಗನವಾಡಿ ಶಾಲೆಯ ನಿವೃತ್ತ ಶಿಕ್ಷಕಿ ಶ್ರೀಮತಿ ವಸಂತಿ ಗಟ್ಟಿ ಧ್ವಜಾರೋಹಣ ನೆರವೇರಿಸಿದರು.

ಸೋಮೇಶ್ವರ ಹಾಗೂ ಕೋಟೆಕಾರು ಗ್ರಾಮಗಳ ಟೈಲರ್ ಅಸೋಸಿಯೇಷನ್ ಅಧ್ಯಕ್ಷ ಸತೀಶ್ ಟೈಲರ್ ಅಧ್ಯಕ್ಷತೆ ವಹಿಸಿದ್ದರು. ಕುಂಪಲ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಉನ್ನತ ಶ್ರೇಣಿಯಲ್ಲಿ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ವಿತರಿಸಲಾಯಿತು.



ಕುಂಪಲ ಶಾಲೆಯ ಮುಖ್ಯೋಪಾಧ್ಯಾಯರ ಮನವಿಗೆ ಸ್ಪಂದಿಸಿದ ವ್ಯಾಯಾಮ ಶಾಲೆಯ ವತಿಯಿಂದ ?20,001 ಆರ್ಥಿಕ ನೆರವಿನ ಚೆಕ್ ಅನ್ನು ಶಾಲೆಯ ಸಹ ಶಿಕ್ಷಕಿ ಸುನಂದ ಅವರಿಗೆ ಹಸ್ತಾಂತರಿಸಲಾಯಿತು. ಅಂಗನವಾಡಿ ಶಾಲೆಯ ಶಿಕ್ಷಕಿ ವಸಂತಿ ಗಟ್ಟಿ ಪಿಲಾರು ಅವರನ್ನು ಗೌರವಿಸಿ ಅಭಿನಂದಿಸಲಾಯಿತು.

ಪುರಸಭಾ ಸದಸ್ಯ ಹರೀಶ್ ಕುಂಪಲ, ಶಾಲಾ ಶಿಕ್ಷಕ ಜಗದೀಶ್ ಗಟ್ಟಿ, ವ್ಯಾಯಾಮ ಶಾಲೆ ಅಧ್ಯಕ್ಷ ಅಶ್ವಥ್ ಕುಜುಮಗದ್ದೆ ಉಪಸ್ಥಿತರಿದ್ದರು. ಸುಕೇಶ್ ಮಂಜನಾಡಿ ಕಾರ್ಯಕ್ರಮ ನಿರ್ವಹಿಸಿದರು. ಉಮೇಶ್ ಕುಜುಮಗದ್ದೆ ಧನ್ಯವಾದ ನೀಡಿದರು.

www.ullalavani.com
ullalavani@gmail.com
ಉಳ್ಳಾಲ ವಾಣಿ

# ಮಲಾರ್–ಇನೋಳಿಗೆ ಸರಕಾರಿ ಬಸ್ ಓಡಾಟಕ್ಕೆ ಆಗ್ರಹಿಸಿ ಮಲಾರ್ ಜಂಕ್ಷನ್‌ನಲ್ಲಿ ಭಿತ್ತಿಪತ್ರ ಪ್ರದರ್ಶನ



**ಕೊಣಾಜೆ:** ಪಾವೂರು ಗ್ರಾಮದ ಮಲಾರ್–ಇನೋಳಿಗೆ ಸರಕಾರಿ ಬಸ್ ಓಡಾಟ ಆರಂಭಿಸಬೇಕು ಎಂದು ಆಗ್ರಹಿಸಿ ಸರಕಾರಿ ಬಸ್ ಹೋರಾಟ ಸಮಿತಿಯ ನೇತೃತ್ವದಲ್ಲಿ ಮಲಾರ್ ಜಂಕ್ಷನ್‌ನಲ್ಲಿ ಭಿತ್ತಿಪತ್ರ ಪ್ರದರ್ಶನ ಮತ್ತು ಸಹಿ ಸಂಗ್ರಹ ಅಭಿಯಾನ ನಡೆಯಿತು.ಇನೋಳಿಗೆ ಸರಕಾರಿ ಬಸ್ ಓಡಿಸಬೇಕು ಎಂದು ಆಗ್ರಹಿಸಿ ಕಳೆದ ಹಲವು ವರ್ಷದಿಂದ ಸಾರ್ವಜನಿಕರು ಹೋರಾಟ ಮಾಡುತ್ತಾ ಬಂದಿದ್ದಾರೆ. ಈ ಬಗ್ಗೆ ಗ್ರಾಪಂಗೆ, ಸಚಿವರಿಗೆ, ಕೆಎಸ್ಸಾರ್ಟಿಸಿ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ. ಹೋರಾಟದ ಭಾಗವಾಗಿ ಅಲ್ಲಲ್ಲಿ ಸಹಿ ಸಂಗ್ರಹ ಅಭಿಯಾನ, ಭಿತ್ತಿಪತ್ರ ಪ್ರದರ್ಶನ ಮಾಡಲಾಗಿದೆ. ಆದರೂ ಸಂಬಂಧಪಟ್ಟವರು ಗ್ರಾಮಸ್ಥರ ಬೇಡಿಕೆಗೆ ಸ್ಪಂದಿಸುತ್ತಿಲ್ಲ. ಕೇವಲ ಭರವಸೆ ನೀಡಿ ಕಾಲಹರಣ ಮಾಡುತ್ತಿದ್ದಾರೆ. ಮಲಾರ್–ಇನೋಳಿ ಪ್ರದೇಶಕ್ಕೆ ಸರಕಾರಿ ಬಸ್ ಸೇವೆ ಆರಂಭಿಸಿದರೆ ಪಾವೂರು, ಹರೇಕಳ,ಪಜೀರ್, ಬೋಳಿಯಾರ್, ಕೊಣಾಜೆ ಗ್ರಾಮದ ಜನರಿಗೂ ಉಪಕಾರವಾಗಲಿದೆ ಎಂದು ಸಮಿತಿಯ ಮುಖಂಡರು ತಿಳಿಸಿದ್ದಾರೆ. ಹೋರಾಟ ಸಮಿತಿಯ ಮುಖಂಡರಾದ ಇನೋಳಿ ಮೋನಾಕ, ಸಮದ್ ಗಾಡಿಗದ್ದೆ, ನಾಸಿರ್ ಮಲಾರ್, ಶಮೀರ್ ಟಿಪ್ಪುನಗರ, ಬಶೀರ್ ಅಕ್ಷರನಗರ, ಸಮದ್ ಎಂ.ಕೆ., ಆಸಿಫ್ ಬದ್ರಿಯಾನಗರ, ಸಿದ್ದೀಕ್ ಮಲಾರ್, ಇಕ್ಬಾಲ್ ಇನೋಳಿ, ಸಲೀಮ್ ಕೆನರಾ, ನಿಯಾಫ್ ಮಲಾರ್, ಝುಬೈರ್ ಮಲಾರ್ ಮತ್ತಿತರರು ಭಿತ್ತಿಪತ್ರ ಪ್ರದರ್ಶನ ಮತ್ತು ಸಹಿ ಸಂಗ್ರಹ ಅಭಿಯಾನದ ನೇತೃತ್ವ ವಹಿಸಿದ್ದರು.

# ಉಳ್ಳಾಲ: ಹಿರಾ ಕಾಲೇಜು ಸಭಾಂಗಣದಲ್ಲಿ ಪ್ರತಿಭಾ ಪುರಸ್ಕಾರ, ಪ್ರಮಾಣ ಪತ್ರ ವಿತರಣಾ ಸಮಾರಂಭ

- 2025–26ನೇ ಸಾಲಿನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಪ್ರಮಾಣ ಪತ್ರ ವಿತರಣಾ ಸಮಾರಂಭ
- ವಿದ್ಯಾರ್ಥಿಗಳು ಧಾರ್ಮಿಕ ಶಿಕ್ಷಣದೊಂದಿಗೆ ಆಧುನಿಕ ಶಿಕ್ಷಣದಲ್ಲಿಯೂ ಉನ್ನತ ಸಾಧನೆ ಮಾಡಿ ಸಮಾಜಕ್ಕೆ ಮಾದರಿಯಾಗಲಿ



**ಉಳ್ಳಾಲ:** ಬೋರ್ಡ್ ಆಫ್ ಇಸ್ಲಾಮಿಕ್ ಎಜುಕೇಶನ್ ಕರ್ನಾಟಕ ಇದರ ಉಳ್ಳಾಲ ಸೆಂಟರ್ ವತಿಯಿಂದ 2025–26ನೇ ಸಾಲಿನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಪ್ರಮಾಣ ಪತ್ರ ವಿತರಣಾ ಸಮಾರಂಭವು ಬಬ್ಬುಕಟ್ಟೆಯ ಹಿರಾ ಕಾಲೇಜು ಸಭಾಂಗಣದಲ್ಲಿ ನಡೆಯಿತು.

ಮುಖ್ಯ ಅತಿಥಿಗಳಾಗಿ ಪಿ.ಎ. ಪಾಲಿಟೆಕ್ನಿಕ್ ನಡುಪದವು, ಪ್ರಾಂಶುಪಾಲ ಪ್ರೊ. ಇಸ್ಮಾಯಿಲ್ ಖಾನ್ ಹಾಗೂ ಬಹುಭಾಷಾ ಲೇಖಕಿ ಶಮೀಮಾ ಕುತ್ತಾರ್ ಮಾತನಾಡಿ, ವಿದ್ಯಾರ್ಥಿಗಳು ಧಾರ್ಮಿಕ ಶಿಕ್ಷಣದೊಂದಿಗೆ ಆಧುನಿಕ ಶಿಕ್ಷಣದಲ್ಲಿಯೂ ಉನ್ನತ ಸಾಧನೆ ಮಾಡಿ ಸಮಾಜಕ್ಕೆ ಮಾದರಿಯಾ ಗುವಂತೆ ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಮಾಅತೇ ಇಸ್ಲಾಮೀ ಹಿಂದ್ ಮಂಗಳೂರು ಅಧ್ಯಕ್ಷ ಮುಹಮ್ಮದ್ ಇಸ್ಹಾಕ್ ವಹಿಸಿದ್ದರು. ಹಮ್ದಾನ್ ರಮಿನ್ ಕರೀಮ್ ಮತ್ತು ಅರ್ಹಮ್ ರಿಯಾಝ್ ಅಹ್ಮದ್ ಅವರು ಪವಿತ್ರ ಕುರ್‌ಆನ್ ಪಠಣ ಮಾಡಿದರು. ಡಾ. ಮುಹಮ್ಮದ್ ಮುಬೀನ್ ಸ್ವಾಗತಿಸಿದರು. ಕಾರ್ಯಕ್ರಮದಲ್ಲಿ 2025–26ನೇ ಸಾಲಿನ ಪರೀಕ್ಷೆಯಲ್ಲಿ ವಿವಿಧ ವಿಭಾಗಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಪ್ರಮಾಣ ಪತ್ರಗಳನ್ನು ವಿತರಿಸಿ ಗೌರವಿಸಲಾಯಿತು.

ಬೋರ್ಡ್‌ನ ವಿದ್ಯಾರ್ಥಿಗಳಾದ ಶಂಶಾದ್ ಮತ್ತು ತಸ್ಲೀಮಾ ತಮ್ಮ ಅನುಭವಗಳನ್ನು ಹಂಚಿಕೊಂಡರು. ವೇದಿಕೆಯಲ್ಲಿ ಶಾಂತಿ ಎಜುಕೇಷನಲ್ ಟ್ರಸ್ಟ್ ಚೇರ್ಮನ್ ಎ. ಎಚ್. ಮಹಮೂದ್, ಜಮಾಅತೆ ಇಸ್ಲಾಮಿ ಹಿಂದ್, ಉಳ್ಳಾಲ ಅಧ್ಯಕ್ಷ ಇಲ್ಯಾಸ್ ಇಸ್ಮಾಯಿಲ್, ಅಲ್ ಫುರ್ಖಾನ್ ಅರೇಬಿಕ್ ಇನ್‌ಸ್ಟಿಟ್ಯೂಟ್ ಅಧ್ಯಕ್ಷ ಇಸ್ಹಾಕ್ ಹಸನ್, ಕರ್ನಾಟಕ ವೆಲ್ಫೇರ್ ಸೊಸೈಟಿ ರಿಯಾದ್ ಇದರ ಕಾರ್ಯಕಾರಿ ಸಮಿತಿಯ ಸದಸ್ಯ ಮುಹಮ್ಮದ್ ಶಮೀಮ್, ಜಮಾಅತೆ ಇಸ್ಲಾಮಿ ಹಿಂದ್ ಮಹಿಳಾ ವಿಭಾಗ, ಉಳ್ಳಾಲ ಉಪಾಧ್ಯಕ್ಷೆ ಹಫ್ಸಾ, ಎಸ್.ಐ.ಒ., ಉಳ್ಳಾಲ ಅಧ್ಯಕ್ಷ ಸಾಹಿಲ್, ಜಿ.ಐ.ಒ. ಉಳ್ಳಾಲ ಕಾರ್ಯದರ್ಶಿ ಹಲೀಮಾ ನಿಧಾ ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಅಬ್ದುಲ್ ರವೂಫ್ ಮತ್ತು ಮುಹಮ್ಮದ್ ಶಾಕಿರ್ ನಿರೂಪಿಸಿದರು. ಮುಝಮ್ಮಿಲ್ ಅಹ್ಮದ್ ವಂದಿಸಿದರು.

# ಹರೇಕಳ: ಡಿವೈಎಫ್‌ಐ ನೇತೃತ್ವದಲ್ಲಿ ರಕ್ತದಾನ ಶಿಬಿರ



**ಮಂಗಳೂರು:** ಡಿವೈಎಫ್‌ಐ ಹರೇಕಳ ಘಟಕ ವತಿಯಿಂದ ಇತ್ತೀಚೆಗೆ ರಕ್ತದಾನ ಶಿಬಿರ ನಡೆಯಿತು. ಕಾರ್ಯಕ್ರಮವನ್ನು ಡಿವೈಎಫ್‌ಐ ಹರೇಕಳ ಘಟಕ ಅಧ್ಯಕ್ಷರಾದ ಸಿದ್ದೀಕ್ ಪಂಜಿಮಾಡಿ ಉದ್ಘಾಟಿಸಿ ಮಾತನಾಡಿದರು.

ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಶುಭಕೋರಿದರು.

ಕಾರ್ಯಕ್ರಮದಲ್ಲಿ ಡಿವೈಎಫ್‌ಐ ಉಳ್ಳಾಲ ತಾಲೂಕು ಕಾರ್ಯದರ್ಶಿ ರಿಝ್ವಾನ್ ಹರೇಕಳ, ಅಶ್ರಫ್ ಹರೇಕಳ, ರಫೀಕ್ ಹರೇಕಳ, ಘಟಕ ಕಾರ್ಯದರ್ಶಿ ಕೆ.ಎಚ್ ಇಕ್ಬಾಲ್, ಕೋಶಾಧಿಕಾರಿ ಖಾಲಿದ್ ಪಂಜಿಮಾಡಿ, ಶಬೀರ್ ಪಂಜಿಮಾಡಿ, ಜಾಬೀರ್ ಆಲಡ್ಕ, ಸೆಯ್ಯಿದ್ ಆಲಡ್ಕ, ರಿಝ್ವಾನ್ ಆಲಡ್ಕ, ಇರ್ಫಾನ್ ಆಲಡ್ಕ ಬಶೀರ್ ಲಚ್ಚಿಲ್, ಉಪಸ್ಥಿತರಿದ್ದರು. ಘಟಕ ಜೊತೆ ಕಾರ್ಯದರ್ಶಿ ಇರ್ಷಾದ್ ಪಂಜಿಮಾಡಿ ಸ್ವಾಗತಿಸಿ ವಂದಿಸಿದರು.

# ಅಧಿಕಾರಿಗಳಿಂದ ಕಲ್ಲಾಪು ಮೀನು ಮಾರುಕಟ್ಟೆ ತೆರವು



**ಉಳ್ಳಾಲ:** ಕಲ್ಲಾಪುವಿನಲ್ಲಿ ಸುಮಾರು ಹತ್ತು ವರುಷಗಳಿಂದ ವ್ಯಾಪಾರ ನಡೆಸುತ್ತಿದ್ದ ಮೀನು ಮಾರುಕಟ್ಟೆಯನ್ನು ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ ತೆರವುಗೊಳಿಸಿದ್ದಾರೆ.

ಕಲ್ಲಾಪು ರಸ್ತೆ ಬದಿಯಲ್ಲಿ ಮೀನು ಮಾರುಕಟ್ಟೆ ಕಾರ್ಯಾಚರಿಸುತ್ತಿತ್ತು. ಇದೀಗ ಹೆದ್ದಾರಿ ಸರ್ವಿಸ್ ರಸ್ತೆ ನಿರ್ಮಾಣದ ಕಾರಣವೊಡ್ಡಿ ಕಾರ್ಯಾಚರಣೆ ಗಿಳಿದ ಹೆದ್ದಾರಿ ಪ್ರಾಧಿಕಾರವು ಮಾರುಕಟ್ಟೆಯನ್ನು ತೆರವುಗೊಳಿಸಿದೆ.ಗುರುವಾರ ಬೆಳಿಗ್ಗೆ ಕಲ್ಲಾಪುವಿಗೆ ಜೆಸಿಬಿ ಯಂತ್ರಗಳೊಂದಿಗೆ ಹೆದ್ದಾರಿ ಗುತ್ತಿಗೆ ಕಾಮಗಾರಿಯ ತಂಡವು ಮಾರುಕಟ್ಟೆಯನ್ನ ತೆರವಿಗೆ ಮುಂದಾಗಿದ್ದು, ಈ ವೇಳೆ ಮೀನು ಮಾರಾಟಗಾರರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸ್ಥಳಕ್ಕೆ ಹೆದ್ದಾರಿ ಪ್ರಾಧಿಕಾರದ ಯೋಜನಾಧಿಕಾರಿ ಅಬ್ದುಲ್ಲ ಜಾವೆದ್ ಅಜ್ಮಿ ಅವರು ಖುದ್ದು ಭೇಟಿ ನೀಡಿ ತಕ್ಷಣವೇ ಮಾರುಕಟ್ಟೆಯನ್ನ ತೆರವಿಗೆ ಸೂಚಿಸಿದ್ದಾರೆ.ಈ ವೇಳೆ ವ್ಯಾಪಾರಿಗಳು ಕಾರ್ಯಾಚರಣೆಯನ್ನ ತಡೆಯಲು ಯತ್ನಿಸಿದ್ದಾರೆ. ಈ ಸಂದರ್ಭದಲ್ಲಿ ಜಾವೆದ್ ಅಜ್ಮಿಯವರು ಅನಧಿಕೃತ ಮೀನು ಮಾರುಕಟ್ಟೆಯನ್ನ ತೆರವುಗೊಳಿಸಲು ಈಗಾಗಲೇ ನಿಮಗೆ ನಾಲ್ಕು ತಿಂಗಳುಗಳಿಂದ ನೋಟೀಸು ನೀಡಲಾಗಿದೆ.ಹಾಗಾಗಿ ನಿಮ್ಮ ವಿರುದ್ಧ ಫೆನಾಲ್ಟಿ ಹಾಕುವ ಪ್ರಕರಣ ಇದಾಗಿದೆಯೆಂದು ವ್ಯಾಪಾರಿಗಳಿಗೆ ಎಚ್ಚರಿಕೆ ನೀಡಿದ್ದು,ಈ ಹಿನ್ನೆಲೆಯಲ್ಲಿ ಅವರು ಖುದ್ದಾಗಿ ಮಾರುಕಟ್ಟೆಯನ್ನು ತೆರವುಗೊಳಿಸಿದ್ದಾರೆ.

# ಮುಡಿಪು ದರೋಡೆ ಪ್ರಕರಣ: ಇಬ್ಬರು ಆರೋಪಿಗಳ ಬಂಧನ

**ಮುಡಿಪು :** ಇಲ್ಲಿನ ಕಾಯೆರ್ ಗೋಳಿ ಪ್ರದೇಶದಲ್ಲಿ 76 ಹರೆಯದ ವೃದ್ಧೆಯ ಮೇಲೆ ಹಲ್ಲೆ ನಡೆಸಿ ಚಿನ್ನಾಭರಣ ದರೋಡೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಬಂಧಿತ ಆರೋಪಿಗಳನ್ನು ಬೊಕ್ಕಪಟ್ಟಣ ನಿವಾಸಿಗಳಾದ ಬಾಲಸುಬ್ರಹ್ಮಣ್ಯಂ (49) ಹಾಗೂ ಶ್ಯಾಮ್ ಕುಮಾರ್ (33) ಎಂದು ಗುರುತಿಸಲಾಗಿದೆ. ಶ್ಯಾಮ್ ಕುಮಾರ್ ಆಟೋ ರಿಕ್ಷಾ ಮಾಲಿಕನಾಗಿದ್ದು, ಮಣ್ಣಗುಡ್ಡದಲ್ಲಿ ವಾಸವಾಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಆ.3ರಂದು ಮಧ್ಯಾಹ್ನ ಸುಮಾರು 1.15ಕ್ಕೆ ಮುಡಿಪು ಕಾಯೆರ್ ಗೋಳಿಯ ಭವಾನಿ ಆಚಾರ್ಯ (76) ಅವರು ಮನೆಯಲ್ಲಿ ಒಂಟಿಯಾಗಿದ್ದ ವೇಳೆ ಇಬ್ಬರು ಅಪರಿಚಿತರು ಮನೆ ಬಾಡಿಗೆ ಕುರಿತು ವಿಚಾರಿಸುವ ನೆಪದಲ್ಲಿ ಬಾಗಿಲು ತಟ್ಟಿದ್ದರು. ವೃದ್ಧೆ ಬಾಗಿಲು ತೆರೆದ ತಕ್ಷಣ ಆರೋಪಿಗಳು ಬಲವಂತವಾಗಿ ಮನೆಯೊಳಗೆ ನುಗ್ಗಿ ಅವರನ್ನು ಕೆಳಕ್ಕೆ ತಳ್ಳಿಹಾಕಿ ಹಲ್ಲೆ ನಡೆಸಿದ್ದಾರೆ. ಬಳಿಕ ಕೈಕಾಲು ಕಟ್ಟಿ, ಬಾಯಿಗೆ ಬಟ್ಟೆ ತುರುಕಿ, ಕುತ್ತಿಗೆಯಲ್ಲಿದ್ದ ಚಿನ್ನದ ಸರ ಹಾಗೂ ಬಳೆಯನ್ನು ಕಿತ್ತು ಪರಾರಿಯಾಗಿದ್ದರು. ದರೋಡೆಗೈಯಲಾದ ಚಿನ್ನಾಭರಣಗಳ ಒಟ್ಟು ತೂಕ 24 ಗ್ರಾಂ ಆಗಿದ್ದು, ಅಂದಾಜು ಮೌಲ್ಯ ಸುಮಾರು 3 ಲಕ್ಷ ರೂ. ಎಂದು ತಿಳಿದುಬಂದಿದೆ. ಈ ಸಂಬಂಧ ಕೊಣಾಜೆ ಪೊಲೀಸ್ ಠಾಣೆಯಲ್ಲಿ ಮೊ.ನಂ. 88/2026ರಂತೆ ಪ್ರಕರಣ ದಾಖಲಾಗಿತ್ತು. ಪ್ರಕರಣದ ಆರೋಪಿಗಳ ಪತ್ತೆಗಾಗಿ ವಿಶೇಷ ತಂಡ ರಚಿಸಲಾಗಿತ್ತು. ತನಿಖೆಯ ವೇಳೆ ದೊರೆತ ಖಚಿತ ಮಾಹಿತಿಯ ಆಧಾರದ ಮೇಲೆ ಆ.7ರಂದು ಮರೋಳಿ ಪ್ರದೇಶದಲ್ಲಿ ಇಬ್ಬರು ಆರೋಪಿಗಳನ್ನು ವಶಕ್ಕೆ ಪಡೆಯಲಾಗಿದೆ. ಬಂಧಿತರಿಂದ ದರೋಡೆ ಮಾಡಲಾದ ಸಂಪೂರ್ಣ ಚಿನ್ನಾಭರಣವನ್ನು ವಶಪಡಿಸಿಕೊಳ್ಳಲಾಗಿದ್ದು, ಕೃತ್ಯಕ್ಕೆ ಬಳಸಿದ್ದ ಬೈಕ್‌ನನ್ನೂ ಸ್ವಾಧೀನಪಡಿಸಿಕೊಳ್ಳಲಾಗಿದೆ. ತನಿಖೆಯ ವೇಳೆ ಮತ್ತೊಂದು ಕುತೂಹಲಕಾರಿ ಸಂಗತಿ ಬೆಳಕಿಗೆ ಬಂದಿದೆ. ಬಂಧಿತ ಆರೋಪಿಗಳು ಕೆಲವು ದಿನಗಳ ಹಿಂದೆ ಹಲಸಿನ ಹಣ್ಣು ಖರೀದಿಸುವ ನೆಪದಲ್ಲಿ ಇದೇ ಭವಾನಿ ಆಚಾರ್ಯರ ಮನೆಗೆ ಬಂದಿದ್ದರು. ಆಗ ಮನೆಯಲ್ಲಿ ಹಗಲಿನ ವೇಳೆಯಲ್ಲಿ ವೃದ್ಧೆ ಒಂಟಿಯಾಗಿರುವುದನ್ನು ಗಮನಿಸಿ ದರೋಡೆಗೆ ಸಂಚು ರೂಪಿಸಿದ್ದರು ಎಂದು ತಿಳಿದು ಬಂದಿದೆ.ಆರೋಪಿ ಬಾಲ ಸುಬ್ರಮಣ್ಯ ವಿರುದ್ಧ ಈ ಹಿಂದೆ ಬಜಪೆ ಪೊಲೀಸ್ ಠಾಣೆಯಲ್ಲಿ ಎರಡು ಸುಲಿಗೆ ಪ್ರಕರಣಗಳು, ಮುಲ್ಕಿ ಠಾಣೆಯಲ್ಲಿ ಒಂದು ಸುಲಿಗೆ ಪ್ರಕರಣ, ಮಂಗಳೂರು ಪೂರ್ವ ಠಾಣೆಯಲ್ಲಿ ಒಂದು ಸುಲಿಗೆ ಪ್ರಕರಣ, ಮಂಗಳೂರು ಉತ್ತರ ಠಾಣೆಯಲ್ಲಿ ಒಂದು ಕಳವು ಪ್ರಕರಣ ಹಾಗೂ ಮಂಗಳೂರು ಗ್ರಾಮಾಂತರ ಠಾಣೆಯಲ್ಲಿ ಒಂದು ಸುಲಿಗೆ ಪ್ರಕರಣ ದಾಖಲಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ. ಮಂಗಳೂರು ದಕ್ಷಿಣ ಉಪವಿಭಾಗದ ಸಹಾಯಕ ಪೊಲೀಸ್ ಆಯುಕ್ತೆ ವಿಜಯ ಕ್ರಾಂತಿ ಅವರ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಉಳ್ಳಾಲ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ವಿರೂಪಾಕ್ಷ ಸ್ವಾಮಿ, ಕೊಣಾಜೆ ಠಾಣೆಯ ಪಿಎಸ್‌ಐ ನಾಗರಾಜ್ ಮತ್ತು ಪುನೀತ್ ಗಾಂವಕರ್, ಎಎಸ್‌ಐ ಸೃಜನ್ ಶೆಟ್ಟಿ, ಹೆಚ್‌ಸಿ ಇಸಾಕ್, ಸುನೀಲ್, ಶೈಲೇಂದ್ರ, ಬಸವನಗೌಡ ಸೇರಿದಂತೆ ಇತರ ಸಿಬ್ಬಂದಿ ಭಾಗವಹಿಸಿದ್ದರು. ಒಂಟಿಯಾಗಿ ವಾಸಿಸುವ ಮಹಿಳೆಯರು ಅಪರಿಚಿತರಿಗೆ ಬಾಗಿಲು ತೆರೆಯುವ ಮೊದಲು ಎಚ್ಚರಿಕೆ ವಹಿಸುವುದು ಹಾಗೂ ಮನೆ ಆವರಣದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಿಕೊಳ್ಳುವುದು ಸುರಕ್ಷತಾ ದೃಷ್ಟಿಯಿಂದ ಅಗತ್ಯ ಎಂದು ಮಂಗಳೂರು ನಗರ ಪೊಲೀಸ್ ಇಲಾಖೆ ಸಾರ್ವಜನಿಕರಿಗೆ ಮನವಿ ಮಾಡಿದೆ.

# ಪಿ.ಎ. ಕಾಲೇಜ್ ಆಫ್ ಫಾರ್ಮಸಿಗೆ 'ಎ' ಗ್ರೇಡ್ ಕ್ಯೂಸಿಐ ಮಾನ್ಯತೆ




**ಕೊಣಾಜೆ:** ನಡುಪದವಿನ ಪಿ.ಎ. ಕಾಲೇಜ್ ಆಫ್ ಫಾರ್ಮಸಿಯು ಕ್ವಾಲಿಟಿ ಕೌನ್ಸಿಲ್ ಆಫ್ ಇಂಡಿಯಾ (ಕಿಅಖ) ಮಾನ್ಯತೆಯಲ್ಲಿ 'ಎ' ಗ್ರೇಡ್ ಅನ್ನು ಪಡೆದುಕೊಂಡಿದೆ. ಕಾಲೇಜಿನಲ್ಲಿ ಪ್ರಸ್ತುತ ಡಿ.ಫಾರ್ಮ್, ಬಿ.ಫಾರ್ಮ್, ಎಂ.ಫಾರ್ಮ್ ಹಾಗೂ ಫಾರ್ಮ್.ಡಿ ಕೋರ್ಸ್‌ಗಳನ್ನು ನಡೆಸಲಾಗು ತ್ತಿದ್ದು, ಔಷಧ ಶಿಕ್ಷಣ ಕ್ಷೇತ್ರದಲ್ಲಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಹಾಗೂ ಸಮಗ್ರ ಶಿಕ್ಷಣವನ್ನು ನೀಡುತ್ತಿದೆ. ಈ ಪ್ರತಿಷ್ಠಿತ ಮಾನ್ಯತೆಯೊಂದಿಗೆ ಪಿ.ಎ. ಕಾಲೇಜ್ ಆಫ್ ಫಾರ್ಮಸಿ ಕರ್ನಾಟಕ ರಾಜ್ಯದಲ್ಲಿ 6ನೇ ಸ್ಥಾನ ಹಾಗೂ ಅಖಿಲ ಭಾರತ ಮಟ್ಟದಲ್ಲಿ 51ನೇ ಸ್ಥಾನವನ್ನು ಪಡೆದುಕೊಂಡಿದೆ. ಕ್ಯೂಸಿಐ ಮಾನ್ಯತೆಯು ಶಿಕ್ಷಣದ ಗುಣಮಟ್ಟ, ಆಡಳಿತ ವ್ಯವಸ್ಥೆ, ಮೂಲಸೌಕರ್ಯ, ಸಂಶೋಧನೆ ಹಾಗೂ ನಿರಂತರ ಗುಣಮಟ್ಟದ ಸುಧಾರಣೆಯಲ್ಲಿ ಉನ್ನತ ಮಟ್ಟದ ಮಾನದಂಡಗಳನ್ನು ಕಾಯ್ದುಕೊಳ್ಳುವ ಸಂಸ್ಥೆಗಳಿಗೆ ನೀಡಲಾಗುವ ಪ್ರತಿಷ್ಠಿತ ಮಾನ್ಯತೆಯಾಗಿದೆ.

# ದಿವ್ಯಜ್ಯೋತಿಯವರ 20ನೇ ವರ್ಷದ ಕಲಾ ಕಾಣಿಕೆ ದೃಶ್ಯ ರೂಪಕದ ಆಮಂತ್ರಣ ಪತ್ರಿಕೆ ಬಿಡುಗಡೆ



**ಕುತ್ತಾರು:** ಇಲ್ಲಿನ ಪಂಡಿತ್ ಹೌಸ್ ದಿವ್ಯಜ್ಯೋತಿ ಕ್ರಿಕೆಟರ್ಸ್ ಹಾಗೂ ದಿವ್ಯಜ್ಯೋತಿ ಮಹಿಳಾ ವಿಭಾಗ ಇದರ ವತಿಯಿಂದ ಕುತ್ತಾರು ಶ್ರೀ ರಾಜರಾಜೇಶ್ವರಿ ಸಿದ್ದಿ ವಿನಾಯಕ ದೇವಸ್ಥಾನದ 40ನೇ ವರ್ಷದ ಸಾರ್ವಜನಿಕ ಶ್ರೀ ಗಣೇಶೋತ್ಸವದ ಪ್ರಯುಕ್ತ ದಿವ್ಯಜ್ಯೋತಿಯವರ 20ನೇ ವರ್ಷದ ಕಲಾ ಕಾಣಿಕೆ ದೃಶ್ಯ ರೂಪಕದ ಆಮಂತ್ರಣ ಪತ್ರಿಕೆ ಬಿಡುಗಡೆ ಸಮಾರಂಭ ಪಂಡಿತ್ ಹೌಸ್ ದಿವ್ಯಜ್ಯೋತಿ ಕಟ್ಟೆಯ ಪರಿಸರದಲ್ಲಿ ಆದಿತ್ಯವಾರ ನಡೆಯಿತು. ದಿವ್ಯಜ್ಯೋತಿ ಕ್ರಿಕೆಟರ್ಸ್ ಹಾಗು ಮಹಿಳಾ ವಿಭಾಗದವರು ತಮ್ಮ ಮುಂದಿನ ಕಾರ್ಯ ಚಟುವಟಿಕೆಗಳಿಗಾಗಿ ಕಟ್ಟೆಯ ಪರಿಸರದಲ್ಲಿ ಸ್ವಂತ ಜಾಗವನ್ನು ಖರೀದಿಸಿದ್ದು, ಇದರ ಜಾಗ ಖರೀದಿ ಮತ್ತು ಕಟ್ಟಡ ನಿರ್ಮಾಣಕ್ಕಾಗಿ ಧನ ಸಂಗ್ರಹದ ವಿಜ್ಞಾಪನಾ ಪತ್ರಿಕೆ ಬಿಡುಗಡೆ ಹಾಗೂ ಪರಿಸರದ ಇಬ್ಬರು ಅಶಕ್ತರಿಗೆ ಸಹಾಯಧನ ವಿತರಣಾ ಕಾರ್ಯಕ್ರಮವನ್ನು ಇದೇ ಸಂದರ್ಭ ನಡೆಸಿದರು. ಶ್ರೀ ಕ್ಷೇತ್ರ ಕೊಲ್ಯ ಶ್ರೀ ಮೂಕಾಂಬಿಕಾ ದೇವಸ್ಥಾನ ಶ್ರೀ ಸ್ವಾಮಿ ರಮಾನಂದಶ್ರಮ ಟ್ರಸ್ಟ್ ಅಧ್ಯಕ್ಷ ಚಂದ್ರಹಾಸ್ ಪಂಡಿತ್ ಹೌಸ್, ಆಮಂತ್ರಣ ಪತ್ರಿಕೆ ಮತ್ತು ವಿಜ್ಞಾಪನಾ ಪತ್ರವನ್ನು ಬಿಡುಗಡೆಗೊಳಿಸಿ, ದಿವ್ಯಜ್ಯೋತಿ ಕ್ರಿಕೆಟರ್ಸ್ ಹಾಗೂ ಮಹಿಳಾ ವಿಭಾಗ ಸದಾ ಸೇವಾ ಕಾರ್ಯಕ್ರಮವನ್ನು ಮಾಡುತ್ತಾ ಇದ್ದು ಅವರಿಗೆ ಸ್ವಂತ ಜಾಗದ ಅವಶ್ಯಕತೆ ನಿಜವಾಗಿಯೂ ಅಗತ್ಯವಾಗಿತ್ತು. ಇದೀಗ ಕಟ್ಟೆಯ ಪರಿಸರದಲ್ಲಿ ಜಾಗವನ್ನು ಖರೀದಿಸುವ ಮೂಲಕ ಅವರ ಮುಂದಿನ ಕಾರ್ಯಕ್ರಮಗಳು ಮತ್ತಷ್ಟು ಯಶಸ್ವಿಯಾಗಿ ನಡೆಯಲಿ ಎಂದು ಶುಭ ಹಾರೈಸಿದರು. ಉಳ್ಳಾಲ ಬ್ಲಾಕ್ ಕಾಂಗ್ರೆಸ್ ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷ ವಿವೇಕಾನಂದ ಸನಿಲ್, ಮಂಗಳೂರು ಮಂಡಲ ಭಾರತೀಯ ಜನತಾ ಪಕ್ಷ ಯುವಮೋರ್ಚಾ ಪ್ರಧಾನ ಕಾರ್ಯದರ್ಶಿ ಶರಣ್ ಶೆಟ್ಟಿ, ಕುತ್ತಾರು ಶ್ರೀ ಕೊರಗಜ್ಜನ ಆದಿ ಕ್ಷೇತ್ರಕ್ಕೆ ನಮ್ಮ ನಡಿಗೆ ಕಾರ್ಯಕ್ರಮದ ಅಧ್ಯಕ್ಷ ಪ್ರವೀಣ್ ಕುತ್ತಾರು, ಅತಿಥಿಗಳಾಗಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ದಿವ್ಯಜ್ಯೋತಿ ಕ್ರಿಕೆಟರ್ಸ್ನ ಕಾರ್ಯ ಚಟುವಟಿಕೆಗಳಿಗೆ ಮೆಚ್ಚುಗೆಯನ್ನು ಸೂಚಿಸಿ, ಮುಂದಿನ ಎಲ್ಲಾ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯಲಿ ಎಂದು ಶುಭ ಹಾರೈಸಿದರು. ದಿವ್ಯ ಜ್ಯೋತಿ ಕ್ರಿಕೆಟರ್ಸ್ ಅಧ್ಯಕ್ಷ ಯತೀಶ್ ಶೆಟ್ಟಿ ಮಾತನಾಡಿ ದಿವ್ಯಜ್ಯೋತಿ ಕ್ರಿಕೆಟರ್ಸ್ನ ಜಾಗ ಖರೀದಿ, ಕಟ್ಟಡ ನಿರ್ಮಾಣದ ಯೋಜನೆಗಳನ್ನು ತಿಳಿಸಿ ಇಷ್ಟೆಲ್ಲಾ ಖರ್ಚು ವೆಚ್ಚಗಳಿದ್ದರೂ ದಿವ್ಯಜ್ಯೋತಿ ಕ್ರಿಕೆಟರ್ಸ್ನ ಸೇವಾ ಯೋಜನೆಗಳು ನಿಲ್ಲುವುದಿಲ್ಲ ಇವತ್ತು ಸಹ ಮೂರು ಮಂದಿ ಅಶಕ್ತರಿಗೆ ಧನಸಹಾಯವನ್ನು ನೀಡುತ್ತಿದ್ದೇವೆ, ದಿವ್ಯ ಜ್ಯೋತಿ ಕ್ರಿಕೆಟರ್ಸ್ನ ಸದಸ್ಯ ಬಂಧುಗಳ ಮನೆಯಲ್ಲಿ ಹೆಣ್ಣು ಮಕ್ಕಳ ಮದುವೆ ಇದ್ದರೆ ತಲಾ ಹತ್ತು ಸಾವಿರ ರೂಪಾಯಿ ಸಹಾಯಧನವನ್ನು ನೀಡುತ್ತೇವೆ ಹಾಗೆಯೇ ಯಾವುದೇ ಸದಸ್ಯ ಬಂದುಗಳ ಮನೆಯಲ್ಲಿ ಆಪತ್ತು ನಡೆದರೂ ಅದಕ್ಕೆ ತಕ್ಷಣ ತುರ್ತಾಗಿ ಸ್ಪಂದಿಸುತ್ತೇವೆ ಎಂದು ತಿಳಿಸಿದರು. ದಿವ್ಯ ಜ್ಯೋತಿ ಸೇವಾ ಟ್ರಸ್ಟ್ ಅಧ್ಯಕ್ಷ ಸತೀಶ್ ಪೂಜಾರಿ, ಗೌರವಾಧ್ಯಕ್ಷ ಅಶೋಕ್ ಮಹಿಳಾ ವಿಭಾಗದ ಅಧ್ಯಕ್ಷೆ ಶ್ರೀಮತಿ ರಮಣಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ದಿವ್ಯಜ್ಯೋತಿ ಕ್ರಿಕೆಟರ್ ಸದಸ್ಯ ನಿಶಾನ್ ಸ್ವಾಗತಿಸಿದರು.

# ಶ್ರೀ ನಿತ್ಯಾನಂದ ಯುವಕ ಮಂಡಲದಲ್ಲಿ ಸ್ವಾತಂತ್ರ್ಯೋತ್ಸವ



**ತೊಕ್ಕೊಟ್ಟು:** ಶ್ರೀ ನಿತ್ಯಾನಂದ ಯುವಕ ಮಂಡಲ (ರಿ.) ಕೆರೆಬೈಲ್ ತೊಕ್ಕೊಟ್ಟು ವತಿಯಿಂದ ದೇಶದ 80ನೇ ಸ್ವಾತಂತ್ರ್ಯೋತ್ಸವ ಆಚರಿಸಲಾಯಿತು. ನಿವೃತ್ತ ಸೇನಾನಿ ವೆಂಕಟೇಶ್ ಕುಂಪಲ ಧ್ವಜಾರೋಹಣ ನೆರವೇರಿಸಿದರು.

ಸದಾಶಿವ ಆಚಾರ್ಯ ವಂದೇ ಮಾತರಂ ಹಾಡಿದರು. ಯುವಕ ಮಂಡಲದ ಅಧ್ಯಕ್ಷ ಲೋಕನಾಥ್ ಶೆಟ್ಟಿ, ಉದ್ಯಮಿ ಗಣೇಶ್ ಶೆಟ್ಟಿ ಜಪ್ಪಿನಮೊಗರು, ಅನ್ವಿತ್ ಎಲೆಕ್ಟ್ರಾನಿಕ್ಸ್ ಮಾಲಕ ಪ್ರಕಾಶ್ ತೊಕ್ಕೊಟ್ಟು, ಸಚಿವರ ಆಪ್ತ ಸಹಾಯಕ ಭವಿತ್ ಬಂಗೇರಾ, ಎಬಿಸಿ ಅಧ್ಯಕ್ಷ ದೀಕ್ಷಿತ್ ಹಾಗೂ ಯುವಕ ಮಂಡಲದ ಮಾಜಿ ಅಧ್ಯಕ್ಷ ದಯಾನಂದ ತೊಕ್ಕೊಟ್ಟು ಉಪಸ್ಥಿತರಿದ್ದರು. ಭಗವಾನ್ ದಾಸ್ ಕೃಷ್ಣನಗರ ಕಾರ್ಯಕ್ರಮ ನಿರೂಪಿಸಿದರು.

# ಅಂಬ್ಲಮೊಗರು ಸರಕಾರಿ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ



**ಅಂಬ್ಲಮೊಗರು:** ಅಂಬ್ಲಮೊಗರು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 80ನೇ ಸ್ವಾತಂತ್ರ್ಯ ದಿನವನ್ನು ಸಂಭ್ರಮದಿಂದ ಆಚರಿಸಲಾಯಿತು. ಮುಖ್ಯಶಿಕ್ಷಕ ಜಗದೀಶ ಶೆಟ್ಟಿ ಎ. ಧ್ವಜಾರೋಹಣ ನೆರವೇರಿಸಿದರು.

ಉಳ್ಳಾಲ ತಾಲೂಕು ಪಂಚಭಾಗ್ಯ ಯೋಜನಾ ಅನುಷ್ಠಾನ ಸಮಿತಿಯ ಅಧ್ಯಕ್ಷ ಮೊಹಮ್ಮದ್ ರಫೀಕ್ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಎಸ್‌ಡಿಎಂಸಿ ಅಧ್ಯಕ್ಷ ಅಬುಸಾಲಿ, ಜಯಶೀಲ ಶೆಟ್ಟಿ ಪಡ್ಯಾರಮನೆ, ಮಹಮ್ಮದ್ ರಶೀದ್ ಮದಕ,



ಎಸ್‌ಡಿಎಂಸಿ ಸರ್ವ ಸದಸ್ಯರು ಹಾಗೂ ಪೋಷಕರು ಉಪಸ್ಥಿತರಿದ್ದರು.

ಶಿಕ್ಷಕಿ ಗೀತಾ ಕೆ. ಸ್ವಾಗತಿಸಿದರು. ನಳಿನಾಕ್ಷಿ ನಿರೂಪಿಸಿದರು. ವಿದ್ಯಾ ವಂದಿಸಿದರು.

# ಸ್ತನ್ಯಪಾನದ ಮಹತ್ವದ ಬಗ್ಗೆ ಪ್ರತಿಯೊಬ್ಬರಲ್ಲೂ ಜಾಗೃತಿ ಮೂಡಿಸುವ ಅಗತ್ಯವಿದೆ : ರೋಟರಿ ಡೌನ್‌ಟೌನ್ ಕ್ಲಬ್ ಅಧ್ಯಕ್ಷ ಉಮೇಶ್ ಗಟ್ಟಿ



**ಉಳ್ಳಾಲ:** ತಾಯಿ ಮತ್ತು ಮಗುವಿನ ಆರೋಗ್ಯದ ದೃಷ್ಟಿಯಿಂದ ಸ್ತನ್ಯಪಾನದ ಮಹತ್ವದ ಬಗ್ಗೆ ಪ್ರತಿಯೊಬ್ಬರಲ್ಲೂ ಜಾಗೃತಿ ಮೂಡಿಸುವ ಅಗತ್ಯವಿದೆ. ಮೊದಲ ಆರು ತಿಂಗಳು ಮಗುವಿಗೆ ತಾಯಿಯ ಎದೆಹಾಲು ನೀಡುವುದರಿಂದ ಮಗುವಿನ ರೋಗನಿರೋಧಕ ಶಕ್ತಿ ಹೆಚ್ಚುವುದರ ಜೊತೆಗೆ ಆರೋಗ್ಯಕರ ಬೆಳವಣಿಗೆಗೆ ಸಹಕಾರಿಯಾಗುತ್ತದೆ ಎಂದು ರೋಟರಿ ಡೌನ್‌ಟೌನ್ ಕ್ಲಬ್ ಮಂಗಳೂರು ಅಧ್ಯಕ್ಷ ಉಮೇಶ್ ಗಟ್ಟಿ ಹೇಳಿದರು.

ಯೆನೆಪೋಯ ವೈದ್ಯಕೀಯ ಕಾಲೇಜು ಆಸ್ಪತ್ರೆ, ಜಸ್ಟಿಸ್ ಕೆ. ಎಸ್. ಹೆಗ್ಡೆ ಆಸ್ಪತ್ರೆ, ದ.ಕ. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಪ್ರಾಥಮಿಕ ಆರೋಗ್ಯ ಕೇಂದ್ರ ಕೋಟೆಕಾರ್, ಉಚ್ಚಿಲ ಬೋವಿ ವಿದ್ಯಾ ಸಂಸ್ಥೆಗಳು ಉಚ್ಚಿಲ ಇವುಗಳ ಸಂಯುಕ್ತಾಶ್ರಯದಲ್ಲಿ ವಿಶ್ವ ಸ್ತನ್ಯಪಾನ ಸಪ್ತಾಹದ ಅಂಗವಾಗಿ ಉಚಿತ ಆರೋಗ್ಯ ಹಾಗೂ ಕಣ್ಣಿನ ತಪಾಸಣಾ ಶಿಬಿರ ಉಚ್ಚಿಲ ಬೋವಿ ವಿದ್ಯಾ ಸಂಸ್ಥೆಗಳ ವಜ್ರಮಹೋತ್ಸವ ಸ್ಮಾರಕ ಕಟ್ಟಡದಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಸಮಾಜದಲ್ಲಿ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಗ್ರಾಮೀಣ ಭಾಗದ ಜನರಿಗೆ ತಜ್ಞ ವೈದ್ಯರಿಂದ ಉಚಿತ ಆರೋಗ್ಯ ತಪಾಸಣೆ ಪಡೆಯಲು ಇಂತಹ ಶಿಬಿರಗಳು ಉತ್ತಮ ಅವಕಾಶ ಕಲ್ಪಿಸುತ್ತವೆ. ವಿಶೇಷವಾಗಿ ಕಣ್ಣಿನ ಸಮಸ್ಯೆಗಳನ್ನು ಆರಂಭಿಕ ಹಂತದಲ್ಲೇ ಪತ್ತೆಹಚ್ಚಿ ಸೂಕ್ತ ಚಿಕಿತ್ಸೆ ಪಡೆಯುವುದು ಅಗತ್ಯ.

ಆರೋಗ್ಯ ಇಲಾಖೆ, ಜಿಲ್ಲಾಡಳಿತ, ವೈದ್ಯಕೀಯ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು ಹಾಗೂ ವಿವಿಧ ಸಂಘಟನೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಿದಾಗ ಇಂತಹ ಸೇವಾ ಕಾರ್ಯಕ್ರಮಗಳ ಪ್ರಯೋಜನ ಹೆಚ್ಚಿನ ಜನರಿಗೆ ತಲುಪಲಿದೆ. "ಆರೋಗ್ಯವಂತ ತಾಯಿ, ಆರೋಗ್ಯವಂತ ಮಗು ಮತ್ತು ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಆರೋಗ್ಯ ಜಾಗೃತಿ ಅತ್ಯಗತ್ಯ" ಎಂದು ಅವರು ಹೇಳಿದರು.

ಸೋಮೇಶ್ವರ ಪುರಸಭೆ ಉಪಾಧ್ಯಕ್ಷ ರವಿಶಂಕರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಡಾ. ವಿಜಯಲಕ್ಷ್ಮೀ ಮಕ್ಕಳ ಆರೋಗ್ಯ ಕಾಪಾಡುವ ಬಗ್ಗೆ ಮಾಹಿತಿ ನೀಡಿದರು. ಕೌನ್ಸಿಲರ್ ಸಲಾಮ್ ಯು. ಆರೋಗ್ಯ ಶಿಬಿರದ ಅಗತ್ಯತೆ ಬಗ್ಗೆ ವಿವರಿಸಿದರು.ಡಾ. ಜಯಶ್ರೀ ಉಚ್ಚಿಲ, ಕಣ್ಣಿನ ತಜ್ಞ ಡಾ. ತನ್ವೀ, ಡಾ. ಸೀಮಾ, ಡಾ. ವಿದ್ಯಾಲಕ್ಷ್ಮೀ, ಡಾ. ಪ್ರಾಂಜಲಿ, ರೋಟರಿ ಡೌನ್ ಟೌನ್ ಕ್ಲಬ್ ಮಂಗಳೂರು ಕಾರ್ಯದರ್ಶಿ ಪವಿತ್ರ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.ಬೋವಿ ಶಾಲಾ ಸಂಚಾಲಕ ಕರುಣಾಕರ ಉಚ್ಚಿಲ ಸ್ವಾಗತಿಸಿದರು. ಪ್ರಾಥಮಿಕ ಆರೋಗ್ಯ ಕೇಂದ್ರ ವೈದ್ಯಾಧಿಕಾರಿ ಸವಿತಾ ಪ್ರಾಸ್ತಾವಿಕವಾಗಿ ಮಾತನಾಡಿದರು. ದೈಹಿಕ ಶಿಕ್ಷಕ ಮೋಹನ್ ದಾಸ್ ರೈ ಕಾರ್ಯಕ್ರಮ ನಿರೂಪಿಸಿದರು.

## ಉಳ್ಳಾಲ ವಲಯ ನಾಡದೋಣಿ , ಗಿಲ್‌ನೆಟ್ ಮೀನುಗಾರರ ಸಂಘಕ್ಕೆ ನೂತನ ಸಮಿತಿ ರಚನೆ

**ಉಳ್ಳಾಲ:** ಉಳ್ಳಾಲ ವಲಯ ನಾಡದೋಣಿ ಮತ್ತು ಗಿಲ್‌ನೆಟ್ ಮೀನುಗಾರರ ಸಂಘ (ರಿ.), ಕೊಡಿ, ಕೋಟೆಪುರ, ಇದರ ಮಹಾಸಭೆ ಇತ್ತೀಚೆಗೆ ನಡೆಯಿತು . ಈ ಸಭೆಯಲ್ಲಿ 2026–



2027ನೇ ಅವಧಿಗೆ ನೂತನ ಆಡಳಿತ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಆಸೀಫ್ ಎಂ.ಬಿ.,ಉಪಾಧ್ಯಕ್ಷರಾಗಿ ರಫೀಕ್, ಕಾರ್ಯದರ್ಶಿಯಾಗಿ ಇಬ್ರಾಹಿಂ ಖಲೀಲ್, ಜೊತೆ ಕಾರ್ಯದರ್ಶಿಯಾಗಿ ಜಮಾಲ್, ಕೋಶಾಧಿಕಾರಿಯಾಗಿ ಸಿರಾಜ್ ಉಳ್ಳಾಲ್ ಹಾಗೂ ಇತರ ಮೂವರನ್ನು ಕಾರ್ಯಕಾರಿ ಸಮಿತಿಗೆ ಆಯ್ಕೆ ಮಾಡಲಾಯಿತು.

## ಜನ ಶಿಕ್ಷಣ ಟ್ರಸ್ಟ್‌ನಲ್ಲಿ ಪಾಲೆ ಮರ ಆಟಿ ಔಷಧಿ ವಿತರಣೆ

**ಮುಡಿಪು:** ಜನ ಶಿಕ್ಷಣ ಟ್ರಸ್ಟ್ ಸ್ಟೈಲ್ ಸ್ಕಿಲ್ ಸ್ಕೂಲ್ ನಲ್ಲಿ ಮಳೆಗಾಲದಲ್ಲಿ ಬರುವ ಶೀತ, ಕೆಮ್ಮು,ಜ್ವರ ಹಾಗೂ ಇತರ ಸೋಂಕುಗಳನ್ನು ತಡೆಯುವ ರೋಗ ನಿರೋಧಕ ಶಕ್ತಿಯನ್ನು ವೃದ್ಧಿಸುವ ಶಕ್ತಿ ಶಾಲಿ ಗಿಡ ಮೂಲಿಕೆ ಸಪ್ತಪಣಿ ಪಾಲೆ ಮರ ತೊಗಟೆನಿಂದ ತಯಾರಿಸಿದ ಆಟಿ ಔಷಧಿಯನ್ನು ವಿತರಿಸಲಾಯಿತು.

ಕೌಶಲ ಕೇಂದ್ರ ವಿದ್ಯಾರ್ಥಿಗಳಿಗೆ ಆಟಿ ಊಟ ಪ್ರಕೃತಿಯಲ್ಲಿ ಸಿಗುವ ಸೊಪ್ಪು ತರಕಾರಿಗಳ ಕುರಿತು ಮಾಹಿತಿ ಚರ್ಚೆ ನಡೆಸಲಾಯಿತು. ಕೌಶಲ ತರಬೇತಿ ವಿದ್ಯಾರ್ಥಿನಿ ಕುರ್ನಾಡು ಅಕ್ಷತಾ ಮನೆಯಲ್ಲಿ ತಯಾರಿಸಿ ತಂದಿದ್ದ ಪಾಲೆ ಮರ ಔಷಧಿ ಕಸಾಯಿ ಮತ್ತು ಮೆಂತೆ ಅನ್ನವನ್ನು ಎಲ್ಲರಿಗೂ ಹಂಚಿದರು. ಜಿಲ್ಲಾ ಸ್ವಚ್ಚತಾ ರಾಯಭಾರಿ ಶೀನ ಶೆಟ್ಟಿ ಸಂವಾದ ನಡೆಸಿದರು. ಜನ ಶಿಕ್ಷಣ ಟ್ರಸ್ಟ್ ನಿರ್ದೇಶಕರು, ಶಿಕ್ಷಕಿಯರು, ಸಂಯೋಜಕರು ಭಾಗವಹಿಸಿದ್ದರು.

## ಜನ ಶಿಕ್ಷಣ ಟ್ರಸ್ಟ್‌ನಲ್ಲಿ ಪಾಲೆ ಮರ ಆಟಿ ಔಷಧಿ ವಿತರಣೆ



**ಮುಡಿಪು:** ಜನ ಶಿಕ್ಷಣ ಟ್ರಸ್ಟ್ ಸ್ಟೈಲ್ ಸ್ಕಿಲ್ ಸ್ಕೂಲ್ ನಲ್ಲಿ ಮಳೆಗಾಲದಲ್ಲಿ ಬರುವ ಶೀತ, ಕೆಮ್ಮು,ಜ್ವರ ಹಾಗೂ ಇತರ ಸೋಂಕುಗಳನ್ನು ತಡೆಯುವ ರೋಗ ನಿರೋಧಕ ಶಕ್ತಿಯನ್ನು ವೃದ್ಧಿಸುವ ಶಕ್ತಿ ಶಾಲಿ ಗಿಡ ಮೂಲಿಕೆ ಸಪ್ತಪಣಿ ಪಾಲೆ ಮರ ತೊಗಟೆನಿಂದ ತಯಾರಿಸಿದ ಆಟಿ ಔಷಧಿಯನ್ನು ವಿತರಿಸಲಾಯಿತು.

ಕೌಶಲ ಕೇಂದ್ರ ವಿದ್ಯಾರ್ಥಿಗಳಿಗೆ ಆಟಿ ಊಟ ಪ್ರಕೃತಿಯಲ್ಲಿ ಸಿಗುವ ಸೊಪ್ಪು ತರಕಾರಿಗಳ ಕುರಿತು ಮಾಹಿತಿ ಚರ್ಚೆ ನಡೆಸಲಾಯಿತು. ಕೌಶಲ ತರಬೇತಿ ವಿದ್ಯಾರ್ಥಿನಿ ಕುರ್ನಾಡು ಅಕ್ಷತಾ ಮನೆಯಲ್ಲಿ ತಯಾರಿಸಿ ತಂದಿದ್ದ ಪಾಲೆ ಮರ ಔಷಧಿ ಕಸಾಯಿ ಮತ್ತು ಮೆಂತೆ ಅನ್ನವನ್ನು ಎಲ್ಲರಿಗೂ ಹಂಚಿದರು. ಜಿಲ್ಲಾ ಸ್ವಚ್ಚತಾ ರಾಯಭಾರಿ ಶೀನ ಶೆಟ್ಟಿ ಸಂವಾದ ನಡೆಸಿದರು. ಜನ ಶಿಕ್ಷಣ ಟ್ರಸ್ಟ್ ನಿರ್ದೇಶಕರು, ಶಿಕ್ಷಕಿಯರು, ಸಂಯೋಜಕರು ಭಾಗವಹಿಸಿದ್ದರು.

## ಹಳೆಕೋಟೆ ಬುಲ್ ಬುಲ್‌ಗಳಿಗೆ ಹಿರೇಕ್ ಗರಿ ಪ್ರಶಸ್ತಿ ಪ್ರಧಾನ

**ತೊಕ್ಕೊಟ್ಟು :** ಹಳೆಕೋಟೆ ಬುಲ್ ಬುಲ್ ಗಳಿಗೆ ಹಿರೇಕ್ ಗರಿ ಪ್ರಶಸ್ತಿ ಪ್ರಧಾನ ಸಯ್ಯದ್ ಮದನಿ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಹಳೆಕೋಟೆಯಲ್ಲಿ ನಡೆಸಲ್ಪಡುತ್ತಿರುವ ಸೈಯದ್ ಮದನಿ ಉರ್ದು ಹಿರಿಯ ಪ್ರಾಥಮಿಕ ಶಾಲೆಯ ಬುಲ್ ಬುಲ್ ಗಳಾದ ರುಷದ ಬಲ್ಕಿಸ್, ಮರಿಯಂ ಹಫೀಫ, ಫಾತಿಮಾ ಅಲೀನ, ಫಾತಿಮಾ ಹಸ್ನ ರವರು ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ನ ಬುಲ್ ಬುಲ್ ವಿಭಾಗದಲ್ಲಿ ರಾಜ್ಯಪಾಲರಿಂದ ಪಡೆ ಮಾಡಲ್ಪಡುವ ಅತ್ಯುನ್ನತ ಪ್ರಶಸ್ತಿಯಾದ ಹಿರೇಕ್ ಗರಿ ಪ್ರಶಸ್ತಿಯನ್ನು ಪಡೆದಿರುವರು. ಇತ್ತೀಚೆಗೆ ಜಿಲ್ಲಾ ತರಬೇತಿ ಸಂಸ್ಥೆ ಯಲ್ಲಿ ಪ್ರಶಸ್ತಿ ಪ್ರಧಾನ ಮಾಡಲಾಯಿತು. ವಿದ್ಯಾರ್ಥಿಗಳ ಈ ಸಾಧನೆಗೆ ಸಯ್ಯದ್ ಮದನಿ ಚಾರಿಟೇಬಲ್ ಟ್ರಸ್ಟ್ ನ ಅಧ್ಯಕ್ಷರಾದ ಜನಾಬ್ ಬಿಜಿ ಹನೀಫ್ ಹಾಜಿ, ಅಭಿನಂದಿಸಿ ಸಹಕರಿಸಿದ ಶಿಕ್ಷಕಿ ಶ್ರೀಮತಿ ಹಸೀನ್ ತಾಜ್ ರವರಿಗೆ ಕೃತಜ್ಞತೆಯನ್ನು ಸಲ್ಲಿಸಿರುವರು.

## ರಾಣಿ ಅಬ್ಬಕ್ಕ ಖಾಸಗಿ ಬಸ್ ನೌಕರರ ಸಂಘದಿಂದ ತೀವ್ರ ಖಂಡನೆ

**ಮಂಗಳೂರು:** ಪ್ರಿನ್ಸ್ ಬಸ್ ಮಾಲಕರಾದ ಡೇವಿಡ್ ಡಿಸೋಜಾ ಅವರನ್ನು ಹಾಡುಹಗಲೇ ಗುಂಡಿಕ್ಕಿ ಹತ್ಯೆ ಮಾಡಿರುವ ಘಟನೆ ಅತ್ಯಂತ ಆಘಾತಕಾರಿ ಹಾಗೂ ಖಂಡನೀಯ ಎಂದು ರಾಣಿ ಅಬ್ಬಕ್ಕ ಖಾಸಗಿ ಬಸ್ ನೌಕರರ ಸಂಘ (ರಿ.), ಮಂಗಳೂರು ತೀವ್ರವಾಗಿ ಖಂಡಿಸಿದೆ.

ಸಾರ್ವಜನಿಕವಾಗಿ ಗೌರವ ಹೊಂದಿದ್ದ ಬಸ್ ಉದ್ಯಮದ ಮಾಲಕರೊಬ್ಬರನ್ನು ಹಾಡುಹಗಲೇ ಗುಂಡಿಕ್ಕಿ ಹತ್ಯೆ ಮಾಡಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಇಂತಹ ಅಮಾನವೀಯ ಕೃತ್ಯಗಳು ಸಮಾಜದಲ್ಲಿ ಭಯದ ವಾತಾವರಣವನ್ನು ಸೃಷ್ಟಿಸುವುದರ ಜೊತೆಗೆ ಸಾರ್ವಜನಿಕರ ಸುರಕ್ಷತೆಯ ಬಗ್ಗೆಯೂ ಗಂಭೀರ ಪ್ರಶ್ನೆಗಳನ್ನು ಮೂಡಿಸುತ್ತವೆ ಎಂದು ಸಂಘ ತಿಳಿಸಿದೆ. ಡೇವಿಡ್ ಡಿಸೋಜಾ ಅವರ ನಿಧನಕ್ಕೆ ಸಂತಾಪ ಸೂಚಿಸಿರುವ ಸಂಘ, ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲಿ ಹಾಗೂ ಅವರ ಕುಟುಂಬ ಸದಸ್ಯರು, ಬಂಧು–ಬಳಗ ಮತ್ತು ಆತ್ಮೀಯರಿಗೆ ಈ ದುಃಖವನ್ನು ಭರಿಸುವ ಶಕ್ತಿಯನ್ನು ದೇವರು ಕರುಣಿಸಲಿ ಎಂದು ಪ್ರಾರ್ಥಿಸಿದೆ.



ಧಾರಾಕಾರ ಮಳೆಯಿಂದಾಗಿ ನಾಟೆಕಲ್ ಸಮೀಪದ ಗ್ರೀನ್ ಭಾಗ್ ಎಂಬಲ್ಲಿ ಮನೆಯ ಆವರಣ ಗೋಡೆ ಕುಸಿದುಬಿದ್ದ ಪರಿಣಾಮ ಬಾವಿಗೆ ಹಾನಿ ಸಂಭವಿಸಿದೆ.ಇಲ್ಲಿನ ನರ್ಝೀರ್ ಎಂಬವರ ಮನೆಯ ಮನೆಯ ಆವರಣ ಗೋಡೆ ಸೋಮವಾರ ರಾತ್ರಿ ಕುಸಿದು ಬಾವಿಯ ಮೇಲೆ ಬಿದ್ದಿದೆ. ಇದರಿಂದ ಬಾವಿಗೆ ಹಾನಿಯಾಗಿದೆ.

## ಮಗುವಿಗೆ ಮೊದಲ ಆರು ತಿಂಗಳು ಎದೆ ಹಾಲು ಮಾತ್ರ ನೀಡಬೇಕು: ಶ್ರೀಧರ್ ಎಂ.ಎಸ್

**ಮಂಗಳೂರು:** ಮಗುವಿಗೆ ಜನನದ ಅದ–[…]ರ್ ಗಂಟೆಯೊಳಗೆ ಹಾಲು ಉಣಿಸಬೇಕು. ಮೊದಲ ಆರು ತಿಂಗಳು ಎದೆ ಹಾಲು ಮಾತ್ರ ನೀಡಬೇಕು. ಕೊಲೆಸ್ಟ್ರಾಲ್ ಹಾಲು ಮಗುವಿಗೆ ರೋಗ ನಿರೋದ–[…]ಕ ಶಕ್ತಿಯನ್ನು ಹೆಚ್ಚಿಸುವ ಅಮೂಲ್ಯ ಆಹಾರವಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ಉಪನಿರ್ದೇಶಕರು ಶ್ರೀಧರ್ ಎಂ.ಎಸ್ ತಿಳಿಸಿದರು



ಮಹಿಳಾ ಮತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಶು ಅಭಿವೃದ್ಧಿ ಯೋಜನೆ ಮಂಗಳೂರು ನಗರ ಮತ್ತು ತಾಲೂಕು ಪಂಚಾಯತ್ ಮಂಗಳೂರು ಹಾಗೂ ಲಯನ್ಸ್ ಕ್ಲಬ್ ಪಂಪ್ವೆಲ್ , ಮಂಗಳೂರು ಇದರ ಸಹಯೋಗದೊಂದಿಗೆ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಜರಗಿದ ಸ್ತನ್ಯಪಾನ ಸಪ್ತಾಹ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ತಾಲೂಕು ಪಂಚಾಯತ್ ಮಂಗಳೂರಿನ ಕಾರ್ಯನಿರ್ವಾಹಕ ಅಧಿಕಾರಿ ಮಹೇಶ್ ಹೊಳ್ಳ ವಹಿಸಿದ್ದರು. ಕಾರ್ಯಕ್ರಮದಲ್ಲಿ ಜಿಲ್ಲಾ ನಿರೂಪಣಾಧಿಕಾರಿ ರಶ್ಮಿ ಕೆ.ಎಂ, ಲಯನ್ಸ್ ಕ್ಲಬ್ ಅಧ್ಯಕ್ಷರು ಸನ್ಮಯ್ ಹೆಗ್ಡೆ, ಸ್ಥಾಪಕ ಅಧ್ಯಕ್ಷರು ರಾಜೇಶ್ ಶೆಟ್ಟಿ, ಮಹಾಬಲ ಆಳ್ವ ಹಾಗೂ ಸಂಪನ್ಮೂಲ ವ್ಯಕ್ತಿಯಾಗಿ ಡಾ। ಸಬಿತಾ ನಾಯ್ಕ್, ಉಪಪ್ರಾಂಶುಪಾಲೆ ನಿಟ್ಟೆ ನರ್ಸಿಂಗ್ ಹೋಮ್ ಮಾಹಿತಿಯನ್ನು ನೀಡಿದರು.

ಸಭೆಯಲ್ಲಿ ಲಯನ್ಸ್ ಕ್ಲಬ್ ಸದಸ್ಯರಾದ ಶಬಬರಿ, ಮಾಜಿ ಕಾರ್ಪೊರೇಟರ್ ವೀಣಾಮಂಗಳ, ಗರ್ಭಿಣಿಯರು, ಬಾಣಂತಿಯರು, ಮಕ್ಕಳ ಪೋಷಕರು, ಸ್ತ್ರೀಶಕ್ತಿ ಸಂಘದ ಸದಸ್ಯರು, ಕಿಶೋರಿಯರು. ಅಂಗನವಾಡಿ ಕಾರ್ಯಕರ್ತೆಯರು, ಮೇಲ್ವಿಚಾರಕರು ಸೇರಿದಂತೆ 801 ಮಂದಿ ಭಾಗವಹಿಸಿದ್ದರು.

ಮೇಲ್ವಿಚಾರಕಿ ಸಿಂಧು ಕೆ.ಎಮ್ ನಿರೂಪಿಸಿದರು. ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶ್ವೇತಾ ಕೆ. ಸ್ವಾಗತಿಸಿದರು. ನಾಗರತ್ನ ವಂದಿಸಿದರು.

### ಕರ್ನಾಟಕ ಮುಸ್ಲಿಂ ಅಡ್ವಕೇಟ್ಸ್ ಫೋರಂ ನೂತನ ಅಧ್ಯಕ್ಷ ಮುಜಫರ್ ಅಹ್ಮದ್‌ಗೆ ಅದ್ದೂರಿ ಸನ್ಮಾನ

## ನೂತನ ಪದಾಧಿಕಾರಿಗಳಿಗೆ ದಕ್ಷಿಣ ಕನ್ನಡ ಜಿಲ್ಲೆಯ ವತಿಯಿಂದ ಅಭಿನಂದನೆ

**ಮಂಗಳೂರು:** ಕರ್ನಾಟಕ ಮುಸ್ಲಿಂ ಅಡ್ವ–ಕೇಟ್ಸ್ ಫೋರಂ (ರಿ.) ಕರ್ನಾಟಕ ರಾಜ್ಯದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಹೈಕೋರ್ಟ್ ವಕೀಲ ಅಡ್ವೋಕೇಟ್ ಮುಜಫರ್ ಅಹ್ಮದ್ ಹಾಗೂ ನೂತನ ಪದಾಧಿಕಾರಿಗಳಿಗೆ ದಕ್ಷಿಣ ಕನ್ನಡ ಜಿಲ್ಲೆಯ ವತಿಯಿಂದ ಅಭಿನಂದನಾ ಹಾಗೂ ಸನ್ಮಾನ ಕಾರ್ಯಕ್ರಮ ಮಂಗಳೂರಿನ ಫಳ್ನೀರ್‌ನ ಅಲ್–ಎಹ್ಸಾನ್ ಮಸೀದಿಯ ಆಡಿಟೋರಿಯಂನಲ್ಲಿ ಅದ್ದೂರಿಯಾಗಿ ನಡೆಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಿರಿಯ ವಕೀಲ ಹಾಗೂ ನೋಟರಿ ಅಡ್ವೋ–ಕೇಟ್ ಅಬ್ದುಲ್ ಅಝೀಜ್ ವಹಿಸಿದ್ದರು. ಹಾಫೀಜ್ ಅಬ್ದುಲ್ ಮುಹೈಮೀನ್ ನದ್ವಿ ಕೆಂಪಿ ಖುರಾನ್ ಪಠಣದೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ದಕ್ಷಿಣ ಕನ್ನಡ ಜಿಲ್ಲೆಯ ಹಿರಿಯ ವಕೀಲ ಅಡ್ವೋ–ಕೇಟ್ ಇಸ್ಮಾಯಿಲ್ ನೆಲ್ಯಾಡಿ ಸ್ವಾಗತಿಸಿದರು. ಹಿರಿಯ ವಕೀಲ ನೂರುದ್ದೀನ್ ಸಾಲ್ಮರ ಪುತ್ತೂರು ಪ್ರಸ್ತಾವಿಕವಾಗಿ ಮಾತನಾಡಿ, ಫೋರಂನ ಚುನಾವಣಾ ಪ್ರಕ್ರಿಯೆ ಹಾಗೂ ಜಿಲ್ಲೆಯ ಮುಸ್ಲಿಂ ವಕೀಲರು





ಸಮುದಾಯದ ಕಷ್ಟದ ಸಂದರ್ಭಗಳಲ್ಲಿ ಸಲ್ಲಿಸಿದ ಸೇವೆಗಳ ಕುರಿತು ವಿವರಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ನೂತನ ಅಧ್ಯಕ್ಷ ಮುಜಫರ್ ಅಹ್ಮದ್, ಸಮುದಾಯದಲ್ಲಿ ಕಾನೂನು ಜಾಗೃತಿ ಮೂಡಿಸುವುದು ಹಾಗೂ ವಕೀಲರ ಹಕ್ಕುಗಳ ರಕ್ಷಣೆಗೆ ಕರ್ನಾಟಕ ಮುಸ್ಲಿಂ ಅಡ್ವಕೇಟ್ಸ್ ಫೋರಂ ಬದ್ಧವಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ನೂತನ ಪದಾಧಿಕಾರಿಗಳಾದ ಉಪಾಧ್ಯಕ್ಷೆ ಶ್ರೀಮತಿ ತರನ್ನುಮ್, ಪ್ರಧಾನ ಕಾರ್ಯದರ್ಶಿ ಮೊಯಿನುಲ್ಲಾ ಅಬ್ಬಾಸಿ, ಕೋಶಾಧಿಕಾರಿ ವಾಸೀಮ್ ಅಹ್ಮದ್ ಹಾಗೂ ಜೊತೆ ಕಾರ್ಯದರ್ಶಿ ಸಿರಾಜುದ್ದೀನ್ ಅಹ್ಮದ್ ಅವರನ್ನು ಸನ್ಮಾನಿಸಲಾಯಿತು. ಪ್ರಧಾನ ಕಾರ್ಯದರ್ಶಿ ಮೊಯಿನುಲ್ಲಾ ಅಬ್ಬಾಸಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಹಿರಿಯ ವಕೀಲರು ಹಾಗೂ ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷ ಬಿ.ಎ. ಮುಹಮ್ಮದ್ ಹನೀಫ್, ಮಾಜಿ ಜಿಲ್ಲಾ ವಕ್ಫ್ ಬೋರ್ಡ್ ಅಧ್ಯಕ್ಷ ಬಿ.ಎ. ಅಬ್ದುಲ್ ನಾಸಿರ್ ಲಕ್ಕಿ ಸ್ಟಾರ್, ಮಾಜಿ ಮೇಯರ್ ಅಶ್ರಫ್, ರಫೀಕ್ ಮಾಸ್ಟರ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದು ಅಭಿನಂದನಾ ಮಾತುಗಳನ್ನಾಡಿದರು.

ಸುಳ್ಯ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮುಸ್ತಫಾ ಸುಳ್ಯ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾ ಮುಸ್ಲಿಂ ಸೆಂಟ್ರಲ್ ಕಮಿಟಿ ಪ್ರಧಾನ ಕಾರ್ಯದರ್ಶಿ ಹನೀಫ್ ಹಾಜಿ, ಹಿದಾಯ ಫೌಂಡೇಶನ್ ಅಧ್ಯಕ್ಷ ಹನೀಫ್ ಹಾಜಿ ಗೋಳ್ತಮಜಲ್, ರಾಜಕೀಯ ಮುಖಂಡ ಶಾನವಾಝ್ ಕುಳೂರು, ಬಿ–ಹ್ಯೂಮನ್ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಇಮ್ರಾನ್ ಬಂದರ್, ಉಳ್ಳಾಲ ನಗರಸಭೆಯ ಮಾಜಿ ಸದಸ್ಯ ಯು.ಎಚ್. ಫಾರೂಕ್ ಉಳ್ಳಾಲ, ವಕ್ಫ್ ಬೋರ್ಡ್ ಮಾಜಿ ಉಪಾಧ್ಯಕ್ಷ ಫಕೀರಬ್ಬ ಮಾಸ್ಟರ್, ಜಮಾಲುದ್ದೀನ್, ಸೈದುದ್ದೀನ್ ಬೈಕಂಪಾಡಿ, ಓಸಿಯನ್ ಗ್ಲೋಬಲ್ ಸ್ಕೂಲ್ ಜೆಪ್ಪಿನಮೊಗೇರು ಸಂಚಾಲಕರು, ಜಮಿಯ್ಯತುಲ್ ಫಲಾಹ್ ಮುಖಂಡ ಅಬ್ಬಾಸ್ ಉಚ್ಚಿಲ್, ಕಾರುಣ್ಯ ಕೋ–ಆಪರೇಟಿವ್ ಸೊಸೈಟಿ ಸಿಇಒ ಕಾಸಿಂ, ಟ್ಯಾಲೆಂಟ್ ರಿಸರ್ಚ್ ಫೌಂಡೇಶನ್‌ನ ಹಮೀದ್ ಕಣ್ಣೂರ್, ಗಲ್ಫ್ ಉದ್ಯಮಿ ಕಬೀರ್ ಲಕ್ಕಿಸ್ಟಾರ್, ಬಿ–ಹ್ಯೂಮನ್ ಟ್ರಸ್ಟಿಗಳಾದ ಹಾಫೀಜ್ ಕಣ್ಣಂಗಾರ್ ಹಾಗೂ ಶಾಹುಲ್ ಹಮೀದ್ ಉಜಿರೆ, ಸಾಮಾಜಿಕ ಕಾರ್ಯಕರ್ತರಾದ ಉಮ್ಮರ್ ಕುಂಞಿ ಸಾಲೆತ್ತೂರ್ ಮತ್ತು ಹನೀಫ್ ತೋಡಾರ್ ಸೇರಿದಂತೆ ಜಿಲ್ಲೆಯ ಹಲವು ಹಿರಿಯ–ಕಿರಿಯ ವಕೀಲರು ಹಾಗೂ ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ಸಂಘಟನೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

- ಹಾಫೀಜ್ ಅಬ್ದುಲ್ ಮುಹೈಮೀನ್ ನದ್ವಿ ಕೆಂಪಿ ಖುರಾನ್ ಪಠಣದೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.
- ಸಮುದಾಯದಲ್ಲಿ ಕಾನೂನು ಜಾಗೃತಿ ಮೂಡಿಸುವುದು ಹಾಗೂ ವಕೀಲರ ಹಕ್ಕುಗಳ ರಕ್ಷಣೆಗೆ ಕರ್ನಾಟಕ ಮುಸ್ಲಿಂ ಅಡ್ವಕೇಟ್ಸ್ ಫೋರಂ ಬದ್ಧ

## ಸಮೃದ್ಧಿ ಹೌಸಿಂಗ್ ಸೊಸೈಟಿಯಲ್ಲಿ 80ನೇ ಸ್ವಾತಂತ್ರ್ಯೋತ್ಸವ ಆಚರಣೆ



**ತೊಕ್ಕೊಟ್ಟು:** ಗಣೇಶ ನಗರ, ತೊಕ್ಕೊಟ್ಟಿನ ಸಮೃದ್ಧಿ ಹೌಸಿಂಗ್ ಸೊಸೈಟಿ ವತಿಯಿಂದ ದೇಶದ 80ನೇ ಸ್ವಾತಂತ್ರ್ಯೋತ್ಸವ ಆಚರಿಸಲಾಯಿತು. ಸೊಸೈಟಿಯ ಗೌರವಾಧ್ಯಕ್ಷ ಕೆ.ಟಿ. ಸುವರ್ಣ ತ್ರಿವರ್ಣ ಧ್ವಜಾರೋಹಣ ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ದೇಶವನ್ನು ಬ್ರಿಟಿಷರ ಗುಲಾಮಗಿರಿಯಿಂದ ಮುಕ್ತಗೊಳಿಸಲು ಅಸಂಖ್ಯಾತ ದೇಶಪ್ರೇಮಿಗಳು ತಮ್ಮ ಪ್ರಾಣ ಬಲಿದಾನ ಮಾಡಿದ್ದಾರೆ. ಅವರ ತ್ಯಾಗದ ಫಲವಾಗಿ ದೊರೆತ ಸ್ವಾತಂತ್ರ್ಯವನ್ನು ಉಳಿಸಿ, ದೇಶದ ಹಿತ ಕಾಪಾಡುವುದು ಎಲ್ಲರ ಕರ್ತವ್ಯ ಎಂದರು.

ಕೋಶಾಧಿಕಾರಿ ರಾಜೇಶ್ ಕೆರೆಬೈಲು, ಉಪಾಧ್ಯಕ್ಷರಾದ ಬಾಲಕೃಷ್ಣ,ಸೂರ್ಯಪ್ರಕಾಶ್ ಪಕ್ಕಲ, ಅರುಣ್ ಕುಮಾರ್, ರವಿ, ಸುಚಿತ್ರಾ ಹಾಗೂ ಸದಸ್ಯರು ಉಪಸ್ಥಿತರಿದ್ದರು. ಪ್ರಧಾನ ಕಾರ್ಯದರ್ಶಿ ಜೀವನ್ ಕುಮಾರ್ ತೊಕ್ಕೊಟ್ಟು ಕಾರ್ಯಕ್ರಮ ನಿರೂಪಿಸಿದರು. ಬಳಿಕ ಸಿಹಿತಿಂಡಿ ಹಾಗೂ ಲಘು ಉಪಾಹಾರ ವಿತರಿಸಲಾಯಿತು.

## ಉತ್ಸವಗಳು ವ್ಯಕ್ತಿಯ ಮನಸ್ಸಿನ ಸಾಂಸ್ಕೃತಿಕ ಪ್ರಜ್ಞೆಯನ್ನು ಹೆಚ್ಚಿಸುತ್ತದೆ: ರವಿ ರೈ ಪಜೀರು



**ಹರೇಕಳ :** ಇಂದಿನ ಈ ಒತ್ತಡದ ಕಾಲ ಘಟ್ಟದಲ್ಲಿ ಮನಸ್ಸಿಗೆ ನೆಮ್ಮದಿಯನ್ನು, ಮುದವನ್ನು ನೀಡುವಲ್ಲಿ ಉತ್ಸವಗಳು, ಜಾತ್ರೆಗಳು ಸಹಕಾರಿಯಾಗುತ್ತದೆ. ಪ್ರತಿಯೊಬ್ಬರು ಕೂಡ ತಮ್ಮ ಜೀವನದಲ್ಲಿ ಉತ್ತಮ ಆರೋಗ್ಯವನ್ನು ಕಾಪಾಡಬೇಕಾದರೇ ಸಾಂಸ್ಕೃತಿಕ, ಕ್ರೀಡಾ, ರಂಗದಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳಬೇಕು. ಅದರೊಂದಿಗೆ ಧಾರ್ಮಿಕ ಆಚರಣೆಗಳು, ವಿಧಿ ವಿಧಾನಗಳನ್ನು ಕೂಡ ಅರಿತಿರಬೇಕು. ಇದರಿಂದ ಮುಂದಿನ ಪೀಳಿಗೆಗೂ ನಮ್ಮ ಸಂಸ್ಕಾರ ವನ್ನು ಕಲಿಸಿ ಕೊಟ್ಟಂತೆ ಆಗುತ್ತದೆ. ಮಾತ್ರವಲ್ಲದೇ ಮುದ್ದುಕೃಷ್ಣ ಸ್ಪರ್ಧೆಯನ್ನು ಆಯೋಜನೆ ಮಾಡುವುದರಿಂದ ಸಣ್ಣ ಪುಟಾಣಿಗಳು ಎಳವೆಯಲ್ಲೇ ಶ್ರೀಕೃಷ್ಣ ಪರಮಾತ್ಮನ ಆದರ್ಶವನ್ನು ಪಾಲನೆ ಮಾಡಲು ಪ್ರೇರಕವಾಗಿದೆ ಎಂದು ಶ್ರೀಕೃಷ್ಣ ಸಾಂಸ್ಕೃತಿಕ ಮಹೋತ್ಸವ ಸಮಿತಿಯ ಅಧ್ಯಕ್ಷರಾದ ರವಿ ರೈ ಪಜೀರು ಅಭಿಪ್ರಾಯ ಪಟ್ಟರು.

ಇವರು ಶ್ರುತಿ ಲಯ ಕಲಾ ಕೇಂದ್ರ ಕುತ್ತಾರು ಮತ್ತು ಶ್ರೀ ಕೃಷ್ಣ ಸಾಂಸ್ಕೃತಿಕ ಮಹೋತ್ಸವ ಸಮಿತಿ ವತಿಯಿಂದ ನಡೆಯಲಿರುವ ಕುತ್ತಾರು ಮುದ್ದುಕೃಷ್ಣ ಕಾರ್ಯಕ್ರಮದ ಆಮಂತ್ರಣ ಪತ್ರಿಕೆಯನ್ನು ಬಿಡುಗಡೆ ಗೊಳಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ಗೌರವ ಅಧ್ಯಕ್ಷರಾದ ಪ್ರಕಾಶ್ ಸಿಂಪೋನಿ, ಸಲಹೆಗಾರಾದ ನರೇಶ್ ಬಬ್ಬುಕಟ್ಟೆ, ಶ್ರುತಿ ಲಯ ಕಲಾ ಕೇಂದ್ರ ಕುತ್ತಾರು ಇದರ ಅಧ್ಯಕ್ಷ ಹರೀಶ್ ಕುಮಾರ್ ಕುತ್ತಾರ್, ಮಹಿಳಾ ಕಲಾ ಕೇಂದ್ರದ ಅಧ್ಯಕ್ಷರು ಶೋಭಾ ಶೆಟ್ಟಿ, ನಿರ್ದೇಶಕರಾದ ಭಾಸ್ಕರ್ ಕುತ್ತಾರ್ ,ಪ್ರಧಾನ ಕಾರ್ಯದರ್ಶಿ ತ್ಯಾಗಮ್ ಹರೇಕಳ, ಕೋಶಾಧಿಕಾರಿ ನವೀನ್ ಕುತ್ತಾರ್

ಉಪಾಧ್ಯಕ್ಷರುಗಳಾದ ಭೋಜಾನಂದ ಬಾಳೆಪುಣಿ, ಶಿವಕುಮಾರ್ ಟಿ ಹರೇಕಳ, ಶ್ರೀದೇವಿ ರೈ, ಭಾರತಿ ಶೆಟ್ಟಿ, ಚಂದ್ರಕಲಾ ಎಸ್, ಪೂಜಾ ಶೆಟ್ಟಿ, ನಾಗವೇಣಿ ಶೆಟ್ಟಿ, ರಶ್ಮಿ, ಸೋನಿ ರೈ, ಚಂದ್ರಕಲಾ ಶೆಟ್ಟಿ ಸಂಚಾಲಕರುಗಳಾದ ರಾಜೇಶ್ ಆಚಾರ್ಯ, ದೇವಿಪ್ರಸಾದ್ ರೈ ಜೊತೆ ಕಾರ್ಯದರ್ಶಿ ಅಭಿಷೇಕ್ ಬೇಕಲ್ ಮುಂತಾದವರು ಉಪಸ್ಥಿತರಿದ್ದರು.

## ಉಳ್ಳಾಲ ಝೋನ್: ಸಮಸ್ತ ಸೆಂಟಿನರಿ ಎಕ್ಸಿಕ್ಯೂಟಿವ್ ಕೌನ್ಸಿಲ್ ಅಸ್ತಿತ್ವಕ್ಕೆ

**ಉಳ್ಳಾಲ:** ಸಮಸ್ತ ಸೆಂಟಿನರಿ 100ನೇ ವರ್ಷಾಚರಣೆಯ ಅಂಗವಾಗಿ ಕರ್ನಾಟಕದಲ್ಲಿ ಹಲವಾರು ಯೋಜನೆಗಳನ್ನು ಹಾಕಿಕೊಳ್ಳಲಾಗಿದ್ದು, ಇದರ ಯಶಸ್ಸಿಗಾಗಿ ಉಳ್ಳಾಲ ರೆನ್ ಸಮಸ್ತ ಸೆಂಟಿನರಿ ಎಕ್ಸಿಕ್ಯೂಟಿವ್ ಕೌನ್ಸಿಲ್ ಅನ್ನು ಬುಧವಾರ ಉಳ್ಳಾಲ ದರ್ಗಾ ವಠಾರದ ಮದನಿ ಹಾಲ್‌ನಲ್ಲಿ ನಡೆದ ಸಭೆಯಲ್ಲಿ ರಚಿಸಲಾಯಿತು.

ರೆನ್ ವ್ಯಾಪ್ತಿಯ ಸುನ್ನಿ ಜಂಇಯ್ಯತುಲ್ ಉಲಮಾ, ಕರ್ನಾಟಕ ಮುಸ್ಲಿಮ್ ಜಮಾಅತ್, ಸುನ್ನಿ ಯುವಜನ ಸಂಘ, ಸುನ್ನಿ ಜಂಇಯ್ಯತುಲ್ ಮುಅಲ್ಲಿಮೀನ್, ಸುನ್ನಿ ಸ್ಟೂಡೆಂಟ್ಸ್ ಫೆಡರೇಶನ್ ಸಹಿತ ಸುನ್ನಿ ಸಂಘಟನೆಗಳ ಝೋನ್ ನಾಯಕರನ್ನು ಒಳಗೊಂಡ ಕೌನ್ಸಿಲ್ ರಚಿಸಲಾಗಿದೆ. ದ.ಕ.ವೆಸ್ಟ್ ಜಿಲ್ಲಾ ಸಮಿತಿಯ ಅಧ್ಯಕ್ಷ ಹಾಫಿಲ್ ಯಾಕೂಬ್ ಸಅದಿ ವಿಷಯ ಮಂಡಿಸಿದರು.

ಉಳ್ಳಾಲ ರೇಂಜ್ ಸುನ್ನಿ ಜಂಇಯ್ಯತುಲ್ ಮುಅಲ್ಲಿಮೀನ್ ಅಧ್ಯಕ್ಷ ಜಲಾಲುದ್ದೀನ್ ಮದನಿ ಸಭೆ ಉದ್ಘಾಟಿಸಿದರು. ಉಳ್ಳಾಲ ಸಯ್ಯಿದ್ ಮದನಿ ದರ್ಗಾ ಅಧ್ಯಕ್ಷ ಬಿ.ಜಿ. ಹನೀಫ್ ಹಾಜಿ ಉಳ್ಳಾಲ ಅದ–[…]ಕ್ಷತೆ ವಹಿಸಿದ್ದರು. ಉಳ್ಳಾಲ ಉಸ್ತುವಾರಿ ಹನೀಫ್ ಸಅದಿ ಬದ್ಯಾರ್ ಸ್ವಾಗತಿಸಿದರು. ಸಭೆಯಲ್ಲಿ ದೇರಳಕಟ್ಟೆ ಉಸ್ತುವಾರಿ ಎಂಕೆ–ಎಂ ಇಸ್ಮಾಯಿಲ್, ಜಿಲ್ಲಾ ಉಸ್ತುವಾರಿ ಕತ್ತರ್ ರಹೀಂ ಸಅದಿ, ಮುಡಿಪು ಉಸ್ತುವಾರಿ ಇಸ್ಮಾಯಿಲ್ ಮಾಸ್ಟರ್ ಉಪಸ್ಥಿತರಿದ್ದರು.



ಉಳ್ಳಾಲ ರೆನ್ ಎಕ್ಸಿಕ್ಯೂಟಿವ್ ಕೌನ್ಸಿಲ್ ಅಧ್ಯಕ್ಷರಾಗಿ ವಿ.ಎ. ಮುಹಮ್ಮದ್ ಸಖಾಫಿ ಉಳ್ಳಾಲ, ಜನರಲ್ ಕನ್ವಿನರ್ ಆಗಿ ಶರೀಫ್ ಮಂಚಿಲ, ಕೋಶಾಧಿಕಾರಿಯಾಗಿ ಬಿ.ಜಿ. ಹನೀಫ್ ಹಾಜಿ ಉಳ್ಳಾಲ ಉಪಾಧ್ಯಕ್ಷರಾಗಿ ಸಯ್ಯಿದ್ ಜಲಾಲುದ್ದೀನ್ ತಂಙಳ್, ಜಲಾಲುದ್ದೀನ್ ಮದನಿ, ವಿ.ಕೆ. ಅಬ್ದುರ್ರಹ್ಮಾನ್ ಸಖಾಫಿ ಮುಕ್ಕಚೇರಿ, ಕನ್ವೀನರುಗಳಾಗಿ ಖುಬೈಬ್ ತಂಙಳ್ ಉಳ್ಳಾಲ, ಬಶೀರ್ ಸಖಾಫಿ ಉಳ್ಳಾಲ, ಹಾಫಿಝ್ ಮುಈನ್ ರಝಾ ಅಮ್ಜದಿ ಆಯ್ಕೆಯಾದರು. ಸರ್ಕಲ್ ಉಸ್ತುವಾರಿಗಳಾಗಿ ನವಾಝ್ ಸಖಾಫಿ ಉಳ್ಳಾಲ (ತೊಕ್ಕೊಟ್ಟು), ಇರ್ಫಾನ್ ಫಾಳಿಲಿ ಅಲ್ ಹಿಕಮಿ (ಮಂಚಿಲ), ಇಸ್ಹಾಖ್ ಹಾಜಿ ಉಳ್ಳಾಲ (ಮೇಲಂಗಡಿ), ನಾಝಿಂ ಮುಕ್ಕಚೇರಿ (ಮುಕ್ಕಚೇರಿ), ಮುಸ್ತಫ ಮದನಿನಗರ (ಮದನಿನಗರ) ಆಯ್ಕೆಯಾದರು. ಸದಸ್ಯರಾಗಿ ಶಿಹಾಬುದ್ದೀನ್ ಕಾಮಿಲ್ ಸಖಾಫಿ ಉಳ್ಳಾಲ, ಅಶ್ರಫ್ ಹಾಜಿ ಉಳ್ಳಾಲ, ಮುನೀರ್ ಸಖಾಫಿ ಸಾಲೆತ್ತೂರು, ಅಬ್ದುಲ್ ಅಝೀಝ್ ಸಖಾಫಿ ಕೆ.ಸಿ. ರೋಡ್, ಮನ್ಸೂರ್ ಹಳೆಕೋಟೆ, ಇಬ್ರಾಹಿಂ ಹಿಮಮಿ, ಮುಸ್ತಫ ಕೆ.ಸಿ. ರೋಡ್, ಸೈಫಾನ್ ಅಳೇಕಲ ಆಯ್ಕೆಯಾದರು.

- ಸಮಸ್ತ ಸೆಂಟಿನರಿ 100ನೇ ವರ್ಷಾಚರಣೆಯ ಅಂಗವಾಗಿ ಕರ್ನಾಟಕದಲ್ಲಿ ಹಲವಾರು ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ.
- ಉಳ್ಳಾಲ ರೆನ್ ಸಮಸ್ತ ಸೆಂಟಿನರಿ ಎಕ್ಸಿಕ್ಯೂಟಿವ್ ಕೌನ್ಸಿಲ್ ಅನ್ನು ಉಳ್ಳಾಲ ದರ್ಗಾ ವಠಾರದ ಮದನಿ ಹಾಲ್‌ನಲ್ಲಿ ನಡೆದ ಸಭೆಯಲ್ಲಿ ರಚಿಸಲಾಯಿತು.
- ಸುನ್ನಿ ಸಂಘಟನೆಗಳ ಝೋನ್ ನಾಯಕರನ್ನು ಒಳಗೊಂಡ ಕೌನ್ಸಿಲ್ ರಚಿಸಲಾಗಿದೆ.

# ತೊಕ್ಕೊಟ್ಟು ಆಟಿಡೊಂಜಿ ಬಿರ್ವರೆ ಕೂಟದಲ್ಲಿ ರಾಣಿ ಅಬ್ಬಕ್ಕ ನೃತ್ಯರೂಪಕದ ಮೂಲಕ ಗಮನ ಸೆಳೆದ ಬ್ರಹ್ಮಶ್ರೀ ಬಿಲ್ಲವ ಮಹಿಳಾ ವೇದಿಕೆ



**ತೊಕ್ಕೊಟ್ಟು:** ಇಲ್ಲಿನ ಕಾಪಿಕಾಡಿನ ನಿರ್ವಿಕಲ್ಪ ಸಭಾಂಗಣದಲ್ಲಿ ಜರಗಿದ ಬ್ರಹ್ಮಶ್ರೀ ಬಿಲ್ಲವ ವೇದಿಕೆ (ರಿ.) ಹಾಗೂ ಮಹಿಳಾ ವೇದಿಕೆ, ಉಳ್ಳಾಲ ತಾಲೂಕು ಇವರ ಸಂಯುಕ್ತ ಆಶ್ರಯದಲ್ಲಿ ಆಟಿ–ಡೊಂಜಿ ಬಿರ್ವರೆ ಕೂಟ–2026ರ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಬ್ರಹ್ಮಶ್ರೀ ಬಿಲ್ಲವ ಮಹಿಳಾ ವೇದಿಕೆ, ತೊಕ್ಕೊಟ್ಟು – ಉಳ್ಳಾಲದ ಸದಸ್ಯೆಯರು ಪ್ರಸ್ತುತಪಡಿಸಿದ 'ರಾಣಿ ಅಬ್ಬಕ್ಕ' ನೃತ್ಯರೂಪಕ ಪ್ರೇಕ್ಷಕರ ಮನಸೂರೆಗೊಳ್ಳುವಲ್ಲಿ ಯಶಸ್ವಿಯಾಯಿತು. ದೇಶಭಕ್ತಿ, ಸಾಹಸ, ಮಹಿಳಾ ಶಕ್ತಿ ಹಾಗೂ ತುಳುನಾಡಿನ ಇತಿಹಾಸವನ್ನು ಜೀವಂತವಾಗಿ ಕಟ್ಟಿಕೊಟ್ಟ ಈ ನೃತ್ಯರೂಪಕ ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿ ಮೂಡಿಬಂದಿತು.

ಉಳ್ಳಾಲದ ವೀರವನಿತೆ ರಾಣಿ ಅಬ್ಬಕ್ಕಳ ಜೀವನಗಾಥೆಯನ್ನು ಅತ್ಯಂತ ಮನೋಜ್ಞವಾಗಿ ವೇದಿಕೆಯಲ್ಲಿ ಅನಾವರಣಗೊಳಿಸಲಾಯಿತು. ತನ್ನ ನಾಡಿನ ಸ್ವಾತಂತ್ರ್ಯ ಮತ್ತು ಸ್ವಾಭಿಮಾನಕ್ಕಾಗಿ ಯಾವುದೇ ರಾಜಿ ಮಾಡಿಕೊಳ್ಳದೆ, ಶತ್ರುಗಳ ವಿರುದ್ಧ ಎದೆಗುಂದದೆ ಹೋರಾಡಿದ ಅಬ್ಬಕ್ಕಳ ಧೈರ್ಯ, ದೃಢ ಸಂಕಲ್ಪ ಮತ್ತು ದೇಶಪ್ರೇಮವನ್ನು ಪ್ರತಿಯೊಂದು ದೃಶ್ಯದಲ್ಲೂ ಪರಿಣಾಮಕಾರಿಯಾಗಿ ಚಿತ್ರಿಸಲಾಯಿತು. ವಿಶೇಷವಾಗಿ, ಕಠಿಣ ಸಂದರ್ಭಗಳಲ್ಲಿಯೂ ಧೈರ್ಯ ಕಳೆದುಕೊಳ್ಳದೆ, ತನ್ನ ಪ್ರಜೆಗಳ ರಕ್ಷಣೆಗಾಗಿ ಪೋರ್ಚುಗೀಸರ ವಿರುದ್ಧ ಹೋರಾಡಿದ ರಾಣಿ ಅಬ್ಬಕ್ಕಳ ಶೌರ್ಯವನ್ನು ನೃತ್ಯ, ಅಭಿನಯ ಮತ್ತು ಸಂಗೀತದ ಮೂಲಕ ಅತ್ಯಂತ ಅರ್ಥಪೂರ್ಣವಾಗಿ ಮೂಡಿಸಲಾಯಿತು. ಯುದ್ಧದ ಸನ್ನಿವೇಶಗಳು, ಸ್ವಾತಂತ್ರ್ಯದ ಘೋಷಣೆ, ತಾಯ್ನಾಡಿನ ಮೇಲಿನ ಅಪಾರ ಪ್ರೀತಿ ಹಾಗೂ ಮಹಿಳೆಯೊಬ್ಬಳು ಸಮಾಜದ ನೇತೃತ್ವ ವಹಿಸಿ ಇತಿಹಾಸ ನಿರ್ಮಿಸಬಲ್ಲಳು ಎಂಬ ಸಂದೇಶ ಪ್ರೇಕ್ಷಕರಿಗೆ ತಲುಪುವಂತೆ ರೂಪಿಸಲಾಗಿತ್ತು.

ಮಹಿಳಾ ವೇದಿಕೆಯ ಸದಸ್ಯೆಯರು ತಾಳ, ಲಯ ಹಾಗೂ ಭಾವಾಭಿನಯದೊಂದಿಗೆ ನೀಡಿದ ನೃತ್ಯ ಪ್ರದರ್ಶನ ಎಲ್ಲರ ಪ್ರಶಂಸೆಗೆ ಪಾತ್ರವಾಯಿತು. ಪ್ರತಿಯೊಬ್ಬ ಕಲಾವಿದೆಯೂ ತನ್ನ ಪಾತ್ರಕ್ಕೆ ಜೀವ ತುಂಬಿದ ರೀತಿಯು ಪ್ರೇಕ್ಷಕರನ್ನು ಭಾವುಕರನ್ನಾಗಿಸಿತು. ರಾಣಿ ಅಬ್ಬಕ್ಕಳ ಪಾತ್ರಧಾರಿಯ ಅದ್ಭುತ ಅಭಿನಯ, ಯುದ್ಧದ ದೃಶ್ಯಗಳ ನಿರೂಪಣೆ ಮತ್ತು ಹಿನ್ನೆಲೆ ಸಂಗೀತ ನೃತ್ಯರೂಪಕದ ಮೆರುಗನ್ನು ಇನ್ನಷ್ಟು ಹೆಚ್ಚಿಸಿತು. ಮಹಿಳೆಯರ ಒಗ್ಗಟ್ಟು, ಆತ್ಮವಿಶ್ವಾಸ ಮತ್ತು ಕಲಾತ್ಮಕ ಪ್ರತಿಭೆಯನ್ನು ಅನಾವರಣಗೊಳಿಸಿದ ಬ್ರಹ್ಮಶ್ರೀ ಬಿಲ್ಲವ ಮಹಿಳಾ ವೇದಿಕೆ, ತೊಕ್ಕೊಟ್ಟು – ಉಳ್ಳಾಲದ ಈ ಅರ್ಥಪೂರ್ಣ ಪ್ರದರ್ಶನವು ಆಟಿಡೊಂಜಿ ಬಿರ್ವರೆ ಕೂಟದ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ವಿಶೇಷ ಮೆರುಗು ತಂದಿತು. ಮಹಿಳೆಯರ ಸಂಘಟಿತ ಶಕ್ತಿ, ಕಲಾನೈಪುಣ್ಯ ಮತ್ತು ಸಾಮಾಜಿಕ ಬದ್ಧತೆಯ ಪ್ರತೀಕವಾಗಿ ಮೂಡಿಬಂದ ಈ ನೃತ್ಯರೂಪಕ ಎಲ್ಲರಿಂದಲೂ ಭಾರೀ ಪ್ರಶಂಸೆಗೆ ಪಾತ್ರವಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಮಾತನಾಡಿ, ಮಕ್ಕಳಿಗೆ ನಮ್ಮ ಸಂಸ್ಕೃತಿ, ಸಂಪ್ರದಾಯ ಹಾಗೂ ಹಿಂದಿನ ತಲೆಮಾರಿನ ಜೀವನಶೈಲಿ ಮತ್ತು ವಾಸ್ತವ ಸಂಗತಿಗಳ ಕುರಿತು ಅರಿವು ಮೂಡಿಸುವ ಅಗತ್ಯವಿದೆ. ಈ ನಿಟ್ಟಿನಲ್ಲಿ 'ಆಟಿಡೊಂಜಿ ಕೂಟ'ದಂತಹ ಕಾರ್ಯಕ್ರಮಗಳು ಮಹತ್ವದ ಪಾತ್ರ ವಹಿಸುತ್ತವೆ.ಉಳ್ಳಾಲ ಭಾಗದಲ್ಲಿ ಜನಪ್ರತಿನಿಧಿಗಳಾಗಿ ಹೊರಹೊಮ್ಮಲು



ಸಾಕಷ್ಟು ವೇದಿಕೆ ಅಧ್ಯಕ್ಷರು ಶ್ರಮಪಟ್ಟಿರುವುದಾಗಿ ಅವರು ತಿಳಿಸಿದರು. ಇಂದಿನ ದಿನಗಳಲ್ಲಿ ಮಕ್ಕಳನ್ನು ಸಂಘ ಟನೆಗಳೊಂದಿಗೆ ಬೆಸೆದು ಬೆಳೆಸುವ ಕಾರ್ಯಗಳು ಕಡಿಮೆಯಾಗುತ್ತಿದ್ದು, ಹೆಚ್ಚಿನವರು ಸಾಮಾಜಿಕ ಜಾಲತಾಣಗಳನ್ನೇ ಅವಲಂಬಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಯುವಜನಾಂಗವನ್ನು ಇಂತಹ ಸಾಂಸ್ಕೃತಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಪ್ರೇರೇಪಿಸಿದರೆ 'ಆಟಿಡೊಂಜಿ ಕೂಟ' ಇನ್ನಷ್ಟು ಯಶಸ್ವಿಯಾಗಲಿದೆ. ಬ್ರಹ್ಮಶ್ರೀ ಬಿಲ್ಲವ ವೇದಿಕೆ ಸಮಾಜದಲ್ಲಿ ಜಾಗೃತಿ ಮೂಡಿಸುವುದರೊಂದಿಗೆ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಸಹಕಾರ ನೀಡುವ ಮಹತ್ವದ ಸಂಸ್ಥೆಯಾಗಿ ಬೆಳೆದಿದೆ ಎಂದರು.

ಹಿಂಗಾರ ಅರಳಿಸಿದ ಅಖಿಲ ಭಾರತ ಬಿಲ್ಲವರ ಯೂನಿಯನ್ ಮಹಿಳಾ ಅಧ್ಯಕ್ಷೆ ಸುಮಲತಾ ನವೀನ್ ಸುವರ್ಣ ಮಾತನಾಡಿ, ಮಹಿಳೆಯರ ಸಾಮರ್ಥ್ಯ ಮತ್ತು ನಾಯಕತ್ವವನ್ನು ಪ್ರದರ್ಶಿಸಲು ಇಂತಹ ವೇದಿಕೆಗಳು ಉತ್ತಮ ಅವಕಾಶವಾಗಿವೆ. ಸಮಾಜದಲ್ಲಿ ಸಂಘಟನೆಗಳು ಆರ್ಥಿಕ ಸದೃಢತೆ, ಮನೋಬಲ ಹಾಗೂ ಆತ್ಮವಿಶ್ವಾಸವನ್ನು ಬೆಳೆಸುವ ಕಾರ್ಯವನ್ನು ನಿರಂತರವಾಗಿ ಮಾಡುತ್ತಿವೆ. ಯಾವುದೇ ಸವಾಲಿನ ಪರಿಸ್ಥಿತಿ ಎದುರಾದರೂ ಅದನ್ನು ಧೈರ್ಯದಿಂದ ಎದುರಿಸುವ ಶಕ್ತಿ ಮಹಿಳೆಯರಲ್ಲಿ ಬೆಳೆಯಬೇಕು. ಮೊದಲು ಕುಟುಂಬವನ್ನು ಒಗ್ಗೂಡಿಸಿ, ನಂತರ ಸಮಾಜದ ಅಭಿವೃದ್ಧಿಗೆ ಕೈಜೋಡಿಸಬೇಕು ಎಂದು ಕರೆ ನೀಡಿದರು. ಬ್ರಹ್ಮಶ್ರೀ ಬಿಲ್ಲವ ವೇದಿಕೆ ಸಮಾಜದಲ್ಲಿ ಜಾಗೃತಿ ಮೂಡಿಸುವುದರೊಂದಿಗೆ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಸಹಕಾರ ನೀಡುವ ಮಹತ್ವದ ಸಂಸ್ಥೆಯಾಗಿ ಬೆಳೆದಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಬ್ರಹ್ಮಶ್ರೀ ಬಿಲ್ಲವ ವೇದಿಕೆ ಅಧ್ಯಕ್ಷ ಕೆ. ಟಿ ಸುವರ್ಣ ಮಾತನಾಡಿ, ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಬ್ರಹ್ಮಶ್ರೀ ಬಿಲ್ಲವ ವೇದಿಕೆ ನಿರಂತರವಾಗಿ ಸಮಾಜಮುಖಿ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಮಹತ್ವದ ಸಹಕಾರವನ್ನು ನೀಡುತ್ತಾ ಬಂದಿದೆ. ಉಳ್ಳಾಲ ತಾಲೂಕು ವ್ಯಾಪ್ತಿಯಲ್ಲಿಯೇ ವಿವಿಧ ಜನಪರ



ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮಹಿಳೆಯರ ಸಬಲೀಕರಣಕ್ಕೆ ವಿಶೇಷ ಆದ್ಯತೆ ನೀಡಲಾಗಿದೆ. ಮಹಿಳಾ ಸಂಘವು ಯಶಸ್ವಿಯಾಗಿ ಐದು ವರ್ಷಗಳನ್ನು ಪೂರೈಸಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಬಲಿಷ್ಠವಾಗಿ ಬೆಳೆಯಬೇಕಿದೆ. ಮಹಿಳೆಯರೆಲ್ಲರೂ ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಿದಾಗ ಸಮಾಜದಲ್ಲಿ ಉತ್ತಮ ವಾತಾವರಣ ನಿರ್ಮಾಣವಾಗುತ್ತದೆ ಹಾಗೂ ಪರಸ್ಪರ ಸಹಕಾರ ಮತ್ತು ಆತ್ಮವಿಶ್ವಾಸ ಹೆಚ್ಚುತ್ತದೆ. ಎಂದರು ತೊಕ್ಕೊಟ್ಟು ಬ್ರಹ್ಮಶ್ರೀ ಬಿಲ್ಲವ ವೇದಿಕೆಯ ಅಧ್ಯಕ್ಷರಾದ ಕೆ.ಟಿ.ಸುವರ್ಣ ಅಧ್ಯಕ್ಷತೆ ವಹಿಸಿದ್ದರು.

ಅಖಿಲ ಭಾರತ ಬಿಲ್ಲವ ಸಂಘದ ಮಹಿಳಾ ಸಮಿತಿ ಅಧ್ಯಕ್ಷರಾದ ಸುಮಲತಾ ಎನ್ ಸುವರ್ಣ, ಕಾಪಿಕಾಡು ಶ್ರೀ ಉಮಾಮಹೇಶ್ವರಿ



ಕ್ಷೇತ್ರದ ಆಡಳಿತ ಮೊಕ್ತೇಸರರಾದ ಎ.ಜೆ ಶೇಖರ್,ಮೊಕ್ತೇಸರರಾದ ದಿನೇಶ್ ಅತ್ತಾವರ, ಗೆಜ್ಜೆಗಿರಿ ನಂದನಬಿತ್ತಿಲು ಕ್ಷೇತ್ರದ ಟ್ರಸ್ಟಿ ಚಂದ್ರಶೇಖರ ಉಚ್ಚಿಲ್, ಉದ್ಯಮಿ ಬಿ.ಡಿ.ಗೋಪಾಲ್ ,ಕಿನ್ಯ ಶ್ರೀ ಮಲರಾಯ ಧೂಮಾವತಿ ಬಂಟ ದೈವಸ್ಥಾನದ ಆಡಳಿತ ಮೊಕ್ತೇಸರರಾದ ಬಾಬು ಶಾಸ್ತ ಕಿನ್ಯ, ಬ್ರಹ್ಮಶ್ರೀ ಬಿಲ್ಲವ ವೇದಿಕೆಯ ಕಾರ್ಯಾಧ್ಯಕ್ಷರಾದ ಸತೀಶ್ ಕರ್ಕೇರ,ಮಹಿಳಾ ಘಟಕದ ಅಧ್ಯಕ್ಷರಾದ ಗಂಗಾ ಆನಂದ್ ಅಸೈಗೋಳಿ, ಬಿಜೆಪಿ ಮಂಗಳೂರು ಮಂಡಲದ ನಿಕಟಪೂರ್ವ ಅಧ್ಯಕ್ಷರಾದ ಚಂದ್ರಹಾಸ್ ಪಂಡಿತ್ ಹೌಸ್, ಉಪಾಧ್ಯಕ್ಷ ಹರೀಶ್ ಮುಂಡೋಳಿ, ಕಾರ್ಯಾಧ್ಯಕ್ಷ ಸತೀಶ್ ಕರ್ಕೇರ, ದತ್ತು ಸಂಚಾಲಕ ಜೀವನ್ ಕುಮಾರ್, ಮಹಿಳಾ ಸಮಿತಿ ಅಧ್ಯಕ್ಷೆ ಗಂಗಾ ಆನಂದ್, ಪ್ರಧಾನ ಕಾರ್ಯದರ್ಶಿ ಆನಂದ ಅಸೈಗೋಳಿ, ಪ್ರಧಾನ ಸಂಘಟನಾ ಕಾರ್ಯದರ್ಶಿ ಹರೀಶ್ ಅಂಬ್ಲಮೊಗರು, ಕೋಶಾಧಿಕಾರಿ ಲಕ್ಷ್ಮಣ್ ಪೂಜಾರಿ, ಪ್ರಧಾನ ಕ್ರೀಡಾ ಕಾರ್ಯದರ್ಶಿ ರಾಜೇಶ್ ಕೆರೆಬೈಲು, ಮಹಿಳಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಸುರೇಖಾ ಹರೀಶ್, ಗೋಪಿನಾಥ್ ದೇರಳಕಟ್ಟೆ, ಭಗವಾನ್ ದಾಸ್ ತೊಕ್ಕೊಟ್ಟು, ಜಗದೀಶ್ ಕೆರೆಬೈಲು, ಆರ್ ಕೆ.ಉದಯ್, ರಾಕೇಶ್ ಬೈಪಾಸ್, ಸುರೇಶ್ ಪಾಂಡವರಕಲ್ಲು, ಪ್ರವೀಣ್ ನೆರಿಯ, ಮೋಹನ್ ಸೇವಂತಿಗುಡ್ಡೆ, ಸಂಪತ್ ಕುಕ್ಯಾನ್, ಜಯಂತ್ ಕಾಪಿಕಾಡ್, ಯಶವಂತ್ ಕಿನ್ಯ, ಲೋಕೇಶ್ ಮುಡಿಪು, ಪ್ರವೀಣ್ ಮಂಜನಾಡಿ, ಪ್ರಶಾಂತ್ ಕಾಪಿಕಾಡ್, ಪ್ರಶಾಂತ್ ಬಂಡಿಗುಡ್ಡೆ, ಸುಭಾಷ್ ಧರ್ಮನಗರ, ದಿವಾಕರ್ ಬಾಳೆಪುಣಿ, ಪಾರ್ಥಸಾರಥಿ, ಹರೀಶ್ ಪೂಜಾರಿ ಕೊಣಾಜೆ, ರಾಜೀವ್ ಬೆಳ್ಮ, ಮುರಳಿ ಕೊಣಾಜೆ, ಸುಮನ್ ಉಳ್ಳಾಲಬೈಲು, ಚಂದ್ರಹಾಸ್ ತಲಪಾಡಿ, ಶೇಖರ್ ಕೊಂಡೆವೂರು ಉಪಸ್ಥಿತರಿದ್ದರು. ಬ್ರಹ್ಮಶ್ರೀ ಬಿಲ್ಲವ ವೇದಿಕೆಯ ಪ್ರಧಾನ ಕಾರ್ಯದರ್ಶಿ ಆನಂದ ಅಸೈಗೋಳಿ ಸ್ವಾಗತಿಸಿದರು. ಭಗವಾನ್ ದಾಸ್ ತೊಕ್ಕೊಟ್ಟು ನಿರೂಪಿಸಿದರು.

## ಸಾರ್ವಜನಿಕರಿಂದ ಉತ್ತಮ ಸ್ಪಂದನೆ

ಆಟಿ ತಿಂಗಳ ವಿಶೇಷ ಅಂಗವಾಗಿ ವಿವಿಧ ಸಾಂಪ್ರದಾಯಿಕ ಖಾದ್ಯಗಳ ಉಣಬಡಿಕೆ ನಡೆಯಿತು. ಆಟಿ ತಿಂಗಳ ಸಂಪ್ರದಾಯವನ್ನು ಪರಿಚಯಿಸುವ ಉದ್ದೇಶದಿಂದ ಹಲವಾರು ಬಗೆಯ ಸಾಂಪ್ರದಾಯಿಕ ತಿಂಡಿ–ತಿನಿಸುಗಳನ್ನು ಸಿದ್ಧಪಡಿಸಿ ಭಾಗವಹಿಸಿದವರಿಗೆ ಉಣಬಡಿಸಲಾಯಿತು. ಈ ಸಂದರ್ಭದಲ್ಲಿ ಬಿಲ್ಲವ ವೇದಿಕೆ ಮಹಿಳಾ ಘಟಕ ತೊಕ್ಕೊಟ್ಟು ಉಳ್ಳಾಲ ವತಿಯಿಂದ ಸಾಂಸ್ಕೃತಿಕ ಹಾಗೂ ಸಂಗೀತ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು, ಸ್ಥಳೀಯ ಕಲಾವಿದರು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರು. ಸಾಂಪ್ರದಾಯಿಕ ಸಂಸ್ಕೃತಿ, ಆಹಾರ ಪದ್ಧತಿ ಮತ್ತು ಕಲೆಯನ್ನು ಒಂದೇ ವೇದಿಕೆಯಲ್ಲಿ ಪರಿಚಯಿಸಿದ ಈ ಕಾರ್ಯಕ್ರಮಕ್ಕೆ ಸಾರ್ವಜನಿಕರಿಂದ ಉತ್ತಮ ಸ್ಪಂದನೆ ವ್ಯಕ್ತವಾಯಿತು.

---



**ನಿಮ್ಮ ಪ್ರೀತಿಯ ಅಪ್ಪುಗೆಗೆ, ಅದರೊಂದಿಗೆ ಕೊಟ್ಟ ಅಕ್ಕರೆಗೆ, ಬೆರೆಸಿಕೊಟ್ಟ ಆತ್ಮವಿಶ್ವಾಸಕ್ಕೆ, ನೀವು ಕೊಟ್ಟ ದೃಢತೆಗೆ ನೀವು ನಡೆಸಿದ ದಾರಿಗೆ ನೀವು ತೋರಿಸಿಕೊಟ್ಟ ಹಾದಿಗೆ ನಿಮ್ಮ ಹೆಜ್ಜೆ ಗುರುತುಗಳಿಗೆ ನಿಮ್ಮ ಆದರ್ಶಕ್ಕೆ...**

## ಮೈ ಪಪ್ಪಾ...



**ಥ್ಯಾಂಕ್ಯು ಅಪ್ಪಾ**

ಯಾಕೋ ಗೊತ್ತಿಲ್ಲ ನಾನು ಕಷ್ಟಕ್ಕೆ ಸಿಕ್ಕಿದಾಗಲೆಲ್ಲ ನೆನಪಾಗೋದು ನೀವೇ ಬಹುಶ: ಅಂತಹ ಅದೆಷ್ಟೋ ಕಷ್ಟಗಳನ್ನು ದಾಟಿ ಬಂದು ನನ್ನನ್ನು ಬೆಳಸಿದವರು ನೀವು ನಾನು ಸಣ್ಣವಳಿದ್ದಾಗ ನಿಮ್ಮ ಕಷ್ಟಗಳೆಲ್ಲ ನನಗೆ ಅರ್ಥವಾಗುತ್ತಿರಲಿಲ್ಲ. ಏನೋನೋ ಬೇಕು ಎಂದು ಅನ್ನುತ್ತಿದ್ದೆ ತಂದು ಕೊಡದಿದ್ದರೆ ಗಲಾಟೆ ಮಾಡುತ್ತಿದ್ದೆ. ಆಗ ನೀವು ಏನೆಲ್ಲಾ ಕಷ್ಟ ಪಡುತಿದ್ರಿ ಎನ್ನುವುದರ ಅರ್ಥವಾಗುತ್ತಿರಲಿಲ್ಲ. ನಾನೀಗ ಕುಳಿತು ಯೋಚಿಸುತ್ತಿರುವ ಹೊತ್ತಿಗೆಷ್ಟೆ ನನಗೆ ಇದೆಲ್ಲ ಅರ್ಥವಾಗುತ್ತಿದೆ. ನನ್ನ ಅಪ್ಪನಾಗಲು ನೀವು ಎಷ್ಟೊಂದು ಕಷ್ಟ ಪಡುತಿದ್ರಿ ಅಂತ. ಹೌದು ಆ ಕಷ್ಟದ ಒಂದು ಬಿಂದುವೂ ನನಗೆ ಗೊತ್ತಾಗದಂತೆ ಮುಚ್ಚಿಟ್ಟೆ ನನಗೆ ಸಂತೋಷ ಮಾತ್ರ ಕೊಟ್ರೆ ನನಗೊಂದು ಬದುಕು ಕೊಟ್ರೆ.

**ಥ್ಯಾಂಕ್ಸ್ ಟು ಯೂ ಪಪ್ಪಾ**

ನಿಮ್ಗೊತ್ತಾ ಅಮ್ಮ ಎನ್ನುವುದು ಸತ್ಯ ಅಪ್ಪ ಎನ್ನುವುದು ನಂಬಿಕೆ ಅಂತಾರೆ ಅಂತಹುದೊಂದು ನಂಬಿಕೆಯನ್ನೇ ಆಧಾರವಾಗಿಟ್ಟುಕೊಂಡು ಪುಟ್ಟ ಮಗುವೊಂದನ್ನು ಮಗನಾಗಿ ಮಗಳಾಗಿ ಮುಗಿಲೆತ್ತರಕ್ಕೆ ಬೆಳೆಸುವ ಶ್ರದ್ಧಾವಂತ ಜೀವ ಅದುನೀವು ಅಪ್ಪ ಅಂದು ನನ್ನನ್ನು ಬೆಳೆಸಿದ ನೀವು ಇಂದು ನನ್ನ ಯಶಸ್ಸಿನೊಂದಿಗೆ ನೀವಿರುತ್ತಿದ್ದರೆ?.. ಒಬ್ಬ ವ್ಯಕ್ತಿಯ ಮೌಲ್ಯರ್ಥನವಾಗುವುದು ಅವರು ನಮ್ಮ ಜೊತೆ ಇಲ್ಲದಾಗ ಮಾತ್ರ. ಈಗ ರ್ಥನವಾಗುತ್ತಿದೆ?..ಬದುಕಿನಲ್ಲಿ ಎಂತಹ ವಜ್ರವನ್ನು ಅತೀ ಕಡಿಮೆ ಸಮಯದಲ್ಲಿ ಕಳೆದುಕೊಂಡೆ ಎಂದು? ಅದು ನೀವೇ ಪಪ್ಪಾ?. ಸ್ವಾರ್ಥವಿಲ್ಲದ ಬದುಕಿನೊಂದಿಗೆ ಎಲ್ಲವನ್ನು ಮಕ್ಕಳಿಗಾಗಿ ಸಮರ್ಪಿಸಿಕೊಂಡ ಬದುಕು ನಿಮ್ಮದು.

ಒಂಬತ್ತು ತಿಂಗಳ ಕಾಲ ಹೆತ್ತು ಹೊತ್ತು ಸಾಕಿ ಸಲಹಿ ಬದುಕು ಕಟ್ಟುವ ತ್ಯಾಗಜೀವಿ ಅಮ್ಮ. ಅಮ್ಮನ ಮಡಿಲ ನೆಮ್ಮದಿ ಅಪ್ಪುಗೆಯ ಆನಂದ ಎಲ್ಲವೂ ಅದ್ಭುತ.

ಜಗತ್ತಿನಲ್ಲಿ ತನಗಾಗಿ ಏನನ್ನು ಮಾಡದೇ ತನ್ನ ಮಕ್ಕಳಿಗಾಗಿಯೇ ಮಾಡುವ ಒಬ್ಬ ವ್ಯಕಿ ಇದ್ದರೆ ಅಪ್ಪ ಮಾತ್ರ. ವ್ಯಕ್ತಿಯೊಬ್ಬ ತನ್ನನ್ನು ಮೀರಿ ಬೆಳೆಯಲಿ ಎಂದು ಹೃದಯ ತುಂಬಿ ಹಾರೈಸುವ ವ್ಯಕ್ತಿಯೊಬ್ಬರಿದ್ದರೆ ಅದು ಅಪ್ಪ ಮಾತ್ರ.

ಎಲ್ಲಾದರೂ ಸುಖವಾಗಿ ಒಳ್ಳೆಯದಾಗಿರು ಎಂದು ಬಯಸುವ ಪಪ್ಪನಿಗೆ ನಾನು ಕೊಡುವ ಉಡುಗೊರೆ ಏನು ಗೊತ್ತ ನಿಮ್ಮ ಹೆಸರನ್ನು ಜಗತ್ತಿನಲ್ಲಿ ಶಾಶ್ವತವಾಗಿ ಉಳಿಸುವ ಕೆಲಸವನ್ನು ನಾನು ಮಾಡುತ್ತೇನೆ ಎಂದು ಹೇಳಲಾರೆ ಆದರೆ ಯಾವತ್ತು ನಿಮ್ಮ ಹೆಸರಿಗೆ ಕಳಂಕ ಉಂಟು ಮಾಡುವ ಕೆಲಸವನ್ನು ಮಾಡುವುದಿಲ್ಲ ಎನ್ನುವ ಭರವಸೆ ಮಾತ್ರ.



---

## ಚಿರಸ್ಮರಣೆ



**ಶ್ರೀ ವರದರಾಜ ಶೆಟ್ಟಿ ತುಂಬೆತ್ತೋಡಿ**

ನಿಧನ 06.8.2026

ಪಾತೂರು ಶ್ರೀ ಸೂರ್ಯೇಶ್ವರ ಮತ್ತು ಬಜಿಲಾಡಿ ಶ್ರೀ ಮಹಿಷಮರ್ದಿನಿ ಕ್ಷೇತ್ರ ಡೆವಲಪ್‌ಮೆಂಟ್ ಟ್ರಸ್ಟ್‌ನ ಮೊಕ್ತೇಸರರಾದ

# ಶ್ರೀ ವರದರಾಜ ಶೆಟ್ಟಿ ತುಂಬೆತ್ತೋಡಿ

(83 ವರ್ಷ)

ಅಗಲಿದ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತಾ, ಭಗವಂತನು ಅವರ ಅಗಲಿಕೆಯ ನೋವನ್ನು ಭರಿಸುವ ಶಕ್ತಿ ಕುಟುಂಬದವರಿಗೆ ನೀಡಲಿ ಎಂದು ಪ್ರಾರ್ಥಿಸುವ,

**ಪತ್ನಿ, ಇಬ್ಬರು ಪುತ್ರರು ಮತ್ತು ಸೊಸೆಯಂದಿರು, ನಾಲ್ವರು ಮೊಮ್ಮಕ್ಕಳು, ಕುಟುಂಬ ವರ್ಗ**

# ರಕ್ತ ಬೇಕಾದಾಗ ರೋಗಿ ಅಲೆದಾಡಬೇಕೇ? ಜಿಲ್ಲಾಡಳಿತದ ಜವಾಬ್ದಾರಿ ಎಲ್ಲಿದೆ? Mr. ಜಿಲ್ಲಾಧಿಕಾರಿ

ಒಬ್ಬ ವ್ಯಕ್ತಿ ಅಪಘಾತಕ್ಕೊಳಗಾಗಿದ್ದಾನೆ. ತುರ್ತು ಶಸ್ತ್ರಚಿಕಿತ್ಸೆ ಅಗತ್ಯವಿದೆ. ವೈದ್ಯರು ರಕ್ತ ಕೇಳುತ್ತಾರೆ. ಆದರೆ ಆಸ್ಪತ್ರೆಯಲ್ಲಿ ರಕ್ತವಿಲ್ಲ. ಕುಟುಂಬಸ್ಥರು ಒಂದು ಕಡೆ, ಮತ್ತೊಂದು ಕಡೆ ರಕ್ತದಾನಿಗಳಿಗಾಗಿ ಓಡಾಡುತ್ತಾರೆ. ಸಮಯ ಕಳೆಯುತ್ತದೆ. ಜೀವ ಉಳಿಸುವ ಹೋರಾಟದಲ್ಲಿ ಪ್ರತಿಯೊಂದು ನಿಮಿಷವೂ ಅಮೂಲ್ಯ. ಇಂತಹ ಸಂದರ್ಭದಲ್ಲಿ ಪ್ರಶ್ನೆ ಒಂದೇ? ರಕ್ತದ ತುರ್ತು ಲಭ್ಯತೆಯನ್ನು ಖಚಿತಪಡಿಸುವ ವ್ಯವಸ್ಥೆ ಯಾರ ಜವಾಬ್ದಾರಿ? ರಕ್ತದಾನ ಮಾಡಿ ಎಂದು ಜನರಿಗೆ ಮನವಿ ಮಾಡುವುದು ಸುಲಭ. ಜಾಗೃತಿ ಕಾರ್ಯಕ್ರಮ, ಬ್ಯಾನರ್, ಭಾಷಣ, ಫೋಟೋ? ಇವೆಲ್ಲವೂ ನಡೆಯುತ್ತವೆ. ಆದರೆ ನಿಜವಾದ ಪರೀಕ್ಷೆ ಎದುರಾಗುವುದು ತುರ್ತು ಸಂದರ್ಭದಲ್ಲಿ. ರೋಗಿಗೆ ಬೇಕಾದ ರಕ್ತದ ಗುಂಪು ತಕ್ಷಣ ಸಿಗುತ್ತದೆಯೇ? ಜಿಲ್ಲೆಯಲ್ಲಿ ರಕ್ತದ ಸಂಗ್ರಹದ ಸಮರ್ಪಕ ವ್ಯವಸ್ಥೆ ಇದೆಯೇ? ತುರ್ತು ಸಂದರ್ಭದಲ್ಲಿ ರಕ್ತಕೇಂದ್ರಗಳು, ಆಸ್ಪತ್ರೆಗಳು, ಜಿಲ್ಲಾಡಳಿತ ಮತ್ತು ರೆಡ್ ಕ್ರಾಸ್ ನಡುವೆ ತಕ್ಷಣ ಕಾರ್ಯನಿರ್ವಹಿಸುವ ಸಮನ್ವಯ ವ್ಯವಸ್ಥೆ ಇದೆಯೇ? ಜೀವ ಉಳಿಸುವ ರಕ್ತಕ್ಕಾಗಿ ರೋಗಿಯ ಕುಟುಂಬವೇ ವ್ಯವಸ್ಥೆಯ ಬಾಗಿಲು ತಟ್ಟಬೇಕಾದರೆ, ಆ ವ್ಯವಸ್ಥೆಯ ಅಗತ್ಯವೇನು? ಜಿಲ್ಲಾಧಿಕಾರಿ ಹಾಗೂ ಆರೋಗ್ಯ ಇಲಾಖೆ ಕೇವಲ ಸಭೆ ನಡೆಸಿ, ರಕ್ತದಾನ ಶಿಬಿರಗಳ ವರದಿ ಪಡೆದು ಕೈತೊಳೆದುಕೊಳ್ಳುವಂತಿಲ್ಲ.



ಜಿಲ್ಲೆಯಲ್ಲಿ ತುರ್ತು ರಕ್ತದ ಲಭ್ಯತೆ, ರಕ್ತಕೇಂದ್ರಗಳ ಸಮನ್ವಯ ಮತ್ತು ಅಪರೂಪದ ರಕ್ತದ ಗುಂಪುಗಳ ನಿರ್ವಹಣೆಗೆ ಪರಿಣಾಮಕಾರಿ ವ್ಯವಸ್ಥೆ ಇರುವುದನ್ನು ಖಚಿತಪಡಿಸುವ ಜವಾಬ್ದಾರಿ ಆಡಳಿತದ ಮೇಲಿದೆ. ರೆಡ್ ಕ್ರಾಸ್ ಸೇರಿದಂತೆ ಸಂಬಂಧಿತ ಸಂಸ್ಥೆಗಳು ರಕ್ತದಾನ ಮತ್ತು ರಕ್ತಸಂಗ್ರಹದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಆದರೆ ಜನರು ರಕ್ತದಾನ ಮಾಡುತ್ತಾರೆ ಎಂಬ ಕಾರಣಕ್ಕೆ ಸರ್ಕಾರದ ಜವಾಬ್ದಾರಿ ಮುಗಿಯುವುದಿಲ್ಲ. ರಕ್ತದಾನಿಯ ಕೈಯಿಂದ ರಕ್ತಕೇಂದ್ರಕ್ಕೆ, ಅಲ್ಲಿಂದ ತುರ್ತು ರೋಗಿಯ ಜೀವಕ್ಕೆ? ಈ ಸಂಪೂರ್ಣ ವ್ಯವಸ್ಥೆ ಸುಗಮವಾಗಿರುವುದೇ ಆಡಳಿತದ ನಿಜವಾದ ಸಾಮರ್ಥ್ಯದ ಅಳತೆ. ಇಲ್ಲಿ ಆರೋಗ್ಯ ಇಲಾಖೆಯನ್ನೂ ಪ್ರಶ್ನಿಸಲೇಬೇಕು. ಆರೋಗ್ಯ ಸಚಿವರು ಆರೋಗ್ಯಕರ ಆಡಳಿತದ ಮನಸ್ಥಿತಿ ಹೊಂದಿರಬೇಕು; ಜನರ ಆರೋಗ್ಯದ ಪ್ರಶ್ನೆಯಲ್ಲಿ ಅನಾರೋಗ್ಯಕರ ಮನಸ್ಥಿತಿ, ನಿರ್ಲಕ್ಷ್ಯ ಅಥವಾ ಅಸಂವೇದನಾಶೀಲತೆ ಇರಬಾರದು.

ಆರೋಗ್ಯವೆಂದರೆ ಕೇವಲ ಆಸ್ಪತ್ರೆ ಕಟ್ಟಡ, ಉದ್ಘಾಟನಾ ಸಮಾರಂಭ ಅಥವಾ ಪ್ರಚಾರದ ಕಾರ್ಯಕ್ರಮವಲ್ಲ. ಸಂಕಷ್ಟದ ಕ್ಷಣದಲ್ಲಿ ಒಬ್ಬ ಸಾಮಾನ್ಯ ನಾಗರಿಕನ ಜೀವ ಉಳಿಯುವಂತೆ ವ್ಯವಸ್ಥೆ ಕೆಲಸ ಮಾಡುವುದು ನಿಜವಾದ ಆರೋಗ್ಯ ಆಡಳಿತ. ರಕ್ತ ಬೇಕಾದಾಗ "ದಾನಿ ಹುಡುಕಿ" ಎಂದು ಹೇಳುವ ವ್ಯವಸ್ಥೆ ಬೇಡ; ರಕ್ತ ಬೇಕಾದಾಗ "ವ್ಯವಸ್ಥೆ ಸಿದ್ಧವಾಗಿದೆ" ಎಂದು ಹೇಳುವ ಆಡಳಿತ ಬೇಕು. ಒಂದು ಹನಿ ರಕ್ತ ಒಬ್ಬರ ಜೀವ ಉಳಿಸಬಹುದು. ಆ ಒಂದು ಹನಿಗಾಗಿ ಕುಟುಂಬಸ್ಥರು ಬೀದಿಬೀದಿ ಅಲೆದಾಡಬೇಕಾದ ಪರಿಸ್ಥಿತಿ ಮುಂದುವರಿದರೆ, ಪ್ರಶ್ನೆ ರಕ್ತದ ಕೊರತೆಯ ಬಗ್ಗೆ ಮಾತ್ರವಲ್ಲ? ಆಡಳಿತದ ಇಚ್ಛಾಶಕ್ತಿಯ ಕೊರತೆಯ ಬಗ್ಗೆಯೂ ಆಗಬೇಕು.

# ಸಾವನ್ನು ಸಂಭ್ರಮಿಸುವ ಸಂಸ್ಕೃತಿ: ಅಂತಹ ವ್ಯಕ್ತಿಗೆ ಇರುವ ಮಾನಸಿಕ ರೋಗದ ಬಗ್ಗೆ



ಸಾಮಾಜಿಕ ಜಾಲತಾಣಗಳಲ್ಲಿ ಯಾರಾದರೂ ವ್ಯಕ್ತಿಯ ಸಾವನ್ನು ಸಂಭ್ರಮಿಸುವ, ಹಾಸ್ಯ ಮಾಡುವ ಅಥವಾ ದ್ವೇಷವನ್ನು ಹರಡುವ ಅನೇಕ ಪೇಜ್‌ಗಳು ಮತ್ತು ಪೋಸ್ಟ್‌ಗಳು ಹೆಚ್ಚುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಮನೋವೈದ್ಯರು ಮತ್ತು ಮನೋವಿಜ್ಞಾನಿಗಳ ಪ್ರಕಾರ, ಇಂತಹ ವರ್ತನೆಗೆ ಸಹಾನುಭೂತಿಯ ಕೊರತೆ, ತೀವ್ರ ದ್ವೇಷ, ಗುಂಪಿನ ಮನೋಭಾವ (mob mentality), ವ್ಯಕ್ತಿಯನ್ನು ಮಾನವನಾಗಿ ನೋಡದೆ ಕೇವಲ ಶತ್ರುವಾಗಿ ನೋಡುವ ಪ್ರವೃತ್ತಿ ಹಾಗೂ ಸಾಮಾಜಿಕ ಮಾಧ್ಯಮಗಳಲ್ಲಿ ಗಮನ ಸೆಳೆಯುವ ಬಯಕೆ ಕಾರಣಗಳಾಗಿರಬಹುದು. ಆದರೆ, ಕೇವಲ ಇಂತಹ ಪೋಸ್ಟ್‌ಗಳನ್ನು ಮಾಡುವವರು ಮನೋರೋಗಿಗಳು ಇವರಿಂದ ದೂರ ಉಳಿಯಬೇಕು. ಜಾತಿ, ಧರ್ಮ, ರಾಜಕೀಯ ಅಥವಾ ಯಾವುದೇ ಗುರುತಿನ ಹೆಸರಿನಲ್ಲಿ ಸಾವನ್ನು ಸಂಭ್ರಮಿಸುವ ದ್ವೇಷಪೂರಿತ ಮನೋಭಾವ ಸಮಾಜಕ್ಕೆ ಅಪಾಯಕಾರಿ. ಇಂತಹ ದ್ವೇಷವನ್ನು ಪ್ರಚೋದಿಸುವ ಖಾತೆಗಳು, ಪೇಜ್‌ಗಳು ಮತ್ತು ಗುಂಪುಗಳನ್ನು ಸಮಾಜ ಖಂಡಿಸಬೇಕು. ಅವುಗಳನ್ನು ಉತ್ತೇಜಿಸದೆ, ಜವಾಬ್ದಾರಿಯುತವಾಗಿ ವರ್ತಿಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ. ಪೋಷಕರು ತಮ್ಮ ಮಕ್ಕಳಿಗೆ ಬಾಲ್ಯದಿಂದಲೇ ಮಾನವೀಯತೆ, ಸಹಾನುಭೂತಿ, ಭಿನ್ನಾಭಿಪ್ರಾಯವನ್ನು ಗೌರವಿಸುವ ಸಂಸ್ಕಾರ ಮತ್ತು ಸಾಮಾಜಿಕ ಹೊಣೆಗಾರಿಕೆಯನ್ನು ಮನೆ ಶಿಕ್ಷಣದ ಮೂಲಕ ಕಲಿಸಬೇಕು. ದ್ವೇಷವಲ್ಲ, ಮಾನವೀಯತೆಯೇ ನಿಜವಾದ ಮೌಲ್ಯ ಎಂಬುದನ್ನು ತಿಳಿಸಬೇಕು. ದ್ವೇಷ ಮನುಷ್ಯತ್ವವನ್ನು ಕೊಲ್ಲುತ್ತದೆ. ಪ್ರೀತಿ, ಸಹಾನುಭೂತಿ ಮತ್ತು ಮಾನವೀಯತೆಯೇ ಸಮಾಜವನ್ನು ಉಳಿಸುತ್ತದೆ.

## ವಿಜಯ ಗೇಮ್ ಟೀಮ್‌ನ ನೂತನ ಅಧ್ಯಕ್ಷರಾಗಿ ಮಾರ್ವಿನ್ ಡೇವಿಸ್ ಅವಿರೋಧ ಆಯ್ಕೆ

**ಉಳ್ಳಾಲ:** ಕುತ್ತಾರು, ಪಂಡಿತ್ ಹೌಸ್ ವಿಜಯ ಗೇಮ್ಸ್ ಟೀಮ್ ನ ನೂತನ ಅಧ್ಯಕ್ಷರಾಗಿ ಮಾರ್ವಿನ್ ಡೇವಿಸ್ ಅವಿರೋಧವಾಗಿ ಆಯ್ಕೆಗೊಂಡರು.



ಸಂಘದ ಕಚೇರಿಯಲ್ಲಿ ನಡೆದ ಮಹಾಸಭೆಯಲ್ಲಿ ಗೌರವ ಅಧ್ಯಕ್ಷರಾಗಿ ಚಂದ್ರಹಾಸ್ ಪಂಡಿತ್ ಹೌಸ್ ಅವರು ಮರು ಆಯ್ಕೆಯಾದರು.ಪ್ರಧಾನ ಕಾರ್ಯದರ್ಶಿಯಾಗಿ ಮನೋಹರ್ ಕಿರೋಡಿಯನ್,ಕೋಶಾಧಿಕಾರಿಯಾಗಿ ಭರತ್ ಶೆಟ್ಟಿ ಅವಿರೋಧವಾಗಿ ಆಯ್ಕೆಗೊಂಡರು.

ಧನರಾಜ್ ಪ್ರಸ್ತಾವಿಸಿ,ಸ್ವಾಗತಿಸಿದರು. ಕೋಶಾಧಿಕಾರಿ ಭರತ್ ಶೆಟ್ಟಿ ಲೆಕ್ಕಪತ್ರ ಮಂಡಿಸಿದರು.

## ಪೆರಾರ ಮುಂಡಬೆಟ್ಟುಗುತ್ತುವಿನ ತುಂಬೆತ್ತೋಡಿ ವರದರಾಜ ಎಸ್. ಶೆಟ್ಟಿ ನಿಧನ

**ಬಾಕ್ರಬೈಲು :** ಪೆರಾರ ಮುಂಡಬೆಟ್ಟುಗುತ್ತುವಿನ ತುಂಬೆತ್ತೋಡಿ ವರದರಾಜ ಎಸ್. ಶೆಟ್ಟಿ (83) ಅವರು ಆ.6 ರಂದು ಬಾಕ್ರಬೈಲಿನಲ್ಲಿರುವ ತಮ್ಮ ನಿವಾಸದಲ್ಲಿ ವಯೋಸಹಜ ಅನಾರೋಗ್ಯದಿಂದ ನಿಧನರಾದರು.



ಮೃತರು ಪತ್ನಿ, ಇಬ್ಬರು ಪುತ್ರರು, ಸೊಸೆಯಂದಿರು, ನಾಲ್ವರು ಮೊಮ್ಮಕ್ಕಳು ಹಾಗೂ ಅಪಾರ ಬಂಧು–ಬಳಗ ಮತ್ತು ಸ್ನೇಹಿತರನ್ನು ಅಗಲಿದ್ದಾರೆ. ಸುಮಾರು 50 ವರ್ಷಗಳ ಕಾಲ ಮುಂಬಯಿ, ಮಂಗಳೂರು ಹಾಗೂ ವಿದೇಶಗಳಲ್ಲಿ ವಿವಿಧ ಉದ್ಯೋಗಗಳಲ್ಲಿ ಸೇವೆ ಸಲ್ಲಿಸಿದ್ದ ಅವರು, ನಿವೃತ್ತಿಯ ಬಳಿಕ ಬಾಕ್ರಬೈಲಿನಲ್ಲಿ ಹವ್ಯಾಸಿ ಕೃಷಿಕರಾಗಿ ಜೀವನ ಸಾಗಿಸುತ್ತಿದ್ದರು.ಸಾಮಾಜಿಕ ಹಾಗೂ ಧಾರ್ಮಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಅವರು, ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ತಮ್ಮದೇ ಆದ ಕೊಡುಗೆ ನೀಡಿದ್ದರು. ಪಾತೂರು ಶ್ರೀ ಸೂರ್ಯೇಶ್ವರ ದೇವಸ್ಥಾನ ಹಾಗೂ ಬಜಿಲಾಡಿ ಶ್ರೀ ಮಹಿಷಮರ್ಧಿನಿ ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷರಾಗಿ ಹಲವು ವರ್ಷಗಳಿಂದ ಸೇವೆ ಸಲ್ಲಿಸಿದ್ದರು. ಅವರ ನಿಧನಕ್ಕೆ ಕುಟುಂಬಸ್ಥರು, ಸ್ನೇಹಿತರು ಹಾಗೂ ಸ್ಥಳೀಯ ಗಣ್ಯರು ಸಂತಾಪ ವ್ಯಕ್ತಪಡಿಸಿದ್ದಾರೆ.

# ಖಾಸಗಿ ಶಾಲೆಗಳ ಜಾಹಿರಾತುಗಳಲ್ಲಿ ಮಕ್ಕಳ ಅಂಕಗಳ ಫೋಟೋ ಪ್ರದರ್ಶನ ಬೇಡ, ಅವರ ಶಿಕ್ಷಣ ಭವಿಷ್ಯದ ರಕ್ಷಣೆ ಮುಖ್ಯ

# ಸರಕಾರದ ನಿರ್ದೇಶನಕ್ಕೆ ಪೋಷಕರ ಮೆಚ್ಚುಗೆ

ಶಿಕ್ಷಣದ ಉದ್ದೇಶ ಮಕ್ಕಳ ಜ್ಞಾನವನ್ನು ಬೆಳೆಸುವುದು; ಮಕ್ಕಳನ್ನು ಅಂಕಗಳ ಆಧಾರದ ಮೇಲೆ ಪ್ರದರ್ಶನದ ವಸ್ತುವನ್ನಾಗಿ ಮಾಡುವುದು ಅಲ್ಲ. ಆದರೆ ಇಂದು ಕೆಲವು ಖಾಸಗಿ ಶಾಲೆಗಳು ಹಾಗೂ ಶಿಕ್ಷಣ ಸಂಸ್ಥೆಗಳು ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳ ಭಾವಚಿತ್ರ, ಹೆಸರು ಮತ್ತು ಅಂಕಗಳನ್ನು ತಮ್ಮ ಶಾಲೆ, ಕೋಚಿಂಗ್ ಸೆಂಟರ್ ಹಾಗೂ ವಿವಿಧ ಶಿಕ್ಷಣ ಕಾರ್ಯಕ್ರಮಗಳ ಪ್ರಚಾರಕ್ಕೆ ಬಳಸುತ್ತಿರುವುದು ಗಂಭೀರವಾಗಿ ಚರ್ಚೆಯಾಗ ಬೇಕಾದ ವಿಷಯವಾಗಿದೆ.

ಒಬ್ಬ ವಿದ್ಯಾರ್ಥಿ ಅತ್ಯುತ್ತಮ ಅಂಕ ಪಡೆದಿದ್ದಾನೆ ಎಂಬುದು ಹೆಮ್ಮೆಯ ಸಂಗತಿ. ಆತನ ಸಾಧನೆಯನ್ನು ಅಭಿನಂದಿಸುವುದರಲ್ಲಿ ತಪ್ಪಿಲ್ಲ. ಆದರೆ ಆ ಸಾಧನೆಯನ್ನು ವ್ಯಾಪಾರಿಕ ಜಾಹೀರಾತಿನ ಭಾಗವನ್ನಾಗಿ ಮಾಡುವಾಗ ಮಗುವಿನ ಗೌಪ್ಯತೆ, ಘನತೆ ಮತ್ತು ಮಾನಸಿಕ ಭದ್ರತೆಯನ್ನು ಮೊದಲ ಆದ್ಯತೆಯಾಗಿ ಪರಿಗಣಿಸಬೇಕು. ವಿಶೇಷವಾಗಿ ಮಗುವಿನ ಫೋಟೋ, ಹೆಸರು, ಪಡೆದ ಅಂಕಗಳು ಹಾಗೂ ಇತರ ವೈಯಕ್ತಿಕ ಮಾಹಿತಿಯನ್ನು ಶಾಲೆಯ ಬ್ಯಾನರ್, ಬ್ರೋಚರ್, ಸಾಮಾಜಿಕ ಜಾಲತಾಣ, ವೆಬ್‌ಸೈಟ್ ಅಥವಾ ಜಾಹೀರಾತುಗಳಲ್ಲಿ ಬಳಸುವ ಮೊದಲು ಸೂಕ್ತವಾದ ಪೋಷಕರ ಹಾಗೂ ಅಗತ್ಯವಿರುವಲ್ಲಿ ವಿದ್ಯಾರ್ಥಿಯ ತಿಳಿದ ಒಪ್ಪಿಗೆಯನ್ನು ಪಡೆಯುವುದು ಅತ್ಯಂತ ಮುಖ್ಯ.

ಇದಕ್ಕೆ ವಿರುದ್ಧವಾಗಿ, "ಹೆಚ್ಚು ಅಂಕ ಪಡೆದವರೇ ನಮ್ಮ ಶಾಲೆಯ ಯಶಸ್ಸಿನ ಸಾಕ್ಷಿ" ಎಂಬ ರೀತಿಯಲ್ಲಿ ಮಕ್ಕಳನ್ನು ಜಾಹೀರಾತಿನ ಸಾಧನವನ್ನಾಗಿ ಬಳಸುವುದು ಶಿಕ್ಷಣದ ಮೂಲ ಉದ್ದೇಶವನ್ನೇ ಪ್ರಶ್ನಿಸುವಂತಾಗಿದೆ.

ಇದರ ಮತ್ತೊಂದು ಸೂಕ್ಷ್ಮ ಪರಿಣಾಮವನ್ನು ನಾವು ಮರೆಯಬಾರದು. ಹೆಚ್ಚು ಅಂಕ ಪಡೆದ ಕೆಲವೇ ಮಕ್ಕಳ ಫೋಟೋಗಳನ್ನು ದೊಡ್ಡದಾಗಿ ಪ್ರಕಟಿಸಿ, ಅವರ ಅಂಕಗಳನ್ನು ಸಾರ್ವಜನಿಕವಾಗಿ ಪ್ರದರ್ಶಿಸಿದಾಗ ಕಡಿಮೆ ಅಂಕ ಪಡೆದ ಮಕ್ಕಳು ತಮ್ಮನ್ನು ಇತರರೊಂದಿಗೆ ಹೋಲಿಸಿಕೊಳ್ಳುವ ಪರಿಸ್ಥಿತಿ ಎದುರಾಗಬಹುದು. "ನಾನು ಕಡಿಮೆ ಅಂಕ ಪಡೆದಿದ್ದೇನೆ", "ನಾನು ವಿಫಲನಾಗಿದ್ದೇನೆ" ಎಂಬ ಕೀಳರಿಮೆ, ಅವಮಾನ ಅಥವಾ ಮಾನಸಿಕ ಒತ್ತಡ ಅವರಲ್ಲಿ ಮೂಡಬಹುದು.




**ಶಿಕ್ಷಣ ಸಂಸ್ಥೆಗಳು ಮಕ್ಕಳಲ್ಲಿ ಆತ್ಮವಿಶ್ವಾಸ ಬೆಳೆಸಬೇಕು**

**ಸ್ಪರ್ಧೆಯ ಹೆಸರಿನಲ್ಲಿ ಕೀಳರಿಮೆ ಬೆಳೆಸಬಾರದು. ಹೆಚ್ಚು ಅಂಕ ಪಡೆದ ಮಗುವನ್ನು ಅಭಿನಂದಿಸುವಾಗ ಕಡಿಮೆ ಅಂಕ ಪಡೆದ ಮಗುವಿನ ಮನಸ್ಸಿಗೆ ನೋವಾಗದಂತೆ ನೋಡಿಕೊಳ್ಳುವುದು ಕೂಡ ಶಿಕ್ಷಣದ ಜವಾಬ್ದಾರಿಯೇ ಆಗಿದೆ.**

**ಶಿಕ್ಷಣ ಎನ್ನುವುದು ವ್ಯಾಪಾರ ಸೊತ್ತು ಅಲ್ಲ**

**ಅದು ಸಮಾಜದ ಭವಿಷ್ಯ ನಿರ್ಮಿಸುವ ಜವಾಬ್ದಾರಿ. ಮಕ್ಕಳ ಗೌಪ್ಯತೆ, ಘನತೆ ಮತ್ತು ಮಾನಸಿಕ ಸುರಕ್ಷತೆಯೊಂದಿಗೆ ಯಾವುದೇ ಶಿಕ್ಷಣ ಸಂಸ್ಥೆಯು ವ್ಯಾಪಾರ ಮಾಡಬಾರದು. ಮಕ್ಕಳನ್ನು ಜಾಹೀರಾತಿನ ಮುಖವನ್ನಾಗಿಸುವ ಮೊದಲು ಅವರ ಹಕ್ಕುಗಳನ್ನು ನೆನಪಿಸಿಕೊಳ್ಳಿ. ಅಂಕಗಳನ್ನು ಮಾರಾಟದ ಸಾಧನವನ್ನಾಗಿಸುವ ಮೊದಲು ಶಿಕ್ಷಣದ ಅರ್ಥವನ್ನು ನೆನಪಿಸಿಕೊಳ್ಳಿ.**

**ಪ್ರತಿಯೊಬ್ಬ ಮಗುವಿನ ಸಾಮರ್ಥ್ಯ ಒಂದೇ ರೀತಿಯಲ್ಲ. ಒಬ್ಬನ ಪ್ರತಿಭೆ ಅಂಕಗಳಲ್ಲಿ ಕಾಣಿಸಬಹುದು;** ಮತ್ತೊಬ್ಬನ ಪ್ರತಿಭೆ ಕ್ರೀಡೆ, ಕಲೆ, ವಿಜ್ಞಾನ, ತಂತ್ರಜ್ಞಾನ, ಭಾಷೆ, ನಾಯಕತ್ವ ಅಥವಾ ಸೃಜನಶೀಲತೆಯಲ್ಲಿ ಇರಬಹುದು. ಆದ್ದರಿಂದ ಅಂಕಗಳು ಮಗುವಿನ ಸಂಪೂರ್ಣ ವ್ಯಕ್ತಿತ್ವದ ಅಳತೆಗೋಲು ಅಲ್ಲ.

ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ದಿನಾಂಕ 06.07.2026ರಂದು ಹೊರಡಿಸಿರುವ ಪತ್ರದಲ್ಲಿ ಮಕ್ಕಳ ಫೋಟೋ, ಅಂಕಗಳು ಮತ್ತು ವೈಯಕ್ತಿಕ ಮಾಹಿತಿಗಳನ್ನು ಪೋಷಕರು ಹಾಗೂ ವಿದ್ಯಾರ್ಥಿಗಳ ಪೂರ್ವಾನುಮತಿಯಿಲ್ಲದೆ ಬ್ಯಾನರ್, ಬ್ರೋಚರ್, ಸಾಮಾಜಿಕ ಜಾಲತಾಣ, ವೆಬ್‌ಸೈಟ್ ಹಾಗೂ ಜಾಹೀರಾತುಗಳಲ್ಲಿ ಪ್ರಕಟಿಸುವ ವಿಚಾರದಲ್ಲಿ ಮಕ್ಕಳ ಖಾಸಗಿತನ ಮತ್ತು ವೈಯಕ್ತಿಕ ಮಾಹಿತಿಯ ರಕ್ಷಣೆಗೆ ಸೂಕ್ತ ನಿರ್ದೇಶನ ನೀಡುವ ಅಗತ್ಯವನ್ನು ಪ್ರಸ್ತಾಪಿಸಿರುವುದು ಗಮನಾರ್ಹವಾಗಿದೆ.

ಇದು ಕೇವಲ ಸರ್ಕಾರಿ ಪತ್ರವ್ಯವಹಾರವಾಗಿ ಉಳಿಯಬಾರದು. ರಾಜ್ಯದ ಪ್ರತಿಯೊಂದು ಶಾಲೆಯಲ್ಲೂ ಮಕ್ಕಳ ಗೌಪ್ಯತೆ ಮತ್ತು ಘನತೆಯನ್ನು ಕಾಪಾಡುವ ಸ್ಪಷ್ಟ ನಿಯಮ ಜಾರಿಯಾಗಬೇಕು. ಖಾಸಗಿ ಶಿಕ್ಷಣ ಸಂಸ್ಥೆಗಳು ಶಿಕ್ಷಣ ನೀಡುವ ಸಂಸ್ಥೆಗಳೇ ಹೊರತು ಮಕ್ಕಳನ್ನು ತಮ್ಮ ವ್ಯಾಪಾರಿಕ ಪ್ರಚಾರದ "ಬ್ರ್ಯಾಂಡ್ ಅಂಬಾಸಿಡರ್"ಗಳನ್ನಾಗಿ ಮಾಡುವ ಜಾಹೀರಾತು ಕಂಪನಿಗಳಲ್ಲ. ಶಾಲೆಯ ಫಲಿತಾಂಶ ಉತ್ತಮವಾಗಿದ್ದರೆ ಅದನ್ನು ಅಂಕಿ–ಅಂಶಗಳ ಮೂಲಕ ತಿಳಿಸಬಹುದು. ಆದರೆ ಮಕ್ಕಳ ಮುಖ, ಹೆಸರು ಮತ್ತು ವೈಯಕ್ತಿಕ ಮಾಹಿತಿಯನ್ನು ವ್ಯಾಪಾರಿಕ ಪ್ರಚಾರಕ್ಕೆ ಬಳಸುವ ಸಂದರ್ಭದಲ್ಲಿ ಕಟ್ಟುನಿಟ್ಟಿನ ನೈತಿಕ ಹಾಗೂ ಕಾನೂನುಬದ್ಧ ಮಾನದಂಡಗಳು ಇರಬೇಕು.

ಇಲ್ಲಿ ಸರ್ಕಾರದ ಜವಾಬ್ದಾರಿಯೂ ದೊಡ್ಡದು. ಶಿಕ್ಷಣ ಇಲಾಖೆ ಕೇವಲ ಸರ್ಕಾರಿ ಶಾಲೆಗಳತ್ತ ಮಾತ್ರ ಗಮನ ಹರಿಸದೆ, ಖಾಸಗಿ ಶಾಲೆಗಳು, ಕೋಚಿಂಗ್ ಸೆಂಟರ್‌ಗಳು ಮತ್ತು ಶಿಕ್ಷಣ ಸಂಸ್ಥೆಗಳು ಮಕ್ಕಳ ಮಾಹಿತಿಯನ್ನು ಹೇಗೆ ಬಳಸುತ್ತಿವೆ ಎಂಬುದರ ಮೇಲೂ ಪರಿಣಾಮಕಾರಿ ಮೇಲ್ವಿಚಾರಣೆ ನಡೆಸಬೇಕು. ಅನುಮತಿಯಿಲ್ಲದೆ ಮಕ್ಕಳ ವೈಯಕ್ತಿಕ ಮಾಹಿತಿಯನ್ನು ಬಳಸಿದರೆ ದೂರು ಸ್ವೀಕರಿಸುವ ವ್ಯವಸ್ಥೆ, ಪರಿಶೀಲನೆ ಮತ್ತು ಅಗತ್ಯ ಕ್ರಮಕ್ಕೆ ಸ್ಪಷ್ಟ ವ್ಯವಸ್ಥೆ ಇರಬೇಕು.

ಮಗುವಿನ ಫೋಟೋ ಒಂದು ಜಾಹೀರಾತಿನ ವಸ್ತುವಲ್ಲ. ಮಗುವಿನ ಅಂಕ ಒಂದು ವ್ಯಾಪಾರಿಕ ಸರಕಲ್ಲ. ಮಗುವಿನ ವೈಯಕ್ತಿಕ ಮಾಹಿತಿ ಶಾಲೆಯ ಸ್ವಂತ ಆಸ್ತಿ ಅಲ್ಲ.

# ಯುವತಿಯರೇ, ಬದುಕು ಅಂದರೆ ಸೋಲಿಗೆ ಶರಣಾಗುವುದು ಅಲ್ಲ

ಯುವತಿಯರೇ, ಬದುಕು ಅಂದರೆ ಮುಖಕ್ಕೆ ಹಚ್ಚುವ ಅಲಂಕಾರ, ತಳುಕು–ಬಳುಕು ಅಥವಾ ವೈಯ್ಯಾರ ಮಾತುಗಳಲ್ಲ. ನಿಮ್ಮ ಬದುಕು ನಿಮ್ಮ ತಂದೆ–ತಾಯಿಯರ ಕನಸು, ನಿಮ್ಮ ಸ್ವಾಭಿಮಾನ ಮತ್ತು ನಿಮ್ಮ ಭವಿಷ್ಯ. ನಿಮ್ಮ ಜೀವನದ ಮೌಲ್ಯವನ್ನು ಯಾವುದೇ ಕ್ಷಣಿಕ ನೋವು ಅಥವಾ ವೈಫಲ್ಯದಿಂದ ಅಳೆಯಬೇಡಿ.

ಪ್ರೀತಿ ಮತ್ತು ಪ್ರೇಮ ಮಾನವ ಜೀವನದ ಸಹಜ ಭಾವನೆಗಳು. ಆದರೆ ಅವುಗಳಲ್ಲೇ ಜೀವನ ಮುಗಿಯುವುದಿಲ್ಲ. ಭಾವನೆಗಳನ್ನು ಮೀರಿ ಧೈರ್ಯದಿಂದ ನಿಲ್ಲುವುದು, ಸಂಕಷ್ಟಗಳನ್ನು ಎದುರಿಸಿ ಮುಂದೆ ಸಾಗುವುದು ಮತ್ತು ಜೀವನವನ್ನು ಕಟ್ಟಿಕೊಳ್ಳುವುದೇ ನಿಜವಾದ ಗೆಲುವು.

ಪ್ರತಿಯೊಬ್ಬ ಯುವತಿಯೂ ಮಾನಸಿಕ ಆರೋಗ್ಯಕ್ಕೆ ಆದ್ಯತೆ ನೀಡಬೇಕು. ಆತ್ಮವಿಶ್ವಾಸ, ಧೈರ್ಯ, ಶ್ರದ್ಧೆ ಮತ್ತು ಮಾನಸಿಕ ಸ್ಥೈರ್ಯವೇ ಜೀವನದ ದೊಡ್ಡ ಸಂಪತ್ತು. ದೇವರಲ್ಲಿ ನಂಬಿಕೆ ಇರುವುದು ಒಳ್ಳೆಯದು; ಆದರೆ ನಿಮ್ಮ ಜೀವನವನ್ನು ಬದಲಾಯಿಸುವ ಶಕ್ತಿ ನಿಮ್ಮೊಳಗೇ ಇದೆ. ಅನೇಕ ಸಂದರ್ಭಗಳಲ್ಲಿ ನೀವೇ ನಿಮ್ಮ ಜೀವನದ ದೇವರಾಗಬೇಕು.



■ **ಮಾನಸಿಕ ಸ್ಥೈರ್ಯವನ್ನು ಗಟ್ಟಿಗೊಳಿಸಿ, ಸಾಮಾಜಿಕ ಒತ್ತಡಗಳು ಮತ್ತು ಸವಾಲುಗಳನ್ನು ಧೈರ್ಯದಿಂದ ಎದುರಿಸಿ.**

ಹೆಣ್ಣನ್ನು ಪ್ರಕೃತಿಗೆ ಮತ್ತು ಭೂಮಿಗೆ ಹೋಲಿಸಿರುವುದು ಆಕೆಯ ಸೃಜನಶೀಲತೆ, ಸಹನೆ ಮತ್ತು ಜೀವದಾಯಕ ಶಕ್ತಿಯ ಕಾರಣದಿಂದ. ಸಮಾಜವು ಮಹಿಳೆಗೆ ದೇವರಿಗಿಂತಲೂ ಶ್ರೇಷ್ಠ ಸ್ಥಾನ ನೀಡಿರುವುದು ಆಕೆಯ ಬದುಕಿನ ಮಹತ್ವವನ್ನು ಸಾರುತ್ತದೆ. ಆದ್ದರಿಂದ ನಿಮ್ಮ ಮಾನಸಿಕ ಸ್ಥೈರ್ಯವನ್ನು ಗಟ್ಟಿಗೊಳಿಸಿ, ಸಾಮಾಜಿಕ ಒತ್ತಡಗಳು ಮತ್ತು ಸವಾಲುಗಳನ್ನು ಧೈರ್ಯದಿಂದ ಎದುರಿಸಿ.

ಇತ್ತೀಚೆಗೆ ಉಡುಪಿಯ ಮಲ್ಪೆಯ ಕಲ್ಮಾಡಿಯ 27 ವರ್ಷದ ಮಾಡೆಲಿಂಗ್ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದ ಯುವತಿ ಕೃತಿ ಬಂಗೇರ ಅವರ ದುಃಖದ ಸಾವಿನ ಸುದ್ದಿ ಅನೇಕರನ್ನು ನೋವಿಗೆ ದೂಡಿದೆ. ಅವರ ಕುಟುಂಬ ಹಾಗೂ ಆಪ್ತರಿಗೆ ಇದು ತುಂಬಲಾರದ ನಷ್ಟ. ಇಂತಹ ಘಟನೆಗಳು ನಮ್ಮ ಸಮಾಜದಲ್ಲಿ ಮಾನಸಿಕ ಆರೋಗ್ಯದ ಬಗ್ಗೆ ಹೆಚ್ಚಿನ ಜಾಗೃತಿ, ಪರಸ್ಪರ ಬೆಂಬಲ ಮತ್ತು ಸಮಯೋಚಿತ ಸಹಾಯದ ಅಗತ್ಯವನ್ನು ನೆನಪಿಸುತ್ತವೆ.

ಆತ್ಮಹತ್ಯೆ ಯಾವುದೇ ಸಮಸ್ಯೆಗೆ ಪರಿಹಾರವಲ್ಲ. ಎಷ್ಟೇ ಕಠಿಣ ಪರಿಸ್ಥಿತಿ ಇದ್ದರೂ ಸಹಾಯ ಕೇಳುವುದು ದುರ್ಬಲತೆ ಅಲ್ಲ, ಧೈರ್ಯದ ಲಕ್ಷಣ. ಕುಟುಂಬದವರು, ಸ್ನೇಹಿತರು, ಶಿಕ್ಷಕರು ಅಥವಾ ವಿಶ್ವಾಸಾರ್ಹ ವ್ಯಕ್ತಿಗಳೊಂದಿಗೆ ಮಾತನಾಡಿ. ಪ್ರತಿಯೊಂದು ಸಮಸ್ಯೆಗೂ ಪರಿಹಾರವಿದೆ, ಬದುಕಿಗೆ ಯಾವಾಗಲೂ ಹೊಸ ಅವಕಾಶವಿದೆ.

# ಕೊಲೆ ಪ್ರಕರಣ ಆರೋಪಿ ದೋಷ ಮುಕ್ತ ಆದರೆ, ಪೊಲೀಸ್ ತನಿಖಾಧಿಕಾರಿ ಮತ್ತು ಸರ್ಕಾರಿ ಅಭಿಯೋಜಕರಿಗೂ ಕೊಂದವರು ಯಾರೂ? ಎನ್ನುವ ಉತ್ತರದಾಯಿತ್ವ ಇರಲಿ!

ಕೊಲೆ. ಒಂದು ಜೀವ ಅಂತ್ಯವಾಗುತ್ತದೆ. ಒಂದು ಕುಟುಂಬ ತನ್ನ ಆಪ್ತರನ್ನು ಕಳೆದುಕೊಳ್ಳುತ್ತದೆ. ನ್ಯಾಯಕ್ಕಾಗಿ ವರ್ಷಗಟ್ಟಲೆ ಕಾಯುತ್ತದೆ.

ಪೊಲೀಸರು FIR ದಾಖಲಿಸುತ್ತಾರೆ, ತನಿಖೆ ನಡೆಸುತ್ತಾರೆ, ಸಾಕ್ಷ್ಯ ಸಂಗ್ರಹಿಸುತ್ತಾರೆ, ಆರೋಪಿಗಳ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಸುತ್ತಾರೆ. ನಂತರ ಸರ್ಕಾರಿ ಅಭಿಯೋಜಕರು ಸರ್ಕಾರದ ಪರವಾಗಿ ನ್ಯಾಯಾಲಯದಲ್ಲಿ ಪ್ರಕರಣವನ್ನು ನಡೆಸುತ್ತಾರೆ.

ಇಷ್ಟೆಲ್ಲಾ ಪ್ರಕ್ರಿಯೆಯ ನಂತರ ಆರೋಪಿ ಸಾಕ್ಷ್ಯಾಭಾವದಿಂದ ಖುಲಾಸೆಯಾದರೆ ಪ್ರಕರಣ ಅಲ್ಲಿಗೇ ಮುಗಿಯಬೇಕೇ? ಖಂಡಿತವಾಗಿಯೂ ಇಲ್ಲ. ಆರೋಪಿ ಖುಲಾಸೆಯಾಗಿದ್ದಾನೆ ಎಂಬ ಒಂದೇ ಕಾರಣಕ್ಕೆ ತನಿಖಾಧಿಕಾರಿ ಅಥವಾ ಸರ್ಕಾರಿ ಅಭಿಯೋಜಕರೇ ತಪ್ಪಿತಸ್ಥರು ಎಂದು ತೀರ್ಮಾನಿಸುವುದು ನ್ಯಾಯವಲ್ಲ. ನ್ಯಾಯಾಲಯದ ತೀರ್ಪನ್ನು ಗೌರವಿಸಬೇಕು. ಆದರೆ ಖುಲಾಸೆಯ ಹಿಂದೆ ತನಿಖೆಯ ಗಂಭೀರ ಲೋಪವಿದೆಯೇ, ಸಾಕ್ಷ್ಯ ಸಂಗ್ರಹಣೆಯಲ್ಲಿ ವೈಫಲ್ಯವಾಗಿದೆಯೇ, ಪ್ರಮುಖ ಸಾಕ್ಷಿದಾರರನ್ನು ಸರಿಯಾಗಿ ವಿಚಾರಿಸಲಾಗಿದೆಯೇ, ವೈಜ್ಞಾನಿಕ ಸಾಕ್ಷ್ಯಗಳನ್ನು ನಿರ್ಲಕ್ಷಿಸಲಾಗಿದೆಯೇ, ಅಥವಾ ಪ್ರಾಸಿಕ್ಯೂಷನ್‌ನ ಕರ್ತವ್ಯಲೋಪದಿಂದ ಪ್ರಕರಣ ದುರ್ಬಲಗೊಂಡಿದೆಯೇ ಎಂಬ ಪ್ರಶ್ನೆಗಳನ್ನು ಕೇಳುವುದು ಸಾರ್ವಜನಿಕ ಹಕ್ಕು.

ಕೊಲೆ ಪ್ರಕರಣ ಸೋತರೆ ಕೇವಲ "ಸಾಕ್ಷ್ಯ ಇರಲಿಲ್ಲ" ಎಂದು ಕಡತ ಮುಚ್ಚುವ ಸಂಸ್ಕೃತಿ ಬದಲಾಗಬೇಕು. ತನಿಖಾಧಿಕಾರಿ ಅಪರಾಧ ನಡೆದ ಸ್ಥಳದಿಂದ ಲಭ್ಯವಿದ್ದ ಸಾಕ್ಷ್ಯಗಳನ್ನು ಸರಿಯಾಗಿ ಸಂಗ್ರಹಿಸಿದ್ದಾನೆಯೇ, ಪ್ರಮುಖ ಸಾಕ್ಷಿದಾರರನ್ನು ಸರಿಯಾಗಿ ವಿಚಾರಿಸಿದ್ದಾನೆಯೇ, ಅಅಖಿಗಿ ದೃಶ್ಯಗಳು, ಮೊಬೈಲ್ ಮತ್ತು ಇತರ ಡಿಜಿಟಲ್ ಸಾಕ್ಷ್ಯಗಳು, ವೈದ್ಯಕೀಯ ದಾಖಲೆಗಳು, FSL ವರದಿಗಳು ಸೇರಿದಂತೆ ಲಭ್ಯವಿದ್ದ ವೈಜ್ಞಾನಿಕ ಸಾಕ್ಷ್ಯಗಳನ್ನು ಸಮರ್ಪಕವಾಗಿ ತನಿಖೆಯಲ್ಲಿ ಅಳವಡಿಸಿದ್ದಾನೆಯೇ ಎಂಬುದನ್ನು ಪರಿಶೀಲಿಸಬೇಕು.

ತನಿಖೆಯಲ್ಲಿ ಗಂಭೀರ ನಿರ್ಲಕ್ಷ್ಯ ಅಥವಾ ಉದ್ದೇಶಪೂರ್ವಕ ಲೋಪ ನಡೆದಿದ್ದರೆ ಅದಕ್ಕೆ ಉತ್ತರದಾಯಿತ್ವ ನಿಗದಿಯಾಗಬೇಕು. ಅದೇ ರೀತಿ ಸರ್ಕಾರದ ಪರವಾಗಿ ನ್ಯಾಯಾಲಯದಲ್ಲಿ ಪ್ರಕರಣ ನಡೆಸುವ ಸರ್ಕಾರಿ ಅಭಿಯೋಜಕರ ಕಾರ್ಯವೈಖರಿಯನ್ನೂ ಅಗತ್ಯವಿದ್ದಲ್ಲಿ ಪರಿಶೀಲಿಸಬೇಕು. ಪ್ರಮುಖ ಸಾಕ್ಷಿದಾರರನ್ನು ಸಮರ್ಪಕವಾಗಿ ಪರೀಕ್ಷಿಸಲಾಯಿತೇ, ಲಭ್ಯವಿದ್ದ ದಾಖಲೆ ಮತ್ತು ಸಾಕ್ಷ್ಯಗಳನ್ನು ನ್ಯಾಯಾಲಯದ ಮುಂದೆ ಸರಿಯಾಗಿ ಮಂಡಿಸಲಾಯಿತೇ, ಪ್ರಕರಣದ ಪ್ರಮುಖ ಕಾನೂನು ಅಂಶಗಳನ್ನು ಸಮರ್ಥವಾಗಿ ಪ್ರತಿಪಾದಿಸಲಾಯಿತೇ, ಯಾವುದೇ ಗಂಭೀರ ನಿರ್ಲಕ್ಷ್ಯದಿಂದ ಸರ್ಕಾರದ ಪ್ರಕರಣ ದುರ್ಬಲಗೊಂಡಿತೇ ಎಂಬ ಪ್ರಶ್ನೆಗಳಿಗೆ ಉತ್ತರ ಬೇಕು.

ಆದರೆ ಇಲ್ಲಿ ಒಂದು ಮುಖ್ಯ ಕಾನೂನುಬದ್ಧ ಎಚ್ಚರಿಕೆ ಅಗತ್ಯ. ಪ್ರಕರಣ ಸೋತಿದೆ ಎಂಬ ಒಂದೇ ಕಾರಣಕ್ಕೆ ತನಿಖಾಧಿಕಾರಿ ಅಥವಾ ಸರ್ಕಾರಿ ಅಭಿಯೋಜಕರನ್ನು ತಪ್ಪಿತಸ್ಥರೆಂದು ಘೋಷಿಸುವಂತಿಲ್ಲ. ನ್ಯಾಯಾಲಯದ ತೀರ್ಪು ಸಾಕ್ಷ್ಯಗಳ ಮೌಲ್ಯಮಾಪನ ಮತ್ತು ಕಾನೂನಿನ ಮಾನದಂಡಗಳ ಮೇಲೆ ಆಧಾರಿತವಾಗಿರುತ್ತದೆ. ಆದ್ದರಿಂದ ಖುಲಾಸೆಯಾದ ಪ್ರತಿಯೊಂದು ಪ್ರಕರಣದಲ್ಲೂ ಅಧಿಕಾರಿಗಳ ವಿರುದ್ಧ ಕ್ರಮ ಎನ್ನುವುದು ಸರಿಯಾದ ವಿಧಾನವಲ್ಲ. ಆದರೆ ನ್ಯಾಯಾಲಯದ ತೀರ್ಪಿನಲ್ಲಿ ತನಿಖೆ ಅಥವಾ ಪ್ರಾಸಿಕ್ಯೂಷನ್‌ನ ಗಂಭೀರ ಲೋಪಗಳ ಕುರಿತು ಸ್ಪಷ್ಟವಾದ ಅಭಿಪ್ರಾಯ ವ್ಯಕ್ತವಾಗಿದ್ದರೆ ಅಥವಾ ದಾಖಲೆಗಳ ಪರಿಶೀಲನೆಯಲ್ಲಿ ಕರ್ತವ್ಯಲೋಪದ ಪ್ರಾಥಮಿಕ ಅಂಶಗಳು ಕಂಡುಬಂದರೆ, ಸ್ವತಂತ್ರ ಇಲಾಖಾ ಪರಿಶೀಲನೆ ನಡೆಯಲೇಬೇಕು. ಅಂತಹ ಸಂದರ್ಭಗಳಲ್ಲಿ ತನಿಖೆಯ ಗುಣಮಟ್ಟ ಮತ್ತು ಪ್ರಾಸಿಕ್ಯೂಷನ್‌ನ ಕಾರ್ಯವೈಖರಿಯನ್ನು ಪರಿಶೀಲಿಸಲು ನ್ಯಾಯಾಂಗ ಅನುಭವ ಹೊಂದಿರುವ ನಿವೃತ್ತ ಅಥವಾ ಸೂಕ್ತ ನ್ಯಾಯಾಧಿಕಾರಿ, ಹಿರಿಯ ಪೊಲೀಸ್ ಅಧಿಕಾರಿ, ಅನುಭವೀ ಹಿರಿಯ ವಕೀಲರು ಮತ್ತು ಅಗತ್ಯವಿದ್ದಲ್ಲಿ ಮಾನವ ಹಕ್ಕು ಕ್ಷೇತ್ರದ ಪ್ರತಿನಿಧಿಗಳನ್ನು ಒಳಗೊಂಡ ಸ್ವತಂತ್ರ ಸಮಿತಿಯನ್ನು ಸರ್ಕಾರ ಪರಿಗಣಿಸಬೇಕು.



ಈ ಸಮಿತಿಯ ಉದ್ದೇಶ ಯಾರನ್ನಾದರೂ ಬಲಿಪಶುವನ್ನಾಗಿಸುವುದಲ್ಲ; ಪ್ರಕರಣದ ವೈಫಲ್ಯಕ್ಕೆ ನಿಜವಾದ ಕಾರಣವೇನು ಎಂಬುದನ್ನು ಕಂಡುಹಿಡಿಯುವುದಾಗಿರಬೇಕು.

ಪ್ರಾಮಾಣಿಕವಾಗಿ ತನಿಖೆ ನಡೆಸಿದ ಅಧಿಕಾರಿಗೆ ಇಂತಹ ಪರಿಶೀಲನೆಯಿಂದ ಯಾವುದೇ ಭಯವಿರಬೇಕಾಗಿಲ್ಲ. ಸಮರ್ಪಕವಾಗಿ ಕರ್ತವ್ಯ ನಿರ್ವಹಿಸಿದ ಸರ್ಕಾರಿ ಅಭಿಯೋಜಕರಿಗೂ ಭಯಪಡುವ ಅಗತ್ಯವಿಲ್ಲ. ಆದರೆ ನಿರ್ಲಕ್ಷ್ಯ, ಉದ್ದೇಶಪೂರ್ವಕ ವೈಫಲ್ಯ ಅಥವಾ ಕರ್ತವ್ಯಲೋಪದಿಂದ ನ್ಯಾಯದ ಹಾದಿ ದುರ್ಬಲಗೊಂಡಿದ್ದರೆ, ಹುದ್ದೆ ರಕ್ಷಣಾ ಕವಚವಾಗಬಾರದು.

ಕರ್ತವ್ಯಲೋಪ ಸಾಬೀತಾದರೆ ಅನ್ವಯಿಸುವ ಸೇವಾ ನಿಯಮಗಳ ಪ್ರಕಾರ ಶಿಸ್ತು ಕ್ರಮ ಕೈಗೊಳ್ಳಬೇಕು. ಉದ್ದೇಶಪೂರ್ವಕವಾಗಿ ಸಾಕ್ಷ್ಯ ನಾಶಪಡಿಸುವುದು, ಸುಳ್ಳು ದಾಖಲೆ ಸೃಷ್ಟಿಸುವುದು ಅಥವಾ ಇತರ ಅಪರಾಧಾತ್ಮಕ ಅಕ್ರಮಗಳು ಕಂಡುಬಂದರೆ ಕಾನೂನು ಪ್ರಕಾರ ಪ್ರತ್ಯೇಕ ಕ್ರಮ ಕೈಗೊಳ್ಳಬೇಕು. ಇದರ ಜೊತೆಗೆ ಆರೋಪಿ ಖುಲಾಸೆಯಾದ ತೀರ್ಪಿನ ವಿರುದ್ಧ ಕಾನೂನುಬದ್ಧವಾಗಿ ಮೇಲ್ಮನವಿ ಸಲ್ಲಿಸಲು ಅವಕಾಶವಿದೆಯೇ ಎಂಬುದನ್ನೂ ಸರ್ಕಾರದ ಸಂಬಂಧಿತ ಕಾನೂನು ಅಧಿಕಾರಿಗಳು ಪರಿಶೀಲಿಸಬೇಕು. ಏಕೆಂದರೆ ಖುಲಾಸೆಯಾದ ಪ್ರತಿಯೊಂದು ಪ್ರಕರಣವೂ ತನಿಖಾಧಿಕಾರಿ ಅಥವಾ ಅಭಿಯೋಜಕರ ವೈಫಲ್ಯದಿಂದಲೇ ಸಂಭವಿಸಿದೆ ಎಂದು ಹೇಳಲಾಗುವುದಿಲ್ಲ.

ಕೆಲವು ಪ್ರಕರಣಗಳಲ್ಲಿ ಸಾಕ್ಷಿದಾರರು ಬದಲಾಗಬಹುದು, ಸಾಕ್ಷ್ಯಗಳ ಕಾನೂನುಬದ್ಧ ಸ್ವೀಕಾರಾರ್ಹತೆಯ ಸಮಸ್ಯೆ ಇರಬಹುದು ಅಥವಾ ನ್ಯಾಯಾಲಯವು ಸಾಕ್ಷ್ಯಗಳ ಮೌಲ್ಯಮಾಪನದ ಆಧಾರದ ಮೇಲೆ ಖುಲಾಸೆ ನೀಡಬಹುದು. ಆದ್ದರಿಂದ ಉತ್ತರದಾಯಿತ್ವವೂ ಸಾಕ್ಷ್ಯ ಮತ್ತು ದಾಖಲೆಗಳ ಆಧಾರದ ಮೇಲೆಯೇ ಇರಬೇಕು.

ಆದರೆ ಒಂದು ವಿಷಯದಲ್ಲಿ ರಾಜಿ ಇರಬಾರದು. ಒಬ್ಬ ನಿರಪರಾಧಿಗೆ ಶಿಕ್ಷೆಯಾಗಬಾರದು. ಅದೇ ಸಮಯದಲ್ಲಿ ತನಿಖೆಯ ವೈಫಲ್ಯದಿಂದ ನಿಜವಾದ ಅಪರಾಧಿ ಕಾನೂನಿನ ಹಿಡಿತದಿಂದ ತಪ್ಪಿಸಿಕೊಳ್ಳುವ ಪರಿಸ್ಥಿತಿಯೂ ಇರಬಾರದು. ಈ ಎರಡರ ನಡುವೆ ಸಮತೋಲನ ಸಾಧಿಸುವ ಜವಾಬ್ದಾರಿ ಕಾನೂನು ವ್ಯವಸ್ಥೆಯ ಮೇಲಿದೆ. ಜನರು ಕೇಳುವ ಪ್ರಶ್ನೆ ಸರಳವಾಗಿದೆ. ಕೊಲೆ ನಡೆದಾಗ ತನಿಖಾಧಿಕಾರಿಗೆ ಕರ್ತವ್ಯವಿದ್ದರೆ, ತನಿಖೆ ವಿಫಲವಾದಾಗ ಉತ್ತರದಾಯಿತ್ವ ಏಕೆ ಇರಬಾರದು?

ಸರ್ಕಾರದ ಪರವಾಗಿ ಪ್ರಕರಣ ನಡೆಸುವ ಅಭಿಯೋಜಕರಿಗೆ ಕರ್ತವ್ಯವಿದ್ದರೆ, ಗಂಭೀರ ಕರ್ತವ್ಯಲೋಪದ ಆರೋಪ ಬಂದಾಗ ಪರಿಶೀಲನೆ ಏಕೆ ಇರಬಾರದು? ಉತ್ತರದಾಯಿತ್ವ ಎಂದರೆ ಅಧಿಕಾರಿಗಳನ್ನು ಹೆದರಿಸುವುದು ಅಲ್ಲ. ಅದು ಅಧಿಕಾರದ ಜೊತೆಗೆ ಜವಾಬ್ದಾರಿಯನ್ನೂ ಜೋಡಿಸುವ ಪ್ರಜಾಪ್ರಭುತ್ವದ ವ್ಯವಸ್ಥೆ.

ಅಧಿಕಾರ ಇರುವಲ್ಲಿ ಉತ್ತರದಾಯಿತ್ವವೂ ಇರಬೇಕು. ಪ್ರಾಮಾಣಿಕ ಅಧಿಕಾರಿಗೆ ಪರಿಶೀಲನೆಯ ಭಯವಿರಬೇಕಾಗಿಲ್ಲ. ಆದರೆ ಕರ್ತವ್ಯಲೋಪದಿಂದ ನ್ಯಾಯದ ಹಾದಿ ದುರ್ಬಲಗೊಂಡಿದ್ದರೆ, ಹುದ್ದೆ ರಕ್ಷಣಾ ಕವಚವಾಗಬಾರದು. ಕೊಲೆ ಪ್ರಕರಣದ ಸೋಲನ್ನು ಕೇವಲ ಒಂದು ನ್ಯಾಯಾಲಯದ ತೀರ್ಪಾಗಿ ನೋಡಬಾರದು. ಅದರ ಹಿಂದೆ ಒಬ್ಬ ಮೃತ ವ್ಯಕ್ತಿಯ ಕುಟುಂಬದ ಕಣ್ಣೀರು, ವರ್ಷಗಳ ನಿರೀಕ್ಷೆ ಮತ್ತು ನ್ಯಾಯದ ಮೇಲಿನ ನಂಬಿಕೆ ಇರುತ್ತದೆ. ಆದ್ದರಿಂದ ಗಂಭೀರ ಕ್ರಿಮಿನಲ್ ಪ್ರಕರಣದಲ್ಲಿ ಆರೋಪಿ ಖುಲಾಸೆಯಾದಾಗ, ಅಗತ್ಯವಿರುವ ಪ್ರಕರಣಗಳಲ್ಲಿ ಖುಲಾಸೆಯ ಕಾರಣಗಳನ್ನು ಪರಿಶೀಲಿಸಬೇಕು, ತನಿಖೆಯ ಗುಣಮಟ್ಟವನ್ನು ಪರಿಶೀಲಿಸಬೇಕು, ಪ್ರಾಸಿಕ್ಯೂಷನ್‌ನ ಕಾರ್ಯವೈಖರಿಯನ್ನು ಪರಿಶೀಲಿಸಬೇಕು ಮತ್ತು ಕರ್ತವ್ಯಲೋಪ ಕಂಡುಬಂದರೆ ಉತ್ತರದಾಯಿತ್ವ ನಿಗದಿಪಡಿಸಬೇಕು. ಇದು ಪ್ರತೀಕಾರವಲ್ಲ.

ಇದು ನ್ಯಾಯಾಂಗದ ಮೇಲೆ ಒತ್ತಡವಲ್ಲ. ಇದು ಪೊಲೀಸರ ವಿರುದ್ಧದ ದಾಳಿಯಲ್ಲ. ಇದು Rule of Lawನ ಮೂಲತತ್ವ. ನ್ಯಾಯದ ಹಾದಿಯಲ್ಲಿ ಅಧಿಕಾರ ಹೊಂದಿರುವ ಪ್ರತಿಯೊಬ್ಬರೂ ತಮ್ಮ ಕರ್ತವ್ಯಕ್ಕೆ ಉತ್ತರಿಸಬೇಕೆಂಬ ಸರಳ ಪ್ರಜಾಪ್ರಭುತ್ವದ ಬೇಡಿಕೆ. ಕೊಲೆ ಪ್ರಕರಣ ಸೋತಾಗ ಪ್ರಶ್ನೆ ಕೇವಲ "ಆರೋಪಿ ಏಕೆ ಖುಲಾಸೆಯಾದ?" ಎಂಬುದಾಗಿರಬಾರದು. ಅದರ ಜೊತೆಗೆ "ತನಿಖೆ ತನ್ನ ಕರ್ತವ್ಯವನ್ನು ಸಮರ್ಪಕವಾಗಿ ನಿರ್ವಹಿಸಿತೇ?", "ಪ್ರಾಸಿಕ್ಯೂಷನ್ ತನ್ನ ಕರ್ತವ್ಯವನ್ನು ಸಮರ್ಪಕವಾಗಿ ನಿರ್ವಹಿಸಿತೇ?", "ಪ್ರಕರಣದ ವೈಫಲ್ಯಕ್ಕೆ ಕಾರಣವೇನು?", "ಕರ್ತವ್ಯಲೋಪವಿದ್ದರೆ ಅದಕ್ಕೆ ಯಾರು ಹೊಣೆ?" ಎಂಬ ಪ್ರಶ್ನೆಗಳೂ ಕೇಳಲೇಬೇಕು.

ನ್ಯಾಯ ಗೆಲ್ಲಬೇಕಾದರೆ ತಪ್ಪಿತಸ್ಥನಿಗೆ ಶಿಕ್ಷೆ ದೊರೆಯುವುದು ಮಾತ್ರ ಸಾಕಾಗುವುದಿಲ್ಲ. ನ್ಯಾಯದ ಹಾದಿಯಲ್ಲಿ ಕರ್ತವ್ಯ ನಿರ್ವಹಿಸುವ ಪ್ರತಿಯೊಬ್ಬರೂ ತಮ್ಮ ಕರ್ತವ್ಯಕ್ಕೆ ಉತ್ತರಿಸಬೇಕಾದ ವ್ಯವಸ್ಥೆಯೂ ಬೇಕು. ಕೊಲೆ ಪ್ರಕರಣ ಸೋತರೆ ಕಡತ ಮುಚ್ಚಬೇಡಿ. ಕಾರಣ ಹುಡುಕಿ. ತನಿಖೆ ಪರಿಶೀಲಿಸಿ. ಪ್ರಾಸಿಕ್ಯೂಷನ್ ಪರಿಶೀಲಿಸಿ. ಕರ್ತವ್ಯಲೋಪ ಸಾಬೀತಾದರೆ ಉತ್ತರದಾಯಿತ್ವ ನಿಗದಿಪಡಿಸಿ. ನ್ಯಾಯಕ್ಕೆ ಕೇವಲ ತೀರ್ಪು ಸಾಕಾಗುವುದಿಲ್ಲ; ನ್ಯಾಯದ ಹಾದಿಯಲ್ಲಿನ ಪ್ರತಿಯೊಂದು ಕರ್ತವ್ಯಕ್ಕೂ ಉತ್ತರದಾಯಿತ್ವ ಬೇಕು.



HEARTFELT

Congratulations

# H.E. PANAKKAD SAYYID NASIR ABDUL HAYY SHIHABUDDIN THANGAL BA-ALAVI

on assuming office as **the New Khazi of Dakshina Kannada District.**
**Yenepoya Group** extends its warmest congratulations and best wishes on this significant occasion.
May your tenure be marked by wisdom, compassion, peace and dedicated service, strengthening harmony, unity and mutual respect across the community.
We wish you a meaningful and successful journey of spiritual guidance, social service and leadership.

**With Best Wishes**

## YENEPOYA GROUP

Committed to Excellence
• Serving Society • Inspiring Progress





## ಹೃತ್ಪೂರ್ವಕ ಅಭಿನಂದನೆಗಳು

ದಕ್ಷಿಣ ಕನ್ನಡ ಜಿಲ್ಲಾ ನೂತನ ಖಾಝಿಯಾಗಿ ಅಧಿಕಾರ ಸ್ವೀಕರಿಸಿದ

# ಪಾಣಕ್ಕಾಡ್ ಸಯ್ಯದ್ ನಾಸಿರ್ ಅಬ್ದುಲ್ ಹಯ್ಯ್ ಶಿಹಾಬುದ್ದೀನ್ ತಂಙಳ್ ಬಾಅಲವಿ

ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು. ಧಾರ್ಮಿಕ ಜ್ಞಾನ, ಆಧ್ಯಾತ್ಮಿಕ ಚಿಂತನೆ ಹಾಗೂ ಸಮಾಜದ ಸೌಹಾರ್ದತೆಯ ಪ್ರತೀಕವಾಗಿ, ಜಿಲ್ಲೆಯ ಜನತೆಯ ನಡುವೆ ಪ್ರೀತಿ, ವಿಶ್ವಾಸ, ಶಾಂತಿ ಮತ್ತು ಸಹಬಾಳ್ವೆಯನ್ನು ಮತ್ತಷ್ಟು ಬಲಪಡಿಸುವ ನಿಮ್ಮ ಸೇವಾ ಪಯಣ ಯಶಸ್ವಿಯಾಗಲಿ. ನೂತನ ಜವಾಬ್ದಾರಿಯು ಸಮಾಜಕ್ಕೆ ಒಳಿತನ್ನು, ಸಮುದಾಯಕ್ಕೆ ಮಾರ್ಗದರ್ಶನವನ್ನು ಹಾಗೂ ಎಲ್ಲರಿಗೂ ನೆಮ್ಮದಿಯನ್ನು ನೀಡುವಂತಾಗಲಿ ಎಂದು ಹಾರೈಸುತ್ತೇವೆ.

**ಶುಭಕೋರುವವರು**



**ಹಸನ್ ಅಬ್ದುಲ್ ರೆಹಮಾನ್ ಬೆಂಗ್ರೆ**
ಜನರಲ್ ಸೆಕ್ರೆಟರಿ, ಮಂಗಳೂರು ರೇಂಜ್, ಮದರಸ ಮ್ಯಾನೇಜ್ಮೆಂಟ್ ಅಸೋಸಿಯೇಷನ್



**ಪಕೀರಬ್ಬ**
ಮಾಸ್ಟರ್ ಫ್ಲವರ್ಸ್
ಎಸ್‌ಎಂಎಸ್ ಮಹಲ್ ಬಿಲ್ಡಿಂಗ್ ಕೆ.ಎಸ್.ರಾವ್ ರಸ್ತೆ, ಮಂಗಳೂರು

**ಹಾಜಿ ಆದಂ ಹುಸೈನ್**
ಮುಸ್ಲಿಂ ಲೀಗ್ ಹಿರಿಯ ನಾಯಕ

**ಅಬ್ದುಲ್ ರೆಹಮಾನ್**
ಅಧ್ಯಕ್ಷರು, ದ.ಕ ಜಿಲ್ಲಾ ಮುಸ್ಲಿಂ ಲೀಗ್

**ರಿಯಾಝ್ ಹರೇಕಳ**
ಹಾಗೂ
**ಮೊಹಮ್ಮದ್ ಇಸ್ಮಾಯಿಲ್**



**ಝೀನತ್ ಸಂಶುದ್ದೀನ್**
ಮಾಜಿ ಕಾರ್ಪೊರೇಟರ್, ಮಂಗಳೂರು ಮಹಾನಗರ ಪಾಲಿಕೆ, ಬಂದರು ವಾರ್ಡ್



**ಅಬೂಬಕರ್ ಅಶ್ರಫ್**
ಅಧ್ಯಕ್ಷರು, ಬೆಂಗ್ರೆ ವಾರ್ಡ್ ಕಾಂಗ್ರೆಸ್ ಸಮಿತಿ


Ullalavani, Published by Ravi Bangera, Printed at DIGANTA MUDRANA LTD 5-184/185 NEAR INDUSTRIAL AREA YEYYADI MANGALARE, DAKSHINA KANNADA, KARNATAKA - 575008. News Editor: Mohan Kuthar.
Editorial Office at : Appachi Complex, Kuthar, Munnur Post, Someshwar Village, Ullal Tq - 575 017, Call : 9972528110. RNI:KNKAN/26/A0422. Email: ullalavani@gmail.com